
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 45 ನವೆಂಬರ್ 7, 2004 ಬೆಲೆ ರೂ. 3.00





ಬೀಡಿ ಕಾರ್ಮಿಕರ ಆಂದೋಲನ : ಹೊಸ ಸವಾಲುಗಳು

ಬಾಬಾಬುಡನ್‌ಗಿರಿ : ಪ್ರತಿಗಾಮಿಗಳ ಆಟ ನಡೆಯಗೊಡೋಲ್ಲ

- ಕಮ್ಯುನಿಸ್ಟ್ ಪಕ್ಷಗಳಿಗೆ ಮುಖ್ಯಮಂತ್ರಿ ಭರವಸೆ





ಅಡ್ವಾಣಿ : ಭವಿಷ್ಯದ ಬೆದರಿಕೆ



ಅಂಜುದೀವ್ ಮೇಲೀಗ ಖಾವೀಪಡೆ ಕಣ್ಣು

- ದತ್ತ ವಿಗ್ರಹ ಸ್ಥಾಪನೆ - ವಿಫಲ ನಾಟಕ
- ಕಾರಿಡಾರ್ - ಬಂಡವಾಳಹೂಡಿಕೆದಾರರು ಪ್ರಶ್ನಾತೀತರೆ?
- ಉಡುಪಿ - ಹುಂಡಿಪ್ರಿಯರ ರಕ್ಷಣೆಗೆ ಖಾವೀಪಡೆ

ಸೆನ್ಸಾರ್ ಮಂಡಳಿಯ ಸಾಚಾತನ

ಹತಾಶೆಯ ಹಪಾಹಪಿ - ಆರ್ಭಟ

ಕಮ್ಯುನಿಸ್ಟರ ಮೇಲೇಕೆ ಆರ್‌ಎಸ್‌ಎಸ್‌ಗೆ ಅಷ್ಟೊಂದು ಆಕ್ರೋಶ? ಧರ್ಮನಿರಪೇಕ್ಷಿತ ಭಾರತವನ್ನು ಛಿದ್ರಗೊಳಿಸಿ, ಫ್ಯಾಸಿಸ್ಟ ಮಾದರಿಯ ದೇಶ ಕಟ್ಟಲು ಬಿಡಲಾರರು ಎಂಬುದಕ್ಕಾ?

ವಾರ್ಷಿಕ ಸಂಪ್ರದಾಯದ ವಿಜಯದಶಮಿ ಹಬ್ಬದ ಆರ್.ಎಸ್.ಎಸ್‌ನ ಮುಖ್ಯಸ್ಥರ ಭಾಷಣ ಈ ಬಾರಿ ಕಮ್ಯೂನಿಸ್ಟ್ ವಿರೋಧಿ ವಾಗ್ದಾಳಿಯ ಉದ್ಘಾಟನಾ ವೇದಿಕೆಯಾಗಿತ್ತು. ಲೋಕಸಭೆ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ, ದೇಶದ ಜನ-ಕೋಮುವಾದೀ ಅಜೆಂಡಾವನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತಾರೆ ಎಂಬುದು ಸಾಬೀತಾದ ಹಿನ್ನೆಲೆಯಲ್ಲಿ ಹುಟ್ಟಿದ ಹತಾಶೆಯ ಪರಿಣಾಮ ಇದು. ಈ ಭಾಷಣ ಆರ್.ಎಸ್.ಎಸ್.ನ ಮಾದರಿ ಭಾರತವನ್ನು ತಿರಸ್ಕರಿಸಿದ ಜನರ ಕುರಿತೂ ಹತಾಶೆಯನ್ನು ತೋರಿಸುತ್ತದೆ.

ಆರ್.ಎಸ್.ಎಸ್. ಮುಖ್ಯಸ್ಥರ ಪ್ರಕಾರ ಕಮ್ಯೂನಿಸ್ಟರು ಹಿಂದೂ ವಿರೋಧಿಗಳು ಮತ್ತು ಮನಮೋಹನ್ ಸಿಂಗ್ ಸರಕಾರಕ್ಕೆ ಅವರ ಬೆಂಬಲ ಮತ್ತು ಪ್ರಭಾವ ದೇಶಕ್ಕೆ ಗಂಡಾಂತರಕಾರಿ. ಇದು ಯಾಕಿಷ್ಟು ಅಪಾಯಕಾರಿ ಎಂದರೆ ಕಮ್ಯೂನಿಸ್ಟರ ಬೆಂಬಲವಿಲ್ಲದೇ ಸರ್ಕಾರ ಉಳಿಯಲು ಸಾಧ್ಯವಿಲ್ಲ.

ನಿಜ ಹೇಳಬೇಕೆಂದರೆ ಅವರ ಈ ರೀತಿಯ ವಾಗ್ದಾಳಿ ಹೊಸತೇನಲ್ಲ.

ಗೋಲ್ವಾಲ್‌ಕರ್‌ರ - ಚಿಂತನ ಗಂಗಾ (bunch of thoughts) ದ ಒಂದು ಇಡೀ ಅಧ್ಯಾಯ ಪೂರ್ತಿ ಬಣ್ಣಿಸಿರುವಂತೆ, ಇಂದಿನ ಜಾತ್ಯಾತೀತ ಭಾರತವನ್ನು ಛಿದ್ರಗೊಳಿಸಿ ಆರ್.ಎಸ್.ಎಸ್.ನ ಕನಸಿನ ಫ್ಯಾಸಿಸ್ಟ್ ಭಾರತವನ್ನು ಕಟ್ಟಲು ಅಡ್ಡಿ ಇರುವ ಅತ್ಯಂತ ಬಲಿಷ್ಟ ಒಳಗಿನ ಶತ್ರು ಎಂದರೆ ಕಮ್ಯೂನಿಸ್ಟರು.

ಇಂತಹ ಧಾಳಿಯನ್ನು ಮಾಡುವ ಮೂಲಕ ಕಮ್ಯೂನಿಸ್ಟರು ಈ ದೇಶದ ಜಾತ್ಯಾತೀತ ಪರಂಪರೆಯ ಕಟ್ಟಾ ಬೆಂಬಲಿಗರೆಂದು ದೃಢಪಡಿಸಿದ್ದಾರೆ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ, 61 ಜನ ಸಂಸತ್ ಸದಸ್ಯರ ಬೆಂಬಲ ಮನಮೋಹನ್‌ಸಿಂಗ್ ಸರ್ಕಾರಕ್ಕೆ ಎಷ್ಟು ಮಹತ್ವದ ಅಂಶವೋ, ಅಷ್ಟೇ ರೀತಿಯಲ್ಲಿ ಎಡಶಕ್ತಿಗಳು ಸರ್ಕಾರದ ನೀತಿ, ನಿರೂಪಣೆಲ್ಲಿ ಪ್ರಭಾವ ಬೀರುವ ಸ್ಥಿತಿಯಲ್ಲಿರುವುದು ಆರ್.ಎಸ್.ಎಸ್. ಆಘಾತ ಉಂಟುಮಾಡಿದೆ. ಜೊತೆಯೇ, ಕೋಮುವಾದಿ ಶಕ್ತಿಗಳ ಬಗ್ಗೆ ಮೃದುಧೋರಣೆ ತಳೆಯುವಂತಹ ಯಾವ ಅವಕಾಶವನ್ನೂ ಕಾಂಗ್ರೆಸ್‌ಗೆ ಎಡಪಕ್ಷಗಳು ಬಿಡುವುದಿಲ್ಲವೆಂಬುದೂ ಆರ್.ಎಸ್.ಎಸ್.ಗೆ ಚೆನ್ನಾಗಿ ತಿಳಿದಿರುವುದರಿಂದಲೇ ಈ ಹತಾಶ ಆಕ್ರೋಶ.

ಹಾಸ್ಯಾಸ್ಪದ ಇಬ್ಬಂದಿ

ಸ್ವಯಂಘೋಷಿತ ಹಿಂದೂ ರಕ್ಷಕ ಆರ್.ಎಸ್.ಎಸ್. ಪ್ರಕಾರ, ಅವರ ಫ್ಯಾಸಿಸ್ಟ್ ಧೋರಣೆಯನ್ನು ವಿರೋಧಿಸುವವರೆಲ್ಲರೂ ಹಿಂದೂ ವಿರೋಧಿಗಳು ಇಲ್ಲಿನ ಅಪಾರ ವೈವಿಧ್ಯಮಯ ಹಿಂದೂ ಸಮಾಜವನ್ನು ಪ್ರತಿನಿಧಿಸುವವರೇ ತಾವು ಎಂದುಕೊಳ್ಳುವ ಆರ್.ಎಸ್.ಎಸ್.ನ ಮಾತೇ ಹಾಸ್ಯಾಸ್ಪದ. ಹಿಂದೆಂದಿನಂತೆಯೇ ಈಗಿನ ಚುನಾವಣೆಯಲ್ಲಿಯೂ ಕೂಡ ಬಹುಸಂಖ್ಯಾತ ಜಾತ್ಯಾತೀತ ಭಾವನೆಯ ಹಿಂದೂಗಳೇ ಬಿ.ಜೆ.ಪಿ/ಆರ್.ಎಸ್.ಎಸ್‌ನ ಸೋಲಿಗೆ ಕಾರಣರಾದದ್ದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆರ್.ಎಸ್.ಎಸ್ ಜಾತ್ಯಾತೀತ ಹಿಂದೂಗಳನ್ನು ಉಗ್ರವಾಗಿ ವಿರೋಧಿಸುತ್ತದೆ. ಧಾರ್ಮಿಕ, ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವ ಆರ್.ಎಸ್.ಎಸ್, ಜಾತ್ಯಾತೀತ ಹಿಂದೂಗಳನ್ನೇನೂ ಬಿಡುವುದಿಲ್ಲ ಎನ್ನುವುದಕ್ಕೆ ಜ್ವಲಂತ ಉದಾಹರಣೆ ಎಂದರೆ ಸಾಯುವಾಗ 'ಹೇರಾಮ್' ಎಂದೇ ಜೀವ ತೊರೆದ ಅಪ್ಪಟ ಹಿಂದೂ ಆಗಿದ್ದ ಮಹಾತ್ಮಾಗಾಂಧಿಯ ಅಮಾನುಷ ಕೊಲೆ.

ಆರ್.ಎಸ್.ಎಸ್. ನಮ್ಮ ಜಾತ್ಯಾತೀತ ಬುನಾದಿಯನ್ನು ಕಿತ್ತುಹಾಕಿ, ಫ್ಯಾಸಿಸ್ಟ್ ಬುನಾದಿ ಹಾಕಲೆಂದು ಹೊರಟಿದೆ. ಇದನ್ನು ಎಡಶಕ್ತಿಗಳು ವಿರೋಧಿಸುತ್ತಿದೆ ಮತ್ತು ಇತ್ತೀಚಿನ ಚುನಾವಣೆಗಳಲ್ಲಿ ಎಲ್ಲ ಧರ್ಮದವರೂ ಸೇರಿದಂತೆ ಅವರು ಅಧಿಕಾರಕ್ಕೆ ಬರದಂತೆ ಎಚ್ಚರ ವಹಿಸಿದ್ದಾರೆ.

ನಿಶ್ಚಲ ಅಭಿವ್ಯಕ್ತಿ

ಕಮ್ಯೂನಿಸ್ಟರ ವಿರುದ್ಧ ಆರ್.ಎಸ್.ಎಸ್ ಆಕ್ರೋಶ ಹೆಚ್ಚಾದಷ್ಟೂ, ಆಧುನಿಕ ಭಾರತೀಯ ಗಣರಾಜ್ಯದ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ತಳಪಾಯವನ್ನು ಬಲಪಡಿಸುವ ಹಾಗೂ ರಕ್ಷಿಸುವ ಭಾರತೀಯ ಜನರ ನಿಶ್ಚಲ ಅಭಿವ್ಯಕ್ತಿ ಕೂಡ ಅಷ್ಟೇ ತೀಕ್ಷ್ಣವಾಗುತ್ತಿದೆ.



ಸಂಘದ ಸರಸಂಘಚಾಲಕ ಸುದರ್ಶನ್

ಈ ಕಮ್ಯೂನಿಸ್ಟ್ ವಿರೋಧಿ ದೂಷಣೆಯನ್ನು ಮಾಡುವಾಗ, ಆರ್.ಎಸ್.ಎಸ್ ಮುಖ್ಯಸ್ಥರು ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಕಾರ್ಯಕ್ಷಮತೆಯ ಕುರಿತು ಉಗ್ರ ಟೀಕೆಯನ್ನು ಮಾಡಿದದಾರೆ. ಎಡರಂಗ ಸರ್ಕಾರದ ಆಳ್ವಿಕೆಯಡಿಯಲ್ಲಿ ಜನರ ಜೀವನಮಟ್ಟ ಕುಸಿದಿದೆ ಎಂದೂ ಆರೋಪಿಸಿದ್ದಾರೆ. (ಪ್ರಾಯಶಃ ಅದಕ್ಕೇ ಇರಬೇಕು ಪಶ್ಚಿಮ ಬಂಗಾಳದ ಜನ ಎಡರಂಗಕ್ಕೆ ಕಳೆದ ಮೂರು ದಶಕಗಳಿಂದಲೂ ಬೆಂಬಲವನ್ನು ಹೆಚ್ಚಿಸುತ್ತಲೇ ಇದ್ದಾರೆ) ಆದರೆ ವಾಸ್ತವ ಅಂಕೀಅಂಶಗಳು ತಮ್ಮದೇ ಆದ ಕತೆಯನ್ನು ಹೇಳುತ್ತಿವೆ.

ಮೊಟ್ಟಮೊದಲನೆಯದಾಗಿ ಬಂಗಾಳ ಕೂಡ ಭಾರತದ ಹೆಮ್ಮೆಯ ಅವಿಭಾಜ್ಯ ಅಂಗವೆಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ದೇಶದ ಆರ್ಥಿಕ ನೀತಿಗಳನ್ನು ನಿರ್ಧರಿಸುವ ಸಂಪೂರ್ಣ ಹಕ್ಕು ಹಾಗೂ ಅಧಿಕಾರವು, ನಮ್ಮ ಸಂವಿಧಾನದ ಪ್ರಕಾರ, ಕೇಂದ್ರ ಸರ್ಕಾರಕ್ಕಿರಬೇಕಾದರೆ ಯಾವುದೇ ಒಂದು ರಾಜ್ಯ ಅಥವಾ ಭಾರತದ ಭಾಗ ಪ್ರತ್ಯೇಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಯಾವ ರಾಜ್ಯವೂ ತನ್ನದೇ ಆದ ಒಂದು ಆರ್ಥಿಕ ಯೋಜನೆಯನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಇಷ್ಟೆಲ್ಲಾ ಅಡೆತಡೆಗಳು ಮತ್ತು ಮಿತಿಗಳು ಇದ್ದಾಗ್ಯೂ, ಎಡರಂಗ ಸರ್ಕಾರದಡಿಯಲ್ಲಿ ಪಶ್ಚಿಮ ಬಂಗಾಳವು ಹಿಂದೆಂದೂ ಕಾಣದ ಸಾಧನೆಗಳನ್ನು ಮಾಡಿದೆ. 1977 ರಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗ,ಬಡತನ ಅನುಪಾತ ಪಶ್ಚಿಮಬಂಗಾಳದಲ್ಲಿ ಸರಿಸುಮಾರು ಶೇಕಡಾ 52 ರಷ್ಟಿತ್ತು. ಇದು 1994 ರ ಹೊತ್ತಿಗೆ ಶೇಕಡಾ 26 ಕ್ಕೆ ಇಳಿದು, ಪ್ರತಿವರ್ಷ ಶೇ 4.2 ರಷ್ಟು ಇಳಿಯುತ್ತಾ ಹೋಗಿದೆ. ಭಾರತದ ಎಲ್ಲಾ ರಾಜ್ಯಗಳಿಗೆ ಹೋಲಿಸಿದಾಗ, ಬಡತನ ಇಳಿಕೆಯಲ್ಲಿ ಪಶ್ಚಿಮಬಂಗಾಳ ಮೊದಲನೇ ಸ್ಥಾನವನ್ನು ಪಡೆದಿದೆ. ಪ್ರಾಸಂಗಿಕವಾಗಿ ಪ್ರತಿವರ್ಷ ಶೇಕಡಾ 2.7 ರಷ್ಟು ಇಳಿಕೆಯಾಗಿ ಎರಡನೇ ಸ್ಥಾನ ಪಡೆದಿರುವುದು ಕೇರಳ ರಾಜ್ಯ. (ಮೂಲ :ಭಾರತ - ಬಡತನ ಇಳಿಕೆಯ ನೀತಿಗಳು, ವಿಶ್ವಬ್ಯಾಂಕ್, 2000). ಅದೇ ಮಹಾರಾಷ್ಟ್ರದಲ್ಲಿ ಬಡತನ ಇಳಿಕೆ ಪ್ರತಿವರ್ಷ ಶೇಕಡಾ 2.7 ರಷ್ಟಿದ್ದು 1994 ರಲ್ಲಿ ಒಟ್ಟು ಜನಸಂಖ್ಯೆಯ ಶೇಕಡಾ 43.5 ರಷ್ಟು ಜನರು ಬಡತನದಿಂದ ತೊಳಲಾಡುತ್ತಿದ್ದಾರೆ.

ಅದೇ ರೀತಿಯಲ್ಲಿ, ರಾಜ್ಯದ ಒಟ್ಟಾರೆ ಆಂತರಿಕ ಉತ್ಪಾದನೆಯ ಬೆಳವಣಿಗೆ ವಾರ್ಷಿಕ ದರ ಹಾಗೂ ತಲಾ ಆದಾಯದ ಅಂಶಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಪಶ್ಚಿಮ ಬಂಗಾಳದ ಸಾಧನೆ ಮೇಲ್ಮಟ್ಟದಲ್ಲೇ ಇದೆ. ರಾಜ್ಯ ಆದಾಯದ ಬೆಳವಣಿಗೆ ದರ ಶೇಕಡಾ 72 ರಷ್ಟಿದ್ದರೆ ಮಹಾರಾಷ್ಟ್ರದ್ದು ಶೇಕಡಾ 5 ಮಾತ್ರ. ಹಾಗೆಯೇ ತಲಾ ಆದಾಯ ಪಶ್ಚಿಮ ಬಂಗಾಳದಲ್ಲಿ ಶೇಕಡಾ 5.5 ಇದ್ದರೆ ಮಹಾರಾಷ್ಟ್ರದಲ್ಲಿ ಅದು ಕೇವಲ ಶೇ. 2.2 ಮಾತ್ರ. ಅಖಿಲ ಭಾರತ ಸರಾಸರಿ ಅನುಕ್ರಮವಾಗಿ ಶೇ. 6.3 ಹಾಗೂ ಶೇಕಡಾ 4.3. ಒಂದು ಕಾಲದಲ್ಲಿ ನಿರಂತರ ಆಹಾರ ಕೊರತೆಯಿಂದ ಒದ್ದಾಡುತ್ತಿದ್ದ ಪಶ್ಚಿಮ ಬಂಗಾಳದ ಕೃಷಿ ಕ್ಷೇತ್ರ ಈಗ ಹೆಚ್ಚುವರಿ ಆಹಾರ ಉತ್ಪಾದನೆ ರಾಜ್ಯವಾಗಿ ಮಾರ್ಪಾಡಾಗುವುದರೊಂದಿಗೆ, ಎಡರಂಗದ ಅಧಿಕಾರಾವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಮಹತ್ತರ ಅಭಿವೃದ್ಧಿ ಸಾಧಿಸಿದೆ. ಅದು ಇಂದು ದೇಶದಲ್ಲಿ ಅಕ್ಕಿ ಬೆಳೆಯುವ ಮೊದಲನೇ ರಾಜ್ಯವಾಗಿ ಹೊರಹೊಮ್ಮಿದೆ. ಇಡೀ ದೇಶದ ಅಕ್ಕಿ ಉತ್ಪಾದನೆಯ ಏರಿಕೆಯಲ್ಲಿ ಶೇಕಡಾ 20 ರಷ್ಟು ಪಶ್ಚಿಮ ಬಂಗಾಳದ್ದೇ ಸಿಂಹಪಾಲು. ಒಂದು ಹೆಕ್ಟೇರಿನ ಇಳುವಳಿಯಲ್ಲೂ ಕೂಡಾ ಸಾಕಷ್ಟು ಹೆಚ್ಚಾಗಿದೆ. 'ಆಪರೇಷನ್ ಬಾರ್ಗಾ' ಎಂಬ ಭೂಸುಧಾರಣಾ ಕ್ರಮದಿಂದಾಗಿ ಇಂದು ಪಶ್ಚಿಮಬಂಗಾಳದ 90 ಪ್ರತಿಶತ ಭೂ ಹಿಡುವಳಿ ಸಣ್ಣ ಹಾಗೂ ಅಂಚಿನ ರೈತರಿಗೆ ಸೇರಿದೆ. ಭೂಸುಧಾರಣೆಯನ್ನು ಯಶಸ್ವಿಯಾಗಿ ಜಾರಿ ಮಾಡಿದ್ದರ ಪರಿಣಾಮವಾಗಿ, ಪ್ರಖ್ಯಾತ ಅರ್ಥಶಾಸ್ತ್ರಜ್ಞ, ಡಾ. ನೀಲಕಂಠ ರಥ್ ಕೆಲವು ದಿನಗಳ ಹಿಂದೆ ವಿಶ್ಲೇಷಣೆ ಮಾಡುತ್ತಾ, ಒಟ್ಟಾರೆ ದೇಶದಲ್ಲಿ 1981-82 ಮತ್ತು 1994-95 ರ ಅವಧಿಯಲ್ಲಿ ಕೃಷಿ ಉತ್ಪಾದನೆಯ ತಲಾ ಆಂತರಿಕ ಉತ್ಪನ್ನದ ಬೆಳವಣಿಗೆಯು ಪ್ರತಿಶತ 22 ಹೆಚ್ಚಾಗಿದ್ದರೆ, ಅದು ಪಶ್ಚಿಮ ಬಂಗಾಳದಲ್ಲಿ ಭರ್ಜರಿ 70 ರಷ್ಟಾಗಿದೆ ಎಂದರು.

1981-82 ಪಶ್ಚಿಮ ಬಂಗಾಳವು ದೇಶದಲ್ಲೇ ಅತ್ಯಂತ ಕಡಿಮೆ ತಲಾ ಕೃಷಿ ಉತ್ಪಾದನೆಯ ಹೊಂದಿ ರಾಷ್ಟ್ರೀಯ ಸರಾಸರಿಗಿಂತ 18 ಪ್ರತಿಶತ ಕಡಿಮೆ ಇತ್ತು. 1994-95 ರ ಹೊತ್ತಿಗೆ, ಅದು ಏರುತ್ತಾ ಹೋಗಿ ರಾಷ್ಟ್ರೀಯ ಸರಾಸರಿಗಿಂತ ಪ್ರತಿಶತ 10 ಹೆಚ್ಚಾಗಿತ್ತು. ಭೂಸುಧಾರಣಾ ಕ್ರಮಗಳು ಕೇವಲ ವಿತರಣಾ ಹಕ್ಕುಗಳನ್ನು ಪಡೆಯುವುದರಲ್ಲಿ ಮಾತ್ರ ಉಪಯುಕ್ತವಾಗುವುದಿಲ್ಲ ಎಂಬುದನ್ನು ಕೃಷಿ ವಲಯದ ಈ ಮಹತ್ತರ ಸಾಧನೆಗಳು ಮತ್ತೆ ಸಾಬೀತುಮಾಡಿದೆ. ಈ ಹಕ್ಕುಗಳ ಪಡೆಯುವುದರ ಜೊತೆಯಲ್ಲೇ ಅವು ಉತ್ಪಾದಕತೆಯನ್ನು ಅತ್ಯಂತ ವೇಗದಲ್ಲಿ ಹೆಚ್ಚಿಸುತ್ತದೆ ಹಾಗೂ ಅವು ಬಡತನವನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಕೂಡಾ.

ವಿತರಣಾ ನ್ಯಾಯದ ದೃಷ್ಟಿಯಿಂದ, 13 ಲಕ್ಷ ಎಕರೆ ಕೃಷಿ ಭೂಮಿಯನ್ನು ಭೂಹೀನರಿಗೆ ವಿತರಿಸಲಾಗಿದೆ ಎಂಬುದನ್ನು ಪುನರುಚ್ಚರಿಸಬೇಕಾಗುತ್ತದೆ. ಈ ಎಲ್ಲಾ ಭೂಮಿಗಳಿಗೆ ಈ ಹಿಂದೆ ಕಾನೂನುಬಾಹಿರವಾಗಿ ಪಟ್ಟಭದ್ರಹಿತಾಸಕ್ತಿಗಳ ಕೈಯಲ್ಲಿದ್ದವು. ಒಂದು ಹೆಕ್ಟೇರಿಗೆ ಒಂದು ಲಕ್ಷ ರೂ. ಬೆಲೆ ನಿಗದಿಮಾಡಿದರೂ ಸಹ ವಿತರಣೆ ಮಾಡದೆ ಒಟ್ಟು ಭೂಮಿಯ ಬೆಲೆ 13000 ಕೋಟಿ ರೂಪಾಯಿಗಳು. ಅಷ್ಟು ದೊಡ್ಡ ಮಟ್ಟದಲ್ಲಿ ಬಡ ಹಾಗೂ ಭೂಹೀನರಿಗೆ ಪಶ್ಚಿಮ ಬಂಗಾಳದಲ್ಲಿ ಆಸ್ತಿಯ ಮರುವಿತರಣೆ ಆಗಿದೆ.

ಮುನ್ನಡೆ

ದೇಶದ ಬೇರಾವುದೇ ರಾಜ್ಯ (ಸತತವಾಗಿ ಕಮ್ಯುನಿಸ್ಟರ ಅಧಿಕಾರ ಹೊಂದಿದ್ದ ಕೇರಳ ರಾಜ್ಯವನ್ನು ಬಿಟ್ಟರೆ) ಇಂತಹ ಸಾಧನೆಯನ್ನು ಹೇಳಿಕೊಳ್ಳಲು ಸಾಧ್ಯವೇ? ಹಾಗೂ ಅದರ ಮುಖ್ಯಸ್ಥರಿಗೆ ಈ ವಾಸ್ತವಾಂಶಗಳು ಪ್ರಸ್ತುತವಲ್ಲ ಅಥವಾ ಪ್ರಾಮುಖ್ಯವಾದುದಲ್ಲ ಏಕೆಂದರೆ ಕಮ್ಯುನಿಸ್ಟ್ ವಿರೋಧಿ ಸ್ವಭಾವ ಅವರ ರಕ್ತದಲ್ಲೇ ಬಂದುಬಿಟ್ಟಿದೆ.

ಆರ್‌ಎಸ್‌ಎಸ್ ಹುಚ್ಚು ಕೂಗಾಟ ಮತ್ತು ಆರ್ಭಟಗಳು ಭಾರತವನ್ನು ಆರ್‌ಎಸ್‌ಎಸ್ ನ ಫ್ಯಾಸಿಸ್ಟ್ ಕೋಮುವಾದಿ ಕಾರ್ಯಸೂಚಿಯಿಂದ ತಪ್ಪಿಸಿ ಜಾತ್ಯತೀತ ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಭಾರತೀಯ ದೇಶಪ್ರೇಮಿ ಜನಗಳ ಅಚಲ ನಿರ್ಧಾರವನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ. ದೇಶದ ಜನ ಹಾಗೂ ರಾಷ್ಟ್ರದ ಒಳಿತಿಗಾಗಿ ರಾಜಕೀಯ ರಂಗದಲ್ಲಿ ಜನರ ಈ ಸಕಾರಾತ್ಮಕ ಪ್ರವೃತ್ತಿಯನ್ನು ಬಲಪಡಿಸಲು ಎಡಪಕ್ಷಗಳು ಮುನ್ನಡೆಯುತ್ತವೆ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 2,3 ಮತ್ತು 4,2004**
  ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ಮಂಗಳೂರಿನಲ್ಲಿ, ನವೆಂಬರ್ 4 ರಂದು ಬೃಹತ್ ರ್‍ಯಾಲಿ
  ಮುಖ್ಯ ಅತಿಥಿ : ಕಾಂ.ಮಹಮ್ಮದ್ ಅಮಿನ್, ಪಶ್ಚಿಮ ಬಂಗಾಳ ಸಾರಿಗೆ ಸಚಿವರು
- **ನವೆಂಬರ್ 3,2004**
  'ಭಾರತೀಯ ಕೋಮುವಾದ ಮತ್ತು ಸಾಮ್ರಾಜ್ಯವಾದದೊಂದಿಗಿನ ಸಂಬಂಧ ವಿಚಾರಸಂಕಿರಣ - ಮಂಗಳೂರು ಪುರಭವನ ಸಂಜೆ 5 ಗಂಟೆಗೆ
  ಭಾಗವಹಿಸುವವರು : ಪ್ರಕಾಶ್ ಕಾರಟ್, ಚಿತ್ತಬ್ರತ ಮಜುಂದಾರ್
  ಡಾ.ಪಿ.ಹೆಚ್.ಧರ್ಮ,
  ಜಿ.ಎನ್.ನಾಗರಾಜ್
- **ನವೆಂಬರ್ 3,2004**
  ಡಿವೈಎಫ್‌ಐ ಬೆಳ್ಳಿಹಬ್ಬದ ಅಂಗವಾಗಿ 2 ಕೋಟಿ ಸಹಿ ಸಂಗ್ರಹದೊಂದಿಗೆ ದೆಹಲಿ ಚಲೊ
  ಸರ್ವರಿಗೂ ಶಿಕ್ಷಣ- ಸರ್ವರಿಗೂ ಉದ್ಯೋಗ, ಸಮಗ್ರ ಭೂಸುಧಾರಣೆ ಇತ್ಯಾದಿಗಳಿಗೆ ಒತ್ತಾಯಿಸಿ
- **ನವೆಂಬರ್ 14,2004**
  ಸಿಪಿಐ(ಎಂ) - ಶ್ರೀರಾಂಪುರ (ಬೆಂಗಳೂರು) ಪ್ರಾದೇಶಿಕ ಸಮ್ಮೇಳನದ ಅಂಗವಾಗಿ ಸಾರ್ವಜನಿಕ ಸಭೆ - ಸಂಜೆ 5.30 ಕ್ಕೆ, ಬಂಡಿ ರೆಡ್ಡಿ ವೃತ್ತ
- **ನವೆಂಬರ್ 17,2004**
  ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ ನಿಷೇಧ, ಸಮಾನ ಕೂಲಿ - ಸಮಾನ ಅವಕಾಶಕ್ಕೆ ಒತ್ತಾಯಿಸಿ ದುಡಿಯುವ ಮಹಿಳೆಯರ ರ್‍ಯಾಲಿ - ನವದೆಹಲಿ
- **ನವೆಂಬರ್ 26-29, 2004**
  ಎಐಡಿಡಬ್ಲ್ಯುಓ ಅಖಿಲ ಭಾರತ ಸಮ್ಮೇಳನ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಬಾಬಾಬುಡನ್‌ಗಿರಿ : ಪ್ರತಿಗಾಮಿಗಳ ಹುನ್ನಾರ ಎದುರಿಸುವುದಾಗಿ ಮುಖ್ಯಮಂತ್ರಿ ಭರವಸೆ

ಬಾಬಾಬುಡನ್‌ಗಿರಿ ದತ್ತಪೀಠ- ದರ್ಗಾದ ಸೌಹಾರ್ದತೆಯ ಪರಂಪರೆಗೆ ಧಕ್ಕೆ ತರುವಂತಹ ಕೃತ್ಯಗಳು ನಡೆದಿದ್ದು, ಹುಟ್ಟುಹಾಕಲಾಗಿರುವ ವಿವಾದದ .. ಪ್ರಕರಣವನ್ನು ಬಗೆಹರಿಸುವ ಹಾಗೂ ಪರಂಪರೆ, ಕಾನೂನು, ಜನರ ಒಗ್ಗಟ್ಟು ಸಂರಕ್ಷಿಸುವ ಹಿನ್ನೆಲೆಯಲ್ಲಿ ಸರ್ವಪಕ್ಷಗಳ ಸಭೆಯನ್ನು ಕರೆಯುವುದಾಗಿ ಮುಖ್ಯಮಂತ್ರಿ ಧರಂಸಿಂಗ್‌ರವರು ಪ್ರಕಟಿಸಿದರು. ಅಂತಹ ಒಂದು ಸಭೆ ಬೆಂಗಳೂರಿನಲ್ಲಿಯೂ ಇನ್ನೊಂದು ಚಿಕ್ಕಮಗಳೂರಿನಲ್ಲಿಯೂ ಕರೆಯುವುದಾಗಿ ತಿಳಿಸಿದರಲ್ಲದೆ ನಾಡಿನ ಬುದ್ಧಿಜೀವಿಗಳನ್ನು ಆಹ್ವಾನಿಸುವುದಾಗಿ ಹೇಳಿದರು.

ಡಿಸೆಂಬರ್ ತಿಂಗಳಿನಲ್ಲಿ ದತ್ತ ಜಯಂತಿಯನ್ನು ಕೇಂದ್ರವಾಗಿರಿಸಿ, ಇದೇ ಅಕ್ಟೋಬರ್ ತಿಂಗಳ 25 ರಿಂದ 31ರವರೆಗೆ ದತ್ತ ಮಾಲೆ, ದತ್ತ ಹೋಮ- ಶೋಭಾ ಯಾತ್ರೆ ಮುಂತಾದ ಕಾರ್ಯಕ್ರಮಗಳ ಮೂಲಕ ಬಜರಂಗದಳ- ವಿಶ್ವಹಿಂದೂ ಪರಿಷತ್, ಬಿಜೆಪಿಯಂತಹ ಸಂಘ ಪರಿವಾರದ ಮತಾಂಧ ಸಂಘಟನೆಗಳು ಮತ್ತೆ ಕೋಮುವಿದ್ವೇಷ ಹೆಚ್ಚಿಸಿ, ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಿಸುತ್ತಿರುವುದರ ಹಿನ್ನೆಲೆಯಲ್ಲಿ ವಿವರವಾಗಿ ಚರ್ಚಿಸಿ ಕೈಗೊಳ್ಳಬೇಕಾದ ಕ್ರಮಗಳನ್ನು ಆಗ್ರಹಿಸಲು ಸಿಪಿಐ(ಎಂ) ಮತ್ತು ಸಿಪಿಐ-ನ ಕರ್ನಾಟಕ ರಾಜ್ಯ ಸಮಿತಿಗಳ ನಿಯೋಗ ಇದೇ ಅಕ್ಟೋಬರ್ 26 ರಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತು.

'ಸರ್ವಜನಾಂಗದ ಶಾಂತಿಯ ತೋಟ' ವೆಂದು ರಾಷ್ಟ್ರಕವಿ ಕುವೆಂಪುರವರಿಂದ ಬಣ್ಣಿಸಲ್ಪಟ್ಟ ಕರ್ನಾಟಕದ ಸಹಬಾಳ್ವೆಯ ಸಂಸ್ಕೃತಿಗೆ ಕೊಳ್ಳಿ ಇಡಲು ಮತಾಂಧ ಶಕ್ತಿಗಳು ಹೆಡೆ ಎತ್ತುತ್ತಿರುವುದನ್ನು ಸವಿವರವಾಗಿ ಎಡಪಕ್ಷಗಳ ನಾಯಕರು ಬಿಡಿಸಿಟ್ಟರು. ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವುದಾಗಿ ಘೋಷಿಸಿರುವ ಬಜರಂಗದಳ - ವಿಶ್ವ ಹಿಂದು ಪರಿಷತ್‌ಗಳು ದತ್ತಜಯಂತಿ ಹೆಸರಿನಲ್ಲಿ ಶೋಭಾಯಾತ್ರೆಗಳ ಮೂಲಕ ರಾಜ್ಯಾದ್ಯಂತ ತರುಣರನ್ನು ತಪ್ಪು ಹಾದಿಗೆ ಎಳೆಯುತ್ತಿವೆ, ಅವರಲ್ಲಿ ಜನಾಂಗದ್ವೇಷದ ವಿಷ ತುಂಬಿಸಲಾಗುತ್ತಿರುವುದನ್ನು, ಇದಕ್ಕೆ ಕೆಲವು ಬಿಜೆಪಿ ಶಾಸಕರು ಕಾನೂನುಬಾಹಿರ ಕೃತ್ಯಗಳಿಗೆ ನೇತೃತ್ವ ನೀಡುತ್ತಿರುವುದರತ್ತ ಗಮನ ಸೆಳೆದರು.

ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿ ಅನೇಕ ಶತಮಾನಗಳಿಂದಲೂ ಹಿಂದೂ-ಮುಸ್ಲಿಂ ಶ್ರದ್ಧಾ ಕ್ಷೇತ್ರವಾಗಿದ್ದು ಇಲ್ಲಿ ಸೂಫಿ ಪದ್ಧತಿಯ ಆಚರಣೆ ನಡೆದು ಬಂದಿರುತ್ತದೆ. ಇಲ್ಲಿ ನಡೆಯುತ್ತಾ ಬಂದಿರುವುದು ವರ್ಷಕ್ಕೊಮ್ಮೆ ನಡೆಯುವ ಉರುಸ್ ಒಂದೇ. ಅನಗತ್ಯ ವಿವಾದವನ್ನು ಹುಟ್ಟುಹಾಕಿರುವ ಸಂಘಪರಿವಾರವು ಇಲ್ಲಿ ಕಾನೂನು ಹಾಗೂ ಕ್ಷೇತ್ರದ ಪರಂಪರೆಗೆ ವಿರುದ್ಧವಾಗಿ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಆಚರಿಸಲು ಆರಂಭಿಸಿದೆ. ಇದರಿಂದಾಗಿ ಕ್ಷೇತ್ರದ ಸೂಫಿ ಸ್ವರೂಪ ನಾಶವಾಗುವ ಅಪಾಯ ಉಂಟಾಗಿದೆ. ಗೋರಿಗಳಿರುವ ಗುಹೆಯಲ್ಲಿ ದತ್ತ ವಿಗ್ರಹ ಸ್ಥಾಪಿಸುವ, ದತ್ತಯಜ್ಞ, ದತ್ತ ಹೋಮ ನಡೆಸುವ, ಹಿಂದೂ ಅರ್ಚಕರನ್ನು ನೇಮಿಸುವ ಹುನ್ನಾರಗಳಿಂದಾಗಿ ಆ ಕ್ಷೇತ್ರದ ಮೇಲೆ ಶ್ರದ್ಧೆಯಿಟ್ಟುಕೊಂಡು ಬಂದಿರುವ ರಾಜ್ಯದ ವಿವಿಧ ಕೋಮುಗಳ ಜನರ ಧಾರ್ಮಿಕ ಹಕ್ಕಿಗೆ ಚ್ಯುತಿ ಉಂಟಾಗಿದೆ. ಚಿಕ್ಕಮಗಳೂರಿನ ಜಿಲ್ಲಾ ನ್ಯಾಯಾಲಯವು 29.2.1980 ರಂದು ನೀಡಿದ ತೀರ್ಪಿನಲ್ಲಿ ಪೀಠದ ಆಡಳಿತ ಮತ್ತು ಧಾರ್ಮಿಕ ಆಚರಣೆಗಳು 1975 ರ ಜೂನ್ ಮುಂಚೆ ಇದ್ದ ಹಾಗೇ ನಡೆದುಕೊಂಡು ಬರಲು ನಿರ್ದೇಶಿಸಿದೆ. ಬಳಿಕ ರಾಜ್ಯದ ಹೈಕೋರ್ಟ್ ಮತ್ತು ಧಾರ್ಮಿಕದತ್ತಿ ಕಮಿಷನರ್ ಕೂಡ ಇದೇ ನಿರ್ದೇಶನವನ್ನು ಎತ್ತಿ ಹಿಡಿದಿದ್ದಾರೆ. ಸರ್ವೋಚ್ಚ ನ್ಯಾಯಾಲಯವೂ ಈ ತೀರ್ಪನ್ನೇ ಅನುಮೋದಿಸಿದೆ. ಅಲ್ಲದೆ, 1991 ರಲ್ಲಿ ಪಾರ್ಲಿಮೆಂಟ್ ಅಂಗೀಕರಿಸಿದ ಧಾರ್ಮಿಕ ಪೂಜಾ ಸ್ಥಳಗಳ ಅಧಿನಿಯಮವು ಸಹ 1947 ರ ಮುಂಚೆ ಧಾರ್ಮಿಕ ಸ್ಥಳಗಳಲ್ಲಿದ್ದ ರೀತಿರಿವಾಜುಗಳನ್ನೇ ಮುಂದುವರಿಸಿಕೊಂಡು ಹೋಗಬೇಕೆಂಬ ನಿರ್ದೇಶನವನ್ನು ನೀಡಿದೆ. ಆದ್ದರಿಂದ ಬಾಬಾ ಬುಡನ್‌ಗಿರಿಯಲ್ಲಿ ಸಂಘಪರಿವಾರ ನಡೆಸಲು ಬಯಸುವ ದತ್ತಮಾಲೆ, ದತ್ತಹೋಮ, ಶೋಭಾ ಯಾತ್ರೆ, ಮೊದಲಾದವುಗಳೆಲ್ಲವೂ ಕಾನೂನು ಬಾಹಿರ ಹಾಗೂ ನ್ಯಾಯಾಂಗದ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಸರ್ಕಾರ ಇಂತಹ ಕಾನೂನುಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡುವುದು ಅಥವಾ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಅವುಗಳಲ್ಲಿ ಭಾಗವಹಿಸುವುದು ನ್ಯಾಯಾಂಗ ನಿಂದನೆಯಾಗುತ್ತದೆ. ಎಂದು ಸ್ಪಷ್ಟಪಡಿಸಿದರಲ್ಲದೇ ಈ ದಿಸೆಯಲ್ಲಿ ಸರ್ಕಾರ ದೃಢವಾದ ಕ್ರಮ ವಹಿಸಬೇಕೆಂದು ಆಗ್ರಹಿಸಿದರು. ಈ ಹಿಂದೆ ಸರ್ಕಾರವೇ ಅಲ್ಲಿನ ಪರಂಪರೆ ಹಾಗೂ ಆಚರಣೆ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವಲ್ಲಿ ವಿಫಲವಾಗಿ, ಸಂಘಪರಿವಾರದ ಅಜೆಂಡಾಗಳೇ ಜಾರಿಗೊಳ್ಳುತ್ತಿದ್ದ ಸ್ಥಿತಿ ನಿರ್ಮಾಣವಾಗಿದೆ. ಆ ವಿಕೃತಿಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಕೋಮುವಾದಿ ಶಕ್ತಿಗಳ ಈ ಹುನ್ನಾರವನ್ನು ಒಂದೆಡೆ ಸರ್ಕಾರವಾಗಿ ಎದುರಿಸಬೇಕಿದೆ. ಮಾತ್ರವಲ್ಲ ಮುಖ್ಯವಾಗಿ ರಾಜಕೀಯವಾಗಿಯೂ ಸಕ್ರಿಯಗೊಂಡು ಜನತೆಯನ್ನು ಜಾಗೃತಿಗೊಳಿಸುವ ಪ್ರಧಾನ ಕರ್ತವ್ಯ ಇದೆಯೆಂಬುದನ್ನು ಕೂಲಂಕುಷವಾಗಿ ತಿಳಿಸಿದರು.

ಈ ದಿಕ್ಕಿನಲ್ಲಿ ಎಡಪಕ್ಷಗಳಲ್ಲದೇ ಕಾಂಗ್ರೆಸ್- ಜಾತ್ಯಾತೀತ ಜನತಾದಳ ಒಳಗೊಂಡು ಎಲ್ಲಾ ಸೆಕ್ಯುಲರ್ ಪಕ್ಷಗಳ, ಶಕ್ತಿಗಳ ಪಾತ್ರ ಮಹತ್ವದ್ದು ಎಂದರು.



ಜನತೆಯನ್ನು ಜಾಗೃತಗೊಳಿಸಲು ಕಮ್ಯುನಿಸ್ಟ್ ಪಕ್ಷಗಳ ನಿರ್ಧಾರ

ಉಭಯ ಕಮ್ಯೂನಿಸ್ಟ್ ಪಕ್ಷಗಳ ನಾಯಕರ ಮಾತುಗಳನ್ನು ಆಲಿಸಿದ ಮುಖ್ಯಮಂತ್ರಿಗಳು ಅವರ ಈ ಮುತುವರ್ಜಿ, ಕಾಳಜಿಗೆ ಧನ್ಯವಾದ ಸೂಚಿಸಿ, ಸಹಮತ ವ್ಯಕ್ತ ಪಡಿಸಿದರಲ್ಲದೆ, "ಎಲ್ಲಾ ಸಂಗತಿಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಗುತ್ತಿದೆ. ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಮ್ಮ ಪರಂಪರೆ, ಸೌಹಾರ್ದತೆ, ಜನರ ಒಗ್ಗಟ್ಟು ಒಡೆಯಲು ಕೋಮುವಾದಿ ಶಕ್ತಿಗಳಿಗೆ ಅವಕಾಶ ನೀಡುವುದಿಲ್ಲ. ದೃಢವಾಗಿ ಕ್ರಮವಹಿಸುತ್ತೇವೆ" ಎಂದು ಧರಂಸಿಂಗ್‌ರವರು ಪ್ರಕಟಿಸಿದರು. ಚಿಕ್ಕಮಗಳೂರಿನಲ್ಲಿ ನಡೆಯುತ್ತಿರುವ ಪ್ರತಿಗಾಮಿ ಶಕ್ತಿಗಳ ಹುನ್ನಾರಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದಾಗಿ ಶೋಭಾಯಾತ್ರೆ ಮುಂತಾದ ನೆಪದಲ್ಲಿ ಹಿಂಸೆ-ಪ್ರಚೋದನೆ ಮಾಡಲು, ಕಾನೂನು-ಸುವ್ಯವಸ್ಥೆ ಹಾಳುಗೆಡಹಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಮುಖ್ಯಮಂತ್ರಿಯವರ ಪ್ರಸ್ತಾಪಗಳನ್ನು ಸ್ವಾಗತಿಸಿದ ಸಿಪಿಐ(ಎಂ)-ಸಿಪಿಐನ ನಾಯಕರು ಸರ್ಕಾರದ ಕ್ರಮಗಳ ಜಾರಿಯನ್ನು ನಿರೀಕ್ಷಿಸಿದರು.

ಕೋಮುವಾದಿ ಶಕ್ತಿಗಳ ಹುನ್ನಾರಗಳನ್ನು ಎದುರಿಸುವಲ್ಲಿ ವಿಶಾಲವಾದ ಪ್ರತಿರೋಧ ಒಡ್ಡಲು ಐಕ್ಯತೆಯಿಂದ ಕಾರ್ಯ ನಿರ್ವಹಿಸಲು ಉಭಯ ಕಮ್ಯೂನಿಸ್ಟ್ ಪಕ್ಷಗಳು ನಿರ್ಧರಿಸಿವೆ. ವಿವಿಧ ಧರ್ಮನಿರಪೇಕ್ಷಿತ ರಾಜಕೀಯ ಪಕ್ಷಗಳಿಂದ ಜನರನ್ನು ಜಾಗ್ರತಿಗೊಳಿಸುವ ಪ್ರಬಲ ರಾಜಕೀಯ ಕಾರ್ಯಕ್ರಮಗಳಲ್ಲದೆ, ರಾಜ್ಯಾದ್ಯಂತ ಇತರೆ ಪ್ರಗತಿಪರರನ್ನು ಒಳಗೊಂಡು ಹಂತಹಂತವಾಗಿ ಸಮಾವೇಶ, ಸಭೆ-ಮೆರವಣಿಗೆ- ಮುಂತಾದ ಕಾರ್ಯಕ್ರಮಗಳನ್ನು ಸಂಘಟಿಸಲಾಗುವುದು.

ಮುಖ್ಯಮಂತ್ರಿಗಳೊಂದಿಗೆ ಮಾಜಿ ಕೇಂದ್ರ ಸಚಿವ ಕಾಂಗ್ರೆಸ್ ಹಿರಿಯ ನಾಯಕ ಜಾಫರ್ ಷರೀಫ್, ಗೃಹ ಕಾರ್ಯದರ್ಶಿ ಬ್ರಹ್ಮದತ್ತಾ, ಪೊಲೀಸ್ ಮಹಾನಿರ್ದೇಶಕರಾದ ಜೋರ್ಕರ್, ಅಡಿಷನಲ್ ಡಿಜಿಪಿ- ಸುಭಾಷ್ ಭರಣಿ, ಮತ್ತಿತರೆ ಉನ್ನತ ಅಧಿಕಾರಿಗಳಿದ್ದರು.

ನಿಯೋಗದಲ್ಲಿ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್.ವೈ.ಗುರುಶಾಂತ್, ಎಸ್.ಪ್ರಸನ್ನಕುಮಾರ್ ಹಾಗೂ ಸಿಪಿಐನ ರಾಜ್ಯ ಕಾರ್ಯದರ್ಶಿ ಕಾಂ.ಸಿದ್ದನಗೌಡ ಪಾಟೀಲ್, ನಾಯಕರಾದ . ಅನಂತಸುಬ್ಬರಾವ್, ಎಂ.ಸಿ.ನರಸಿಂಹನ್, ನಾಗರಾಜ್‌ರವರಿದ್ದರು.

ಕಾರಿಡಾರ್: ಪುನರ್ ವಿಮರ್ಶಾ ಸಮಿತಿ
ಬಂಡವಾಳ ಹೂಡಿಕೆದಾರರು ಪ್ರಶ್ನಾತೀತರೇನಲ್ಲ

ಕರ್ನಾಟಕದಲ್ಲಿ ಕಾಂಗ್ರೆಸ್ ಜೆ.ಡಿ(ಎಸ್) ಮೈತ್ರಿಕೂಟದ ಸರ್ಕಾರ ರಚಿತವಾದ ಬಳಿಕ ವಾದ-ವಿವಾದದ ಭಾರೀ ಧೂಳೆಬ್ಬಿಸಿ ಹಗರಣಗಳ ಗೂಡಿನಂತೆ ಕಂಡ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ನಿರ್ಮಾಣದ ಯೋಜನೆಯ ವಿವಿಧ ಆಯಾಮಗಳನ್ನು ಪುನರ್ ಪರಿಶೀಲಿಸಲು ಸಮಿತಿಯೊಂದನ್ನು ರಚಿಸುವುದಾಗಿ ರಾಜ್ಯ ಸಚಿವ ಸಂಪುಟ ಪ್ರಕಟಿಸಿದೆ.

ಈ ಯೋಜನೆಗೆ ಅಗತ್ಯಕ್ಕಿಂತಲೂ ಹೆಚ್ಚಿನ ಭೂಮಿಯನ್ನು ರೈತರಿಂದ ವಶಪಡಿಸಿ ಕೊಳ್ಳಲಾಗಿದ್ದು, ಅದನ್ನು ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ನೀಡಲಾಗಿದೆಯೆಂದೂ ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ನೈಸ್ ಕಂಪನಿ ಒಪ್ಪಂದಗಳನ್ನು ಮೀರಿದೆ. ಇದರಲ್ಲಿ ಹಲವಾರು ಅವ್ಯವಹಾರ ಅಕ್ರಮ ನಡೆದಿದೆಯೆಂದು ಮಾಜಿ ಪ್ರಧಾನಿ ದೇವೇಗೌಡರು ಹಿಂದಿನ ಕೃಷ್ಣ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿ ಸಿಬಿಐ ತನಿಖೆಗೂ ಆಗ್ರಹಿಸಿದರು.


ಅದೇ ಸಂದರ್ಭದಲ್ಲಿ ಎಸ್.ಎಂ. ಕೃಷ್ಣರವರು ವಿರೋಧ ವ್ಯಕ್ತಪಡಿಸಿ ಈ ಯೋಜನೆಯನ್ನೇ ರದ್ದುಪಡಿಸುವಂತೆ ಸಾರ್ವಜನಿಕವಾಗಿ ಸಲಹೆ ನೀಡುವ ಹಂತಕ್ಕೂ ಹೋಗಿ ವಾಗ್ವಾದದಲ್ಲಿ ತೊಡಗಿದ್ದರು, ಸಮರ್ಥಿಸಿಕೊಂಡಿದ್ದರು. ಬಳಿಕ ತಣ್ಣಗಾದಂತೆ ಕಂಡಿತು.

ಇದಾದ ಕೆಲವು ತಿಂಗಳ ನಂತರ ಈಗ ಸಚಿವ ಸಂಪುಟ ಲೋಕೋಪಯೋಗಿ ಸಚಿವ ಹೆಚ್.ಡಿ.ರೇವಣ್ಣನವರ ಸಲಹೆಗಾರ ಕೆ.ಸಿ.ರೆಡ್ಡಿಯವರ ನೇತೃತ್ವದ ಸಮಿತಿಯನ್ನು ಪ್ರಕಟಿಸಿದೆ. ಹಿಂದೆ ಒತ್ತಾಯಿಸಿದಂತೆ ಸಿಬಿಐಗೆ ಒಪ್ಪಿಸಿಲ್ಲವಾದರೂ ಈ ಸಮಿತಿ ಅದೇನನ್ನೂ ಹೊರಗೆ ತರುತ್ತದೆಯೋ ಕಾದು ನೋಡೋಣ.

ಆದರೆ ಸರ್ಕಾರದ ಇಂತಹ ನಿರ್ಧಾರವನ್ನು 'ನೈಸ್' ಕಂಪನಿ ವಿರೋಧಿಸಿದೆ. ಇದು ಸಹಜವೆ. ಈ ಕಂಪನಿ ಹಾಗೂ ಇಂತಹದ್ದರ ಸಮರ್ಥಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇದರಿಂದ ಬಂಡವಾಳ ಹೂಡಿಕೆದಾರರಿಗೆ ತಪ್ಪು, 'ಸಂಕೇತ' ಹೋಗುತ್ತದೆ ದುಷ್ಪರಿಣಾಮ ಬೀರುತ್ತದೆ' ಆದ್ದರಿಂದ ಸಮಿತಿಯನ್ನು ರಚಿಸಿ ಕೈಬಿಡಿ ಎಂದು ಆಗ್ರಹಿಸಿದ್ದಾರೆ. ಬಂಡವಾಳ ಹೂಡಿಕೆದಾರರನ್ನು ಖುಷಿ ಪಡಿಸಲು ಏನು ಬೇಕಾದರೂ ಸರ್ಕಾರಗಳು ಮಾಡಬಹುದು. ಮಾಡಬೇಕು ಎಂಬ ವಾದವೇ ಅತ್ಯಂತ ವಂಚಕತನದ್ದು, ಮಾತ್ರವಲ್ಲ ಎಲ್ಲಾ ಹಗರಣಗಳನ್ನು ಮುಚ್ಚಿಹಾಕಬೇಕೆಂಬ ಒತ್ತಾಯವೂ ಆಗಿದೆ. ಇವರೆಲ್ಲರೂ ಎಲ್ಲಾ ಕಾನೂನು, ರೀತಿ ನೀತಿಗಳಿಗೆ ಅತೀತರೇನೂ ಅಲ್ಲ ಎಂಬುದನ್ನು ದೃಢವಾಗಿ ಪ್ರತಿಪಾದಿಸಬೇಕು.

ದ್ವಾಪಲಾಪುರ : ಪುನರ್ವಸತಿ ಅಷ್ಟೇ ಸಾಕೇ?

ಹಿರಿಯ ಕಾಂಗ್ರೆಸ್ ಮುಖಂಡ, ನಗರಸಭಾ ಸದಸ್ಯ ಗಿರಿಜಾಶಂಕರ್ ಮತ್ತು ಅವರ ಸ್ನೇಹಿತ ಜಯಪ್ರಕಾಶ್ ಎಂಬುವರ ಕಗ್ಗೊಲೆ ಬಳಿಕ ನಾಲ್ಕು ಹಳ್ಳಿಗಳ ಸುಮಾರು 54 ಮನೆಗಳ ಸುಟ್ಟು, 12 ಕ್ಕೂ ಹೆಚ್ಚಿನ ಮನೆಗಳ ಜಖಂ ಆಗಿ ತಲ್ಲಣಗೊಳಿಸಿದ್ದ ಹಾಸನ ತಾಲ್ಲೂಕಿನ ದ್ವಾಪಲಾಪುರ ಮತ್ತ ಸುತ್ತಲಿನ ಗ್ರಾಮಗಳ ಹಾನಿಗೀಡಾದವರಿಗೆ ಪುನರ್ವಸತಿ ಕಲ್ಪಿಸುವುದಾಗಿ ಜಿಲ್ಲಾ ಆಡಳಿತ ಪ್ರಕಟಿಸಿದೆ. ಇದು ಬೆಂದುಹೋದವರಿಗೆ ಒಂದೆರಡು ಹನಿಗಳ ಸಾಂತ್ವನ ದೊರಕಿಸಬಹುದು. ಆದರೆ ಇಂತಹ ಭೀಕರ ಘಟನೆ ನಡೆದದ್ದಾದರೂ ಹೇಗೆ ಎಂಬ ಬಗ್ಗೆ ಮೂಲ ಚಿಂತನೆ, ಲೋಪ-ದೋಷಗಳನ್ನು ಗುರುತಿಸುವ ಕೆಲಸ ಆಗಿದೆಯೇ?



ಕಾಂಗ್ರೆಸ್ ಮುಖಂಡರನ್ನು ಕೊಚ್ಚಿ ಕೊಂದಿದ್ದಾಗಲಿ, ಅದಕ್ಕೆ ಪ್ರತಿಕಾರವಾಗಿ ನಾಲ್ಕು ಹಳ್ಳಿಗಳ ಮೇಲೆ ಧಾಳಿ ನಡೆದು ಅನಾಹುತಕಾರಿ ಘಟನೆಗಳಾಗಿವೆ. ದೊರೆತಿರುವ ಮಾಹಿತಿಗಳಂತೆ ಇದಕ್ಕೆ ರಾಜಕೀಯ ದ್ವೇಷದ ಹಿನ್ನೆಲೆಯಿದೆ. ಜಾತಿ ವೈಷಮ್ಯ ಮೆರೆದಿದೆ. ಮೇಲಾಗಿ ಇಷ್ಟು ಪ್ರಮಾಣದ ಅನಾಹುತ ಸಂಭವಿಸಲು ಪೊಲೀಸರ ದಿವ್ಯ (ಪ್ರಜಾಪೂರ್ವಕ) ನಿರ್ಲಕ್ಷ್ಯವೂ ಪ್ರಮುಖವಾಗಿದೆ. ಜಿಲ್ಲಾಡಳಿತದಿಂದ ಕೆಲವೆ ಕಿ.ಮೀ ದೂರವಿರುವ ಈ ದ್ವಾಪಲಾಪುರದಲ್ಲಿ ಇಂತಹ ಅಂದಾದುಂಧಿ ನಡೆಯಲು ಪೊಲೀಸರು ಬೇರಾವುದೇ ಹಲವು ಪ್ರಶ್ನೆಗಳನ್ನೆಬ್ಬಿಸಿದೆ. ಪೊಲೀಸರ ವೈಫಲ್ಯವನ್ನು ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿದ್ದಾರೆ. ಅಲ್ಲಿಗೆ ಭೇಟಿ ನೀಡಿದ ಆಡಳಿತ ಮತ್ತು ವಿರೋಧ ಪಕ್ಷದ ನಾಯಕರು ಹೇಳಿಕೆಗಳನ್ನು ನೀಡಿ ಬಂದಿದ್ದಾರೆ. ಆದರೆ ಮೂಲ ಕಾರಣಗಳನ್ನು ಪತ್ತೆಹಚ್ಚಿ ಪರಿಹಾರ ಸೂಚಿಸುವುದು ಆಗಲೇ ಇಲ್ಲ. ಕೇವಲ ಒಬ್ಬಿಬ್ಬರು ಅಧಿಕಾರಿಗಳನ್ನಷ್ಟೇ ದೂರಿ 'ಕ್ರಮ' ವಹಿಸಿದ್ದು, ಪರಿಹಾರ ಪ್ರಕಟಿಸಿದ್ದು ತೋರಿಕೆಯ ಕ್ರಮ ಅನ್ನಿಸುತ್ತದೆ. ಈ ಬಗ್ಗೆ ಪೂರ್ಣ ತನಿಖೆ ನಡೆದು ಸತ್ಯ ಸಂಗತಿಗಳು ಹೊರಬರಬೇಕಿದೆ. ಕ್ರಮ ವಹಿಸಬೇಕಿದೆ.

ಹುಂಡಿಪ್ರಿಯ ಮಠಾಧೀಶರಿಗೆ ಸಂಘ ಪರಿವಾರದ ಬೆಂಗಾವಲು

ಉಡುಪಿಯ ಕೃಷ್ಣ ದೇವಸ್ಥಾನವನ್ನು ಮುಜರಾಯಿ ಧಾರ್ಮಿಕ ಇಲಾಖೆಯ ಅಡಿಯಲ್ಲಿ ಬರುವಂತೆ ಹಿಂದಿನ ಸರ್ಕಾರ ಹೊರಡಿಸಿದ್ದ ಪ್ರಕಟಣೆ ಜಾರಿಯಾಗದಂತೆ ತಾತ್ಕಾಲಿಕವಾಗಿ ತಡೆಯಾಜ್ಞೆಯನ್ನು ಹೈಕೋರ್ಟ್ ನೀಡಿದೆ. ಅದು ಕೃಷ್ಣಮಠ, ಅದರ ಪೂಜಾ ವ್ಯವಹಾರ ಅಲ್ಲಿನ ಅಷ್ಟಮಠಗಳ ಸುಪರ್ದಿಗೆ ಇದೆ ಎಂದು ಪ್ರತಿಪಾದಿಸಿ ಅಷ್ಟಮಠಗಳ ಮಠಾಧೀಶರು ನ್ಯಾಯಾಲಯದ ಮೊರೆ ಹೋಗಿದ್ದರು.

ಸದ್ಯಕ್ಕೆ ತಡೆಯಾಜ್ಞೆ ಸಿಕ್ಕಿದೆ. ಆದರೆ ಆ ಎಲ್ಲಾ ಆಸ್ತಿ ಸರ್ಕಾರದ ವ್ಯಾಪ್ತಿಗೆ ಸೇರುವಂತಹದ್ದು, ಅದಕ್ಕೆ ಬೇಕಾದ ದಾಖಲೆಗಳಿವೆ, ಬಹಿರಂಗಪಡಿಸ

ಪುಟ 11 ಕ್ಕೆ

ದತ್ತ ವಿಗ್ರಹ ಸ್ಥಾಪನೆ- ವಿಫಲವಾದ ಭಜರಂಗಿಗಳ ನಾಟಕ

ಕೇವಲ 2-3 ವರ್ಷಗಳ ಹಿಂದಷ್ಟೇ ಸಣ್ಣದಾಗಿ 'ದತ್ತಮಾಲೆ ಅಭಿಯಾನ' ಎಂಬ ಹೆಸರಿನಲ್ಲಿ ಕೋಮುವಾದಿಗಳು ಬಾಬಾಬುಡನ್‌ಗಿರಿ ದತ್ತಪೀಠದಲ್ಲಿ ಹೊಸದೊಂದು ಪೂಜಾವಿಧಾನದ ಕಸರತ್ತನ್ನು ಆರಂಭಿಸಿದ್ದರು. ಇದನ್ನು ವರ್ಷದಿಂದ ವರ್ಷಕ್ಕೆ ವೈಭವೀಕರಿಸಿ ಮತ್ತೊಂದು ದೊಡ್ಡ ಜಾತ್ರೆಯನ್ನಾಗಿ ಮಾಡಲು ಹೊರಟಿದ್ದಾರೆ. ಇದಲ್ಲದೆ ಇದೀಗ ಪ್ರತಿ ಹುಣ್ಣಿಮೆಯ ದಿನಗಳಲ್ಲಿ ಬಾಬಾ ಬುಡನ್‌ಗಿರಿಗೆ ಕೆಲವರು ತೆರಳಿ ಅಲ್ಲಿ ಪೂಜೆ ಸಲ್ಲಿಸುವ ಮತ್ತೊಂದು ಪ್ರಯೋಗ ಪ್ರಾರಂಭಿಸಿದ್ದಾರೆ.

ಈ ನಿಟ್ಟಿನಲ್ಲಿ ಈ ವರ್ಷದ ದತ್ತ ಮಾಲೆ ಅಭಿಯಾನವನ್ನು ಅಕ್ಟೋಬರ್ 25 ರಿಂದ 31 ರವರೆಗೆ ನಡೆಸುವುದೆಂದು ಘೋಷಿಸಿ 25 ರಂದು ದತ್ತ ಭಕ್ತರು ದತ್ತಮಾಲೆ ಹಾಕಿ ವ್ರತ ಪ್ರಾರಂಭಿಸಿ 31 ರಂದು (ಬಾಬಾಬುಡನ್ ಗಿರಿ) ದತ್ತಪೀಠಕ್ಕೆ


ದತ್ತ ವಿಗ್ರಹವನ್ನು ಸ್ಥಳಾಂತರಿಸುತ್ತಿರುವ ಪೊಲೀಸರು

ಇರುಮುಡಿ ಕಟ್ಟಿ ಹೊರಡುವುದೆಂದು ತೀರ್ಮಾನಿಸಿದ್ದಾರೆ.

ಯಾವುದೇ ನೀತಿ ನಿಮಯಗಳನ್ನಾಗಲೀ, ಕಾನೂನು ಕಟ್ಟಳೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಇವರು ಸದಾ ಬಾಬಾಬುಡನ್ ಗಿರಿಯ ಬಗ್ಗೆ, ಸುಪ್ರೀಂ ಕೋರ್ಟ್ 1975 ನೇ ಸಾಲಿನ ಹಿಂದೆ ಇದ್ದ ಯಥಾ ಸ್ಥಿತಿಯನ್ನು ಕಾಯಬೇಕೆಂದು ನೀಡಿದ ತೀರ್ಪನ್ನು ಉಲ್ಲಂಘಿಸುತ್ತಾ ಆಗಿಂದಾಗ್ಗೆ ಹೊಸ ಹೊಸ ಪೂಜಾ ವಿಧಾನವನ್ನು ಅಳವಡಿಸಿ ಕೊಳ್ಳುತ್ತಿದ್ದಾರೆ.

ಸಣ್ಣದಾಗಿ ನಡೆಸುತ್ತಿದ್ದ ದತ್ತಮಾಲೆ ಅಭಿಯಾನ ಪೂಜಾ ಕಾರ್ಯಕ್ರಮವನ್ನು ಈ ಸಲ ಸಾರ್ವತ್ರಿಕಗೊಳಿಸಲು ಹೊರಟಿದ್ದು, ಆ ದಿಸೆಯಲ್ಲಿ ಚಿಕ್ಕಮಗಳೂರಿನ ವಿಜಯಪುರ ಬಡಾವಣೆಯಲ್ಲಿ ಗಣಪತಿ ವಿಗ್ರಹ ನಂತರ ದುರ್ಗಾ ದೇವಿಯ ವಿಗ್ರಹಗಳನ್ನಿಟ್ಟು ಪೂಜೆ ನಡೆಸಿದ (ದಸರಾ ಪ್ರಯುಕ್ತ) ಮಹಾನವಮಿ ಪ್ರಯುಕ್ತದ ಮಂಟಪದಲ್ಲಿ ಅಕ್ಟೋಬರ್ 24ರ ರಾತ್ರಿ ಪೋಲೀಸರ ಅಪ್ಪಣೆ ಯಾಗಲೀ, ನಗರ ಸಭೆಯ ಅಪ್ಪಣೆಯನ್ನಾಗಲೀ ಪಡೆಯದೇ ದತ್ತಮೂರ್ತಿಯ ವಿಗ್ರಹವನ್ನು ತಂದಿಟ್ಟು ಪೂಜೆ ಪ್ರಾರಂಭಿಸಿ, 25 ರಂದು ಬಜರಂಗ ದಳದ ದತ್ತ ಭಕ್ತರೆನಿಸಿಕೊಂಡ ಪಡ್ಡೆ ಹುಡುಗರು ಮತ್ತು ಗೂಂಡಾಗಳಿಗೆ ದತ್ತ ಮಾಲೆ

ಚಿಕ್ಕಮಗಳೂರು

ಹಾಕುವ ಕಾರ್ಯಕ್ರಮ ನಡೆಸಿದರು.

ಈ ಜಾಗ ವಕ್ಫ್ ಮಂಡಳಿಗೆ ಸೇರಿದ್ದು ಮತ್ತು ನಗರ ಸಭೆಯ ಮತ್ತು ಪೊಲೀಸರ ಪರವಾನಗಿ ಪಡೆದಿಲ್ಲವೆಂಬ ಹಿನ್ನಲೆಯಲ್ಲಿ ವಿವಾದ ಪ್ರಾರಂಭವಾಗಿ ಜಿಲ್ಲಾಡಳಿತ ಕರೆದ ಸಭೆಯಲ್ಲಿ ವಿವಿಧ ಮುಖಂಡರುಗಳನ್ನು ಕರೆಸಿ ಅವರ ಅಹವಾಲುಗಳನ್ನು ಕೇಳಿದ ನಂತರ 25 ರ ರಾತ್ರಿ ಎಂಟು ಗಂಟೆಯೊಳಗೆ ದತ್ತಾತ್ರೇಯ ವಿಗ್ರಹವನ್ನು ಆ ಸ್ಥಳದಿಂದ ಸ್ಥಳಾಂತರಿಸಬೇಕೆಂದು ಜಿಲ್ಲಾಧಿಕಾರಿ ಯವರು ಆದೇಶ ನೀಡಿದ್ದರು. ಆದರೆ ಈ ಆದೇಶವನ್ನು ಪಾಲಿಸಲಾಗುವುದಿಲ್ಲವೆಂದು, ತಮ್ಮ ಹೆಣದ ಮೇಲೆ ದತ್ತಾತ್ರೇಯ ವಿಗ್ರಹವನ್ನು ತೆರವು ಮಾಡಬೇಕೆಂದು ಶಾಸಕ ಸಿ.ಟಿ. ರವಿ ಹಠ ಹಿಡಿದರು. ದತ್ತಾತ್ರೇಯ ಮೂರ್ತಿಯ ಎದುರು ಸಿ.ಟಿ.ರವಿಯ ನೇತೃತ್ವದಲ್ಲಿ ಇನ್ನಿತರ ಸಂಘ ಪರಿವಾರದ ಮುಖಂಡರು ದತ್ತ ಭಕ್ತರೆನಿಸಿಕೊಂಡ ಬಜರಂಗದಳದವರು ಸೀಮೆ ಎಣ್ಣೆ, ವಿಷದ ಬಾಟಲುಗಳನ್ನಿಡಿದು ಪೊಲೀಸರೇನಾದರೂ ವಿಗ್ರಹ ಮುಟ್ಟಿದರೆ ಆತ್ಮಾಹುತಿ ಮಾಡುತ್ತೇವೆಂದು ಅಲ್ಲಿ ಕುಳಿತರು. ರಾತ್ರಿ ಇಡೀ ಭಜನೆ ಮಾಡುತ್ತಿದ್ದರು.

ಆದರೆ ಜಿಲ್ಲಾಧಿಕಾರಿ ರಾಜೇಂದ್ರ ಸಿಂಗ್ ಕಠಾರಿಯ ಮತ್ತು ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ಪೊಲೀಸರು ಮತ್ತು ನಗರಸಭಾ ನೌಕರರು 26 ರ ಬೆಳಗಿನ ಜಾವ 3 ಗಂಟೆಗೆ ಕಾರ್ಯಾಚರಣೆ ನಡೆಸಿ ವಿಗ್ರಹವನ್ನು ಅಲ್ಲಿಂದ ಬಸವನಹಳ್ಳಿ ಪೊಲೀಸ್ ಠಾಣೆಗೆ ಸ್ಥಳಾಂತರಿಸಿದರು ಹಾಗೂ ಮಂಟಪವನ್ನು ಸಂಪೂರ್ಣವಾಗಿ ನೆಲಸಮ ಮಾಡಿದರು. ಈ ಸಂದರ್ಭದಲ್ಲಿ ಬೆಂಕಿ ಹಚ್ಚಿ ಆತ್ಮಾಹುತಿ ನಾಟಕ ನಡೆಸಿದ ಸಿ.ಟಿ. ರವಿ ಮತ್ತಿತರರನ್ನು ಬಲಾತ್ಕಾರ ವಾಗಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ ನಂತರ ಅವರನ್ನು ನ್ಯಾಯಾಂಗ ಬಂಧನದಲ್ಲಿಡಲು ನ್ಯಾಯಾಲಯ ಆದೇಶಿಸಿದೆ. ನೂಕಾಟ, ತಳ್ಳಾಟದಲ್ಲಿ ಮತ್ತು ಬೆಂಕಿ ಹಚ್ಚಿ ಆತ್ಮಾಹುತಿಗೆ ಪ್ರಯತ್ನಿಸಿದ ಶಾಸಕರಿಗೆ ಚಿಕ್ಕಪುಟ್ಟ ಗಾಯಗಳಾಗಿವೆಯೆಂದು ಆಸ್ಪತ್ರೆಗೆ ಸೇರಿಸಲಾಗಿದೆ.

ಈ ಘಟನೆಯ ನಂತರ ಸಂಘ ಪರಿವಾರದವರು ರಂಪಾಟ ಮಾಡುತ್ತಿದ್ದರೂ ಚಿಕ್ಕಮಗಳೂರಿನ ಜನತೆ ಅಂತಹ ಪ್ರತಿಕ್ರಿಯೆಯನ್ನು ತೋರಿಸಿಲ್ಲ. 27 ರಂದು ಅರ್ಧದಿನ ಬಂದ್‌ಗೆ ಕರೆ ನೀಡಿದರೂ ಭಯದಿಂದ ಅಲ್ಲಲ್ಲಿ ಬಂದ್ ನಡೆಸಿದ್ದೂ ಘಟನೆಯ ಸಹಾನುಭೂತಿಯಿಂದಲ್ಲ.

ಬೇಜವಾಬ್ದಾರಿ ಶಾಸಕನ ದ್ರೋಹತನ

ಜನತೆಯ ವಿವಿಧ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಒಬ್ಬ ಜನ ಪ್ರತಿನಿಧಿ, ಕಾನೂನನ್ನು ಪಾಲಿಸಬೇಕಾದ ಶಾಸಕ ತಾನೇ ಕಾನೂನನ್ನು ಮುರಿದು ತನಗೆ ಮತವಿತ್ತ ಜನತೆಗೆ ದ್ರೋಹವೆಸಗಿದ್ದಾರೆ. ಒಂದು ಕೋಮಿನ ಪರವಾಗಿ ವಿಗ್ರಹವನ್ನು ಪ್ರತಿಷ್ಠಾಪಿಸಲು ಒತ್ತಾಯಿಸಿ ಬಹಿರಂಗವಾಗಿ ಸೀಮೆ ಎಣ್ಣೆ ಸುರಿತು ಆತ್ಮಾಹುತಿಗೆ ಮುಂದಾದ್ದು ನಿಜಕ್ಕೂ ನಾಚಿಕೆಗೇಡು.

ಜಿಲ್ಲಾಡಳಿತ ಹಾಗೂ ಪೊಲೀಸ್ ಜಿಲ್ಲಾಧಿಕಾರಿ ಗಳು ವ್ಯಕ್ತಿ ಹಾಗೂ ಪಕ್ಷ ಎಷ್ಟೆ ದೊಡ್ಡದಾಗಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೇ, ಕಾನೂನು ಬಾಹಿರವಾಗಿ ಪ್ರತಿಷ್ಠಾಪಿಸಿದ ವಿಗ್ರಹವನ್ನು ಸ್ಥಳಾಂತರಿಸಲು, ಆ ಸ್ಥಳದಲ್ಲಿದ್ದ ತಾತ್ಕಾಲಿಕ ಮಂಟಪವನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದ್ದು ಶ್ಲಾಘನೀಯ. ಮುಂದೆ ಸಹ ಈ ಕೋಮುವಾದಿಗಳ ಎಲ್ಲಾ ಅಟ್ಟಹಾಸಕ್ಕೆ ತೆರೆ ಎಳೆಯಲು ಜಿಲ್ಲಾಡಳಿತ ಮತ್ತು ಸರ್ಕಾರ ದಿಟ್ಟ ಕ್ರಮವಹಿಸಿ ಜಿಲ್ಲೆಯ ಶಾಂತಿಪ್ರಿಯ ಜನತೆ ನೆಮ್ಮದಿ ಯಿಂದ ಜೀವಿಸಲು ಅವಕಾಶ ಕೊಡಬೇಕಾಗಿದೆ.

● ವಿ.ಸುಕುಮಾರ್ ಚಿಕ್ಕಮಗಳೂರು

ಮಂಗಳೂರು ನಗರಪಾಲಿಕೆ ಜಂಟಿ ಆಯುಕ್ತರ ದಲಿತ ವಿರೋಧಿ ನೀತಿಗೆ ಡಿವೈಎಫ್‌ಐ ಪ್ರತಿಭಟನೆ

ಮಂಗಳೂರು ನಗರ ಪಾಲಿಗೆ ಜಂಟಿ ಆಯುಕ್ತ ಕೃಷ್ಣಪ್ಪ ಪೂಜಾರಿಯವರ ದಲಿತ ವಿರೋಧಿ, ಸರ್ವಾಧಿಕಾರಿ ನೀತಿಯನ್ನು ವಿರೋಧಿಸಿ ಡಿವೈಎಫ್‌ಐ ಕೊಂಚಾಡಿ ಘಟಕದ ನೇತೃತ್ವದಲ್ಲಿ ನಗರ ಪಾಲಿಕೆಯ ಎದುರು ಪ್ರತಿಭಟನೆಯನ್ನು ನಡೆಸಲಾಯಿತು.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಹೊರಟು ಮೆರವಣಿಗೆಯ ಮೂಲಕ ಸಾಗಿದ ನೂರಾರು ಡಿವೈಎಫ್‌ಐ ಕಾರ್ಯಕರ್ತರು - ಶೇ 18 ಲ್ಲಿ ಅಭಿವೃದ್ಧಿಗಾಗಿ ಮೀಸಲಿಟ್ಟ ಕೋಟಿಗಟ್ಟಲೆ ಹಣ ಎಲ್ಲಿಗೆ ಹೋಯಿತು? ದಲಿತ ವಿರೋಧಿ ಕೃಷ್ಣಪ್ಪ ಪೂಜಾರಿಗೆ ಧಿಕ್ಕಾರ ಮುಂತಾದ ಘೋಷಣೆಗಳನ್ನು ಹಾಕುತ್ತಾ ನಗರ ಪಾಲಿಕೆಯ ಎದುರು ಜಮಾಯಿಸಿದರು.

ಬಳಿಕ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದ ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷರಾದ ಸುನೀಲ್ ಕುಮಾರ್ ಬಜಾಲ್‌ರವರು ದಲಿತರಿಗೆ ನ್ಯಾಯಯುತವಾಗಿ ದೊರಕಬೇಕಾದ ಮೂಲಭೂತ ಸೌಕರ್ಯವನ್ನು ಕಲ್ಪಿಸದೆ ಅವರ ಮೇಲೆ ದೌರ್ಜನ್ಯವನ್ನು ಎಸಗುತ್ತಿದ್ದಾರೆ ಈ ಅಧಿಕಾರಿಗಳು. ನಗರದಲ್ಲಿ ನಾಯಿ ಕೊಡೆಗಳಂತೆ ಅಕ್ರಮವಾಗಿ ತಲೆ ಎತ್ತಿ ನಿಂತಿರುವ ಬೃಹತ್ ಕಟ್ಟಡಗಳಿಗೆ ಅವಕಾಶವನ್ನು ಕಲ್ಪಿಸಿದ್ದಾರೆ, ಮಾತ್ರವಲ್ಲದೆ ಅವರಜೊತೆ ಗುಪ್ತವಾಗಿ ವ್ಯವಹಾರ ನಡೆಸುತ್ತಿದ್ದಾರೆ ಎಂದು ನಗರ ಪಾಲಿಕೆಯ ದುರ್ವತನೆಯ ವಿರುದ್ಧ ಕಿಡಿ ಕಾರಿದರು.

ದಲಿತರನ್ನು ಹರಿಜನರೆಂದೂ ಕರೆಯುವುದು ಕಾನೂನು ಬಾಹಿರವಾದರೂ ಅದನ್ನು ಪ್ರಯೋಗಿಸಿ ದಲಿತರಿಗೆ ಜಾತಿ ನಿಂದನೆ ಮಾಡಿದ್ದಾರೆ. ಅವರನ್ನು ಶೋಷಣೆ ಮಾಡಲು ಹೊರಟಿರುವ ಕೃಷ್ಣಪ್ಪ ಪೂಜಾರಿಯ ಜಾತಿ ಬಾಂಧವರಿಗೆ ಮಂದಾರ್ತಿ



ಮೇಳದಲ್ಲಿ ಜಾತಿ ತಾರತಮ್ಯ ಮಾಡಿ ಅಸ್ಪೃಶ್ಯತೆಯನ್ನು ಆಚರಿಸಿದಾಗ ಅದರ ವಿರುದ್ಧ ಹೋರಾಟ ಮಾಡಿ ಅವರಿಗೆ ನ್ಯಾಯವನ್ನು ಒದಗಿಸಿಕೊಟ್ಟಿರುವ ಘಟನೆ ನೆನಪಿರಲಿ ಎಂದು ತಿರುಗೇಟು ನೀಡಿದರು. ತಮಿಳುನಾಡು, ಪ.ಬಂಗಾಳ, ಆಂಧ್ರಪ್ರದೇಶಗಳಲ್ಲಿ ಅಸ್ಪೃಯತೆಯ ವಿರುದ್ಧ ಡಿವೈಎಫ್‌ಐ ಅವಿರತ ಹೋರಾಟ ನಡೆಸಿ ನ್ಯಾಯವನ್ನು ಪಡೆದಿದೆ. ಆದ್ದರಿಂದ ಕೃಷ್ಣಪ್ಪ ಪೂಜಾರಿಯವರು ಸಂಘರ್ಷಕ್ಕೆ ಇಳಿಯಬೇಡಿ ಎಂದು ಎಚ್ಚರಿಕೆಯನ್ನು ನೀಡಿದರು.

ನಗರಾಧ್ಯಕ್ಷ ಮುನೀರ್ ಕಾಟಿಪಲ್ಲಿಯವರು ಮಾತನಾಡಿ ಮೇಲಧಿಕಾರಿಗಳು ತಪ್ಪೆಸಗಿದಾಗ ಕೆಲವೊಂದು ಸ್ವಯಂ ಘೋಷಿತ ದಲಿತ ನಾಯಕರುಗಳು ಅವರನ್ನು ರಕ್ಷಣೆ ಮಾಡಲು ಆಸಕ್ತಿ ವಹಿಸುವುದು ನೋಡಿದರೆ ಅವರೆಲ್ಲಾ ಮೇಲ್ವರ್ಗದ ದಲಿತರ ಹಿತಾಸಕ್ತಿಯನ್ನು ಬಯಸುವವರು ಎಂದು ತಿಳಿದುಬರುತ್ತದೆ" ಎಂದರು.

ಈ ಸಂದರ್ಭದಲ್ಲಿ ಡಿವೈಎಫ್‌ಐ ನಗರ ಕಾರ್ಯದರ್ಶಿ ಸಂತೋಷ್ ನೀತಿನಗರ, ಜಿಲ್ಲಾ ಖಜಾಂಚಿ ದಯಾನಂದ ಶೆಟ್ಟಿ ಇವರುಗಳು ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಯಾದವ ಕೆ., ಸುನಂದ ಕೆ., ನಾರಾಯಣಕೊಂಚಾಡಿ, ಆನಂದ, ವೆಂಕಟೇಶ್, ಲೋಕೇಶ್, ದಯಾನಂದ್, ರವಿಚಂದ್ರ ಕೆ. ಕೂಸಪ್ಪ ಇವರುಗಳು ವಹಿಸಿದ್ದರು.

ಪ್ರಾರಂಭದಲ್ಲಿ ಹೇಮಂತ್‌ರವರು ಸ್ವಾಗತಿಸಿ, ಹರಿಣಾಕ್ಷಿಯವರು ವಂದಿಸಿದರು. ○

ಶಹಾಪುರ

ಅಕ್ಕಿ ಹಗರಣ ಜಾಲದ ಪ್ರಮುಖರ ಬಂಧನಕ್ಕೆ ಆಗ್ರಹಿಸಿ ಪೊಲೀಸ್ ಠಾಣೆ ಮುತ್ತಿಗೆ

ಕರ್ನಾಟಕ ಪ್ರಾಂತ ರೈತ ಸಂಘವು ಬರಗಾಲ ಕಾಮಗಾರಿ ಕೆಲಸಕ್ಕೆ ಬಂದ ಅಕ್ಕಿ ಆಂಧ್ರ ಮತ್ತು ಮಹಾರಾಷ್ಟ್ರಗಳ ರಾಜ್ಯಗಳಿಗೆ ಕಳ್ಳಸಾಗಾಣಿಕೆ ಮೂಲಕ ಮಾರಾಟವಾಗುತ್ತಿದೆ ಎಂದು ಸರ್ಕಾರಕ್ಕೆ ಹಲವಾರು ಸಲ ಎಚ್ಚರಿಸುತ್ತಾ ಬಂದಿತು. ಅದನ್ನು ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲೂಕಿನ ಸೈದ್ದಾಪುರ ಗ್ರಾಮದಲ್ಲಿ ಹಿಡಿಯುವ ಮೂಲಕ ಸಾಬೀತುಪಡಿಸಿತು. ಆದರೆ ಸರ್ಕಾರವು ಭ್ರಷ್ಟ ರಾಜಕೀಯ ಚುನಾಯಿತ ಸದಸ್ಯರ ನೀತಿಯಿಂದ ಹಾಗೂ ಭ್ರಷ್ಟ ಇಂಜನಿಯರ್‌ಗಳಿಂದ ನೀತಿಯಿಂದ ತಡೆಯಲು ವಿಫಲವಾಯಿತು. ಇದನ್ನು ಪುನಃ ಸೆಪ್ಟೆಂಬರ್ 29 ಮಧ್ಯರಾತ್ರಿ ಶಹಾಪುರ ತಾಲೂಕಿನ ಕನ್ಯೆಕೊಳ್ಳೂರ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟು ಆಂಧ್ರಪ್ರದೇಶಕ್ಕೆ ಕಳ್ಳ ಸಾಗಾಣಿಕೆ ಮಾಡುತ್ತಿರುವುದನ್ನು ಲಾರಿ ನಂ.AP21 643 ಹಿಡಿದು ಮಲ್ಲಪ್ಪ ಉಪ್ಪಾರವರ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ.

ಪೊಲೀಸರಿಗೆ ದೂರು ನೀಡಿದರೂ ಕೂಡಾ ಗಂಭೀರವಾಗಿ ಪರಿಗಣಿಸದೆ ಇದ್ದುದರಿಂದ ತಕ್ಷಣವೇ ಎಸ್.ಪಿ.ಯವರಿಗೆ ಹೇಳಲಾಯಿತು, ರಾತ್ರಿ 11 ಗಂಟೆಗೆ ಕನ್ಯೆಕೊಳ್ಳರ ಗ್ರಾಮಕ್ಕೆ ಹೋಗಿ ಪೊಲೀಸರು ಅಕ್ಕಿ ಇಲ್ಲವೆಂದು ವಾಪಸ್ ಆಗುತ್ತಿರುವಾಗ ಖುದ್ದಾಗಿ ಕೃಷಿಕೂಲಿಕಾರ ಸಂಘಟನೆ ಸಂಚಾಲಕರಾದ ದವಲಸಾಬ, ದಾಸ್ ಹಾಗೂ ಎಸ್‌ಎಫ್‌ಐ ತಾಲೂಕು ಮುಖಂಡರಾದ ರಾಮಣ್ಣಗೌಡ ಮನೆಯನ್ನು ಗುರುತು ಹಚ್ಚಿದ್ದಾರೆ. ಕಬ್ಬಿಣ ಗೇಟಿನ ಕೀಲಿ ಮುರಿದ ಬಳಿಕ ಅಕ್ಕಿ ತೋರಿಸಿದರು.

ಆದರೆ ಭ್ರಷ್ಟ ಪೊಲೀಸ್ ವ್ಯವಸ್ಥೆಯಿಂದ ಹಾಗೂ ಅಧಿಕಾರಸ್ಥ ರಾಜಕೀಯ ಪ್ರಭಾವದಿಂದ ಪೊಲೀಸರು ಸರಳ ಕೇಸ್ ಹಾಕಿ ಮಲ್ಲಪ್ಪನನ್ನು ಬಂಧಿಸಿ ನಂತರ ಕೋರ್ಟ್‌ನ ಬೇಲ್ ಮೇಲೆ ಬಿಡುಗಡೆ ಮಾಡಿದ್ದಾರೆ. ಇದನ್ನು ಪ್ರತಿಭಟಿಸಿ ಸೆಪ್ಟೆಂಬರ್ 30ರಂದು ಸುಮಾರು 400 ಜನ ರೈತರು-ಕೃಷಿ ಕೂಲಿಕಾರರು ಮಹಿಳೆಯರು ಸೇರಿಕೊಂಡು ಪೊಲೀಸ್ ಸ್ಟೇಷನ್ ಮುತ್ತಿಗೆ ಹಾಕಿ ಕೂಡಲೇ ಕಳ್ಳಸಾಗಾಣಿಕೆ ಜಾಲದ ಪ್ರಮುಖರನ್ನು ಬಂಧಿಸಿ ಸಿಬಿಐ ತನಿಖೆಗೆ ಒಪ್ಪಿಸಿ, ಕೂಲಿಕಾರರಿಗೆ ಕೆಲಸ ಒದಗಿಸ ಬೇಕೆಂದು ಒತ್ತಾಯಿಸಿದರು.

ಸಭೆಯನ್ನುದ್ದೇಶಿಸಿ ರೈತಸಂಘದ ಮುಖಂಡರಾದ ಚನ್ನಪ್ಪ ಆನೇಗುಂದಿ ಮಾತನಾಡಿದರು.

ಮುತ್ತಿಗೆ ನೇತೃತ್ವವನ್ನು ಜೆ.ಎಂ.ಎಸ್‌ನ ಮುಖಂಡರಾದ ನಿರ್ಮಲ ಉಪ್ಪಿನ, ರಾಜೇಶ್ವರಿ.ಪಿ.ಶೆಟ್ಟಿ, ಎಸ್‌ಎಫ್‌ಐನ ಮುಖಂಡ ರಾಮಣ್ಣಗೌಡ ಆಲ್ದಾಳ, ರೈತಸಂಘದ ತಾಲೂಕು ಅಧ್ಯಕ್ಷರಾದ ಅಪ್ಪಣ್ಣಗೌಡ ದಾವಲ್‌ಸಾಬ್ ಇನ್ನಿತರು ವಹಿಸಿದ್ದರು.

ಅಕ್ಕಿಹಗರಣ

ಮಂತ್ರಿಗಳ ಶಾಮೀಲು ಇಲ್ಲದೆ ಕೇಳು
ಇಂಥಹಾ ಹಗರಣವು ನಡೆದೀತೆ ಹೇಳು?
ಹಿಂಬದಿಗೆ ಅವಿತಿರುವ ಬಹುದೊಡ್ಡ ಕಳ್ಳ
ಇಂಥವನ ಸೆರೆಹಿಡಿವ ಎದೆಗಾರ ಇಲ್ಲ
- ವಿಡಂಬಾರಿ

ನಿರಾಶೆಯಿಂದ ಹತಾಶೆಯ ಸ್ಥಿತಿಯನ್ನು ಅನುಭವಿಸುತ್ತಿರುವ ಬಿಜೆಪಿ ಎತ್ತ ಹೋಗಲಿ ಎಂಬುದನ್ನೇ ತಿಳಿಯದಾಗಿದೆ. ಈಗ ಅಧ್ಯಕ್ಷನನ್ನಾಗಿಸಿಕೊಂಡಿರುವುದು ಕೋಮುವಾದೀ ಆಕ್ರಮಣದಿಂದ ಜಿಗಿಯಬಹುದು ಎಂಬ ಆಶೆಯಿಂದ. ಇಂತಹ ಹಲವಾರು ವಿಫಲ ಪ್ರಯೋಗಗಳನ್ನು ಮಾಡುತ್ತಾ ಬಂದಿರುವ ಬಿಜೆಪಿ ಹೊಸ ಆಶೆಗಳಿಲ್ಲವಾದರೂ, ಹಲವಾರು ಬೆದರಿಕೆಗಳನ್ನು ಇಂದಿನ ಸ್ಥಿತಿ-ಸಂಘ ಪರಿವಾರದ ವರಸೆಗಳನ್ನು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಹಿರಿಯ ನಾಯಕರಾದ **ಹರಕಿಶನ್ ಸಿಂಗ್ ಸುರ್ಜಿತ್**ರವರು

ಬಿಜೆಪಿ ಹೊಸ ಅಧ್ಯಕ್ಷ ಅಡ್ವಾಣಿ

ಹೊಸ ಆಸೆ ಇಲ್ಲ – ಬೆದರಿಕೆಗಳು ಮಾತ್ರ ಹಲವು

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರಬಿದ್ದು ಭಾರತೀಯ ಜನತಾ ಪಾರ್ಟಿ ಐದೇ ತಿಂಗಳಲ್ಲಿ ಮತ್ತೊಮ್ಮೆ ಚಚ್ಚಿಕೊಂಡ ಕೂಡಲೇ ಆ ಪಕ್ಷದ ತನ್ನ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯನಾಯ್ಡುರವರನ್ನು (ಮೊದಲೇ ಅವರು ಲೆಕ್ಕಕ್ಕಿರಲಿಲ್ಲ) ಎಸೆದು ಅವರ ಸ್ಥಾನದಲ್ಲಿ ಎಲ್.ಕೆ.ಅಡ್ವಾಣಿಯವರನ್ನು ಆರಿಸಿದೆ. ನಂತರ ಅಡ್ವಾಣಿಯವರ ಈ ಆಯ್ಕೆಯನ್ನು (ಚುನಾವಣೆಯನ್ನಲ್ಲ) ನವದೆಹಲಿಯಲ್ಲಿ ಅವಸರದಿಂದ ಕರೆದ ವಿಸ್ತೃತ ರಾಷ್ಟ್ರೀಯ ಮಂಡಳಿ ಸಭೆ 'ಪುಷ್ಟೀಕರಿಸಿದೆ'. ಅಡ್ವಾಣಿಯವರನ್ನು ಪಕ್ಷಕ್ಕೆ ನೇತೃತ್ವ ನೀಡಲು ಹೇಳಿರುವುದು ಇದು ಸುಮಾರು ಎರಡು ದಶಕಗಳಲ್ಲಿ ಐದನೇ ಬಾರಿ.


ಬಿಜೆಪಿ, ಅಂಗದ ಇತರ ಹಲವು ಸಂಘಟನೆಗಳನ್ನು ದೂರದಿಂದಲೇ ಹತೋಟಿಯಲ್ಲಿಡುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಒಂದು ಬಿಕ್ಕಟ್ಟಿನ ಸಂದರ್ಭದಲ್ಲಿ ಬಿಜೆಪಿಯ ಮೂಗುದಾರಗಳನ್ನು ಅಡ್ವಾಣಿಯವರ ಕೈಯಲ್ಲಿಟ್ಟಿದೆ ಎಂಬುದನ್ನು ಗಮನಿಸಬೇಕು. 1985-90 ರಲ್ಲಿ ಅವರು ಮೊದಲ ಬಾರಿ ಪಕ್ಷದ ಅಧ್ಯಕ್ಷರಾದ ನಂತರ ಮಾಡಿದಂತೆ ಈಗಲೂ ಬಿಜೆಪಿ ಕಾಣುತ್ತಿರುವ ದುರ್ದೆಸೆಯಿಂದ ಅವರು ಅದನ್ನು ಹೊರಕ್ಕೆ ತರಬಲ್ಲರು ಎಂಬ ನಿರೀಕ್ಷೆ ಆರ್‌ಎಸ್‌ಎಸ್‌ನದ್ದು ಎಂಬುದು ಸ್ವಯಂವೇದ್ಯ. ಈಗ ಬಿಜೆಪಿಯ ಪ್ರತಿಷ್ಠೆ ಪಾತಾಳಕ್ಕಿಳಿದಿತ್ತು. ಲೋಕಸಭೆಯಲ್ಲಿ ಕೇವಲ ಎರಡೇ ಸ್ಥಾನ ಪಡೆದಿತ್ತು. ಹೀಗೆ ಅಡ್ವಾಣಿ ತನ್ನ ಮಾಯಾದಂಡ ಬೀಸಿ ಹಾಸಿಗೆ ಹಿಡಿದ ಪಕ್ಷವನ್ನು ಮತ್ತೆ ಮೇಲಕ್ಕೇಳುವಂತೆ ಮಾಡಬಹುದು ಎಂಬುದು ಅವರ ನಿರೀಕ್ಷೆ.

ಅಡ್ವಾಣಿ ಬಿಜೆಪಿ ಅಧ್ಯಕ್ಷರಾದ ಮೇಲಿನ ಮೊದಲ ಪತ್ರಿಕಾ ಸಮ್ಮೇಳನದಲ್ಲೇ 1979 ರಲ್ಲಿ ಜನತಾಪಕ್ಷವನ್ನು ಒಡೆದವರು ಆರ್‌ಎಸ್‌ಎಸ್ ಪರ ವ್ಯಕ್ತಿಗಳು ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದರು. ಅಕ್ಟೋಬರ್ 31 ರ ತನ್ನ ಸಂಚಿಕೆಯಲ್ಲಿ ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ಕೂಡಾ ಅದನ್ನೇ ಹೇಳುತ್ತದೆ "... ನಂತರ ದ್ವಿಸದಸ್ಯತ್ವದ ಪ್ರಶ್ನೆಯ ಮೇಲೆ ಜನತಾಪಾರ್ಟಿಯಿಂದ ಪ್ರತ್ಯೇಕವಾಗಿ ಬಿಜೆಪಿಯನ್ನು ರಚಿಸಲಾಯಿತು''. ಜನತಾ ಪಾರ್ಟಿಯನ್ನು ಒಡೆಯುವಲ್ಲಿ ಆರ್‌ಎಸ್‌ಎಸ್ ಪಾತ್ರವನ್ನು ಮೊದಲ ಬಾರಿಗೆ ಅಧಿಕೃತವಾಗಿ ಒಪ್ಪಿಕೊಂಡದ್ದು ಹೀಗೆ.

ಪುನರುಜ್ಜೀವನದ ಆಸೆಯಿಲ್ಲ

ಬಿಜೆಪಿಯನ್ನು ಆವರಿಸಿರುವ ಹತಾಶೆಯನ್ನು ಅರ್ಥಮಾಡಿಕೊಳ್ಳಬಹುದು. ಇತ್ತೀಚಿನವರೆಗೂ ಅಂದರೆ ಮೇ ಎರಡನೇ ವಾರದವರೆಗೂ ತಾನು ಮತ್ತೆ ಅಧಿಕಾರಕ್ಕೆ ಬರುವ ವಿಪರೀತ ಆಶಾವಾದ ಅದರಲ್ಲಿತ್ತು. ಆದರೆ ಆ ಆಸೆಗಳನ್ನೆಲ್ಲಾ ನೆಲಕಚ್ಚಿದವು. ಅತಿದೊಡ್ಡ ಪಕ್ಷವಾಗಿಯಾದರೂ ಹೊರಹೊಮ್ಮಿದ್ದರೆ ತಾನೇ ಸರ್ಕಾರ ರಚಿಸುವುದಾಗಿ ದಾವೆಯೂಡುವ ಅವಕಾಶವಿರುತ್ತಿತ್ತು. ಆದರೆ ಅದೂ ಆಗಲಿಲ್ಲ. ಆದರೆ, ಇನ್ನೂ ಮಹತ್ವದ ಸಂಗತಿಯೆಂದರೆ, ಈ ದೇಶದ ಜನತೆ ತನಗೆ ಏನು ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಲೂ ಅದು ವಿಫಲವಾಯಿತು. ಹೊಸ ಸಂಸತ್ತಿನಲ್ಲಿ ಅದರ ವರ್ತನೆಯಿಂದ ಇದು ಸ್ಪಷ್ಟ. ಒಂದು ಜವಾಬ್ದಾರಿಯುತ ವಿರೋಧ ಪಕ್ಷವಾಗಿ ವರ್ತಿಸಲು ಅದು ನಿರಾಕರಿಸಿತು. ಒಂದು ಪ್ರಜಾಸತ್ತಾತ್ಮಕ ವಿರೋಧದ ಪಾತ್ರವನ್ನು ಮರ್ಯಾದೆಯಿಂದ ಸ್ವೀಕರಿಸುವ ಬದಲು ಅದು ಜನಾದೇಶವನ್ನು ಒಪ್ಪಲು ನಿರಾಕರಿಸುತ್ತಾ ಬಂತು. ಫ್ಯಾಸಿಸ್ಟ್ ಆರ್‌ಎಸ್‌ಎಸ್‌ನ ಪ್ರಾಬಲ್ಯವಿರುವ ಒಂದು ಪಕ್ಷ ಹೀಗೆ ವರ್ತಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇಂತಹ ಒಂದು ಸನ್ನಿವೇಶದಲ್ಲಿ ಪುನರುಜ್ಜೀವನ ಪಡೆಯುವ ಬಿಜೆಪಿಯ ಆಸೆ-ನಿರೀಕ್ಷೆಗಳೆಲ್ಲಾ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳ ಮೇಲೆಯೇ ನಿಂತಿದ್ದವು. ಅಲ್ಲಿ ಅತ್ಯಂತ ಬಲಪಂಥೀಯ ಪಕ್ಷವಾದ ಶಿವಸೇನೆಯೊಡನೆ ಮೈತ್ರಿಯಿಂದ ಸಾಮಾನ್ಯವಾಗಿ 'ಅಧಿಕಾರಸ್ಥ - ವಿರೋಧಿ' ಅಂಶವೆಂಬುದರ ಪ್ರಯೋಜನ ಪಡೆಯಲು ಸಾಧ್ಯ ಎಂದು ಬಿಜೆಪಿ ನಿರೀಕ್ಷಿಸುತ್ತಿತ್ತು. ಆದರೆ ಹಾಗೆ ಆಗಲೇ ಇಲ್ಲ. ನಿಜ, ಅಧಿಕಾರಸ್ಥ-ವಿರೋಧಿ ಅಂಶ ಕಾಂಗ್ರೆಸ್-ಎನ್‌ಸಿಪಿ ಮೈತ್ರಿಕೂಟಕ್ಕೆ ಸ್ವಲ್ಪ ತೊಂದರೆಯುಂಟುಮಾಡಿದೆ, ಆದರೆ ಬಿಜೆಪಿ-ಶಿವಸೇನೆ ನಿರೀಕ್ಷಿಸಿದ ಮಟ್ಟದಲ್ಲಿ ಅಲ್ಲ. ಕೊನೆಗೂ ಏನಾಯಿತೆಂದರೆ ಫಲಿತಾಂಶದ ಮೇಲೆ ಪ್ರಭಾವ ಬೀರುವ ಬಿಜೆಪಿ ಪ್ರಯತ್ನಗಳೆಲ್ಲಾ ನಿಷ್ಫಲವಾದವು. ಸಾವರ್ಕರ್ ಚರ್ಚೆಗೆ ಭಾವನಾತ್ಮಕ ತಿರುವು ಕೊಟ್ಟು, ಅದನ್ನು ಬಂಡವಾಳ ಮಾಡಿಕೊಳ್ಳುವಲ್ಲಿ ಅದು ವಿಫಲವಾಯಿತು.



ರಾಷ್ಟ್ರೀಯ ಗೌರವದ ಹೆಸರಲ್ಲಿ ಕೀಳು ಭಾವನೆಗಳನ್ನು ಉದ್ರೇಕಿಸುವ ಉದ್ದೇಶದ 'ತಿರಂಗಾ ಯಾತ್ರಾ' ದ ಮೂಲಕ ಕೋಮುವಾದೀ ಭಾಷಣಗಳಿಂದ ಜನರನ್ನು ಸೆಳೆಯುವುದು ಕೂಡಾ ಉಮಾ ಭಾರತಿಯಂತಹವರಿಂದಲೂ ಸಾಧ್ಯವಾಗಲಿಲ್ಲ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳ ಕೆಲವೇ ವಾರಗಳ ಮೊದಲು ಈ ಕೇಸರೀ ಪಡೆ ಅಫ್ಜಲ್ ಖಾನ್ ಸಮಾಧಿಯ ಮೇಲೆ ಧಾಳಿ ನಡೆಸಿ ಕೋಮು ಭಾವೋದ್ರೇಕಗಳನ್ನು ಉಂಟುಮಾಡುವ ಪ್ರಯತ್ನಗಳೂ ಜನರ ಮೇಲೇನೂ ಪ್ರಭಾವ ಬೀರಲಿಲ್ಲ.

ಮಹಾರಾಷ್ಟ್ರದ ಫಲಿತಾಂಶ ಬಿಜೆಪಿ ಲೋಕಸಭಾ ಚುನಾವಣೆಗಳಲ್ಲಿ ಪಡೆದ ಹೊಡೆತ ಕೇವಲ ಆಕಸ್ಮಿಕ ಅಲ್ಲ ಎಂಬುದನ್ನು ತೋರಿದೆ.

ನಿರಾಶೆಯೆಂಬುದು ಹತಾಶೆಯಾಗಿಬಿಟ್ಟಿದೆ

ಇದರರ್ಥ ಬಿಜೆಪಿ ಪ್ರಸಕ್ತ ಸುತ್ತಿನ ಮ್ಯಾಚುಗಳಲ್ಲಿ ಗೆಲ್ಲುವ ಅವಕಾಶವಂತೂ ಇಲ್ಲ. ಇನ್ನೂ ನಾಲ್ಕು ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಬಿಹಾರ, ಝಾರ್ಖಂಡ್ ಮತ್ತು ಹರ್ಯಾಣದಲ್ಲಿ ಅದಕ್ಕೆ ಏನೇನೂ ಅವಕಾಶವಿಲ್ಲ. ತನ್ನ ವಿಪರೀತ ಭ್ರಷ್ಟ ಹಾಗೂ ಜನ-ವಿರೋಧಿ ನೀತಿಗಳಿಂದಾಗಿ ಹಿಂದೆಂದೂ ಕಾಣದಷ್ಟು ದುರಾಡಳಿತ ನಡೆಸಿದ ಅದರ ರಾಜ್ಯ ಸರ್ಕಾರ ಇರುವ ಝಾರ್ಖಂಡ್‌ಲ್ಲಂತೂ ಚೆನ್ನಾಗಿ ಹೊಡೆತ ತಿನ್ನಲು ಅದು ಸಿದ್ಧವಾಗಿದೆ. ಬಿಹಾರದಲ್ಲಿ ಅದರ ವಿಭಜನೆಯ ನಂತರ ಬಿಜೆಪಿಗೆ ಬೆಂಬಲ ಬಹಳ ಕಮ್ಮಿ. ಹರ್ಯಾಣದಲ್ಲಿ ಅದು ಕಾಂಗ್ರೆಸ್‌ನ ವಿರುದ್ಧ ಮಾತ್ರವಲ್ಲ, ಹಿಂದಿನ ತನ್ನ ಮಿತ್ರ ಐಎನ್‌ಎಲ್‌ಡಿಯನ್ನು ಎದುರಿಸಬೇಕಾಗಿದೆ. ಈ ಐಎನ್‌ಎಲ್‌ಡಿ ಕೂಡಾ ಸೋಲುವ ಸ್ಥಿತಿಯಲ್ಲಿದೆ. ನಂತರ ವಿಧಾನಸಭಾ ಚುನಾವಣೆಗಳು ನಡೆಯುವ ಪಶ್ಚಿಮಬಂಗಾಳ, ಕೇರಳ, ಅಸ್ಸಾಂ ಮತ್ತಿತರ ಕೆಲವು ರಾಜ್ಯಗಳಲ್ಲಿ ಬಿಜೆಪಿಯ ಅವಕಾಶಗಳ ಬಗ್ಗೆ ಹೇಳದಿರುವುದೇ ಒಳ್ಳೆಯದು. ಆದ್ದರಿಂದಲೇ ತಾನೇ ಬಿಜೆಪಿ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಗಳ ಮೇಲೆ ಅಷ್ಟೊಂದು ಆಸೆಯಿಟ್ಟುಕೊಂಡಿದ್ದು. ಅಂದರೆ ಇದರರ್ಥ ಆ ರಾಜ್ಯದಲ್ಲಿ ಅದರ ಸೋಲು ಸದ್ಯಕ್ಕಂತೂ ಅದರ ಪುನರುಜ್ಜೀವನದ ಸಾಧ್ಯತೆಗಳನ್ನೆಲ್ಲಾ ಮುಗಿಸಿಬಿಟ್ಟಿದೆ. ಆದ್ದರಿಂದಲೇ ಕಳೆದ ಐದು ತಿಂಗಳಲ್ಲಿ ಆ ಪಕ್ಷವನ್ನು ಆವರಿಸಿದ್ದ ನಿರಾಸೆ ಈಗ ಆಶಾಹೀನ ಹತಾಶೆಯ ಸ್ವರೂಪ ಪಡೆದಿದೆ. ಇಂದು ಆ ಪಕ್ಷ ಸನ್ನದ್ಧವಾಗಿಲ್ಲ, ಎತ್ತ ಹೋಗಲಿ ಎಂದು ತಿಳಿಯದಾಗಿದೆ. ಇಂತಹ ಒಂದು ನಿರಾಶಾದಾಯಕ ಸನ್ನಿವೇಶದಲ್ಲಿ ಆರ್‌ಎಸ್‌ಎಸ್ ಅಡ್ವಾಣಿಯವರನ್ನು ಅಧ್ಯಕ್ಷರಾಗಿ ಪುನರುತ್ಥಾನಗೊಳಿಸಿದೆ. ಆರ್ಗನೈಸರ್ ಅವರನ್ನು 'ಬಿಜೆಪಿಯ ಅದೃಷ್ಟಶಾಲಿಪಣ' ಎಂದು ಹೊಗಳಿದೆ. ಆದರೆ ನಿಜ ಸಂಗತಿಯೆಂದರೆ ಇದುಯಾರೋ ಒಬ್ಬ ವ್ಯಕ್ತಿ ಬಿಜೆಪಿಯ ಅದೃಷ್ಟಶಾಲೀ ಪಣ ಎಂಬುದಲ್ಲ, ನಿಜ ಸಂಗತಿಯೆಂದರೆ ಇಡೀ ಸಂಘ ಪರಿವಾರಕ್ಕೆ ತಮಗೇನೇನೂ ಅವಕಾಶವಿಲ್ಲ, ನೇರವಾಗಿ ಕೋಮುವಾದಿ ಪ್ರಚಾರ ನಡೆಸಿ, ಈ ದೇಶದ ಜನಗಳನ್ನು ಕೋಮು ಆಧಾರದಲ್ಲಿ ಧ್ರುವೀಕರಿಸಿದರೆ ಮಾತ್ರವೇ ಏನಾದರೂ ಅವಕಾಶ ದೊರೆತೀತು ಎಂದು ಕಾಣುವಂತಾಗಿದೆ. ಅವರಿಗೆ ಮತ್ತು ಇತರರೆಲ್ಲರಿಗೂ ಅಡ್ವಾಣಿ ಇಂತಹ ಒಂದು ಕೋಮುವಾದೀ ವೇದಿಕೆಗೆ ಬೇರೆಲ್ಲರಿಗಿಂತಲೂ ಚೆನ್ನಾದ ಪ್ರತೀಕ.

ವಿಜಯದಶಮಿ ದಿನದಂದು ಅಡ್ವಾಣಿ ನಾಗಪುರದ ಆರ್‌ಎಸ್‌ಎಸ್ ಮುಖ್ಯಾಲಯದಲ್ಲಿ ಇದ್ದದ್ದು, ಆರ್‌ಎಸ್‌ಎಸ್ ಮುಖ್ಯಸ್ಥ ಕೆ.ಎಸ್.ಸುದರ್ಶನ್‌ರೊಂದಿಗೆ ಅವರ ಸಲ್ಲಾಪ ಬಿಜೆಪಿ ಅಧ್ಯಕ್ಷರಾಗಿ ಅಡ್ವಾಣಿಯ ನೇಮಕಕ್ಕೆ ಆರ್‌ಎಸ್‌ಎಸ್ ಸಂಪೂರ್ಣ ಬೆಂಬಲ ಇತ್ತು ಎಂಬುದನ್ನು ತೋರಿಸುತ್ತದೆ.

ವಿಫಲ ಪ್ರಯೋಗಗಳು

ಬಿಜೆಪಿಯೊಳಗಿನ ಈ ಬೆಳವಣಿಗೆಯಲ್ಲಿ ಎರಡು ಅಂಶಗಳಿವೆ. ಸ್ವಲ್ಪ ಮಟ್ಟಿಗೆ ಇವು ಪರಸ್ಪರ ಸಂಬಂಧಪಟ್ಟ ಅಂಶಗಳು. ಮೊದಲನೆಯ ಅಂಶವೆಂದರೆ ಉಕ್ಕಿನ ಮನುಷ್ಯ ಎಂದು ತಾನೇ ಘೋಷಿಸಿಕೊಂಡಿರುವ ಅಡ್ವಾಣಿ ಬಿಜೆಪಿಗೆ ಹೊಸ ಜೀವ ತುಂಬಲು ಶಕ್ತರಾಗುತ್ತಾರೋ ಎಂಬುದು. ಆದರೆ ಅದಕ್ಕಿಂತ ಮಹತ್ವದ್ದು, ಮುಖ್ಯವಾಗಿ ಗಮನಿಸಬೇಕಾದ್ದು ಅಡ್ವಾಣಿಯವರ ಅಡಿಯಲ್ಲಿ ಬಿಜೆಪಿ, ಇತರ ಸಂಘ ಪರಿವಾರದ ಸಂಘಟನೆಗಳ ಜತೆಗೂಡಿ ನಮ್ಮ ದೇಶದ ಜಾತ್ಯತೀತ, ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಗೆ ಮತ್ತು ನಮ್ಮ ಇಡೀ ಸಾಮೂಹಿಕ ಜೀವನಕ್ಕೆ ಎಂತಹ ದುರ್ಭರ ಹಾನಿಗಳನ್ನು ಉಂಟು ಮಾಡಬಹುದು ಎಂಬುದು.

ಬಿಜೆಪಿಯನ್ನು ಪುನರುಜ್ಜೀವನಗೊಳಿಸುವ ಅಡ್ವಾಣಿಯವರ ಸಾಮರ್ಥ್ಯಗಳ ಬಗ್ಗೆ ಹೇಳುವುದಾದರೆ, ಸಾಧ್ಯತೆಗಳು ಬಹಳವೇನೂ ಉಜ್ವಲವಾಗಿಲ್ಲ. ಸಂಘ ಪರಿವಾರದ ಅಂಗಗಳು ಮತ್ತು ಮುಖಂಡರು ಏನೇ ಹೇಳಿಕೊಳ್ಳಲಿ, ಬಿಜೆಪಿ ಒಂದೊಂದಾಗಿ ತನಗಿರುವ ಎಲ್ಲಾ ದಾರಿಗಳನ್ನು ಬಳಸಿಯಾಗಿದೆ. ಬಿಜೆಪಿಯಾಗಿ ತನ್ನ ಕಳೆದ 24 ವರ್ಷಗಳಲ್ಲಿ ಅಸ್ತಿತ್ವದಲ್ಲಿ ಆ ಪಕ್ಷದ 'ಗಾಂಧಿವಾದಿ ಸಮಾಜವಾದ' ವನ್ನು ಅಂಗೀಕರಿಸಿತು, ನಂತರ 'ಸಮಗ್ರ ಮಾನವತಾವಾದ', 'ಸಾಂಸ್ಕೃತಿಕ ರಾಷ್ಟ್ರವಾದ' ಮತ್ತು ಕೆಲವು ಘೋಷಣೆಗಳನ್ನೂ ಅಂಗೀಕರಿಸಿತು. ಆದರೆ ಎಲ್ಲವೂ ಒಂದೊಂದಾಗಿ ವಿಫಲಗೊಂಡವು. ಅಂತಿಮವಾಗಿ ಅದಕ್ಕೆ ಕೇಂದ್ರದಲ್ಲಿ ಅಧಿಕಾರವನ್ನು ಬಾಚಿಕೊಳ್ಳಲು ಕೆಲವು ಪ್ರಾದೇಶಿಕ ಪಕ್ಷಗಳನ್ನು ಸೆಳೆಯುವುದಲ್ಲದೇ ಬೇರೆ ದಾರಿ ಕಾಣಲಿಲ್ಲ. ಅದರ ಈ ಯೋಜನೆ ನರಸಿಂಹರಾವ್ ಸರ್ಕಾರದ ದುರ್ವರ್ತನೆಗಳು ಮತ್ತು ನೀತಿಗಳು ಬಹುದೊಡ್ಡ ಜನ ವಿಭಾಗಗಳನ್ನು ದೂರ ಮಾಡಿದವಷ್ಟೇ.

ಸಂಯುಕ್ತ ರಂಗ ಪ್ರಯೋಗ ಒಂದು ಸಮರ್ಥ ಪರ್ಯಾಯವನ್ನು ಕೊಡುವಲ್ಲಿ ವಿಫಲವಾದ್ದರಿಂದ ಮತ್ತು ಸಮಿಶ್ರ ರಾಜಕೀಯದ ಯುಗ ಆರಂಭವಾಗಿದೆ, ಅದು ಸ್ವಲ್ಪ ಕಾಲ ಉಳಿಯುತ್ತದೆ ಎಂಬುದನ್ನು ಅರಿಯುವಲ್ಲಿ ಕಾಂಗ್ರೆಸ್ ವಿಫಲವಾದ್ದರಿಂದ ಯಶಸ್ವಿಯಾಯಿತೆಂಬುದು ಬೇರೆ ಮಾತು. ಬಿಜೆಪಿಗೆ ಕಾಂಗ್ರೆಸ್‌ನಿಂದ ಮೊದಲು ಈ ಸತ್ಯದ ಅರಿವಾಯಿತು. ಅದರಿಂದ ಪ್ರಯೋಜನ ಪಡೆಯಿತು. ಕಾಂಗ್ರೆಸ್ ತಾನು ಮತ್ತೆ ತನ್ನ ಬಲದಿಂದಲೇ ಅಧಿಕಾರಕ್ಕೆ ಹಿಂದಿರುಗಬಲ್ಲೆ ಎಂಬ ಭ್ರಮೆಯನ್ನು ಬಹಳ ಕಾಲ ಇಟ್ಟುಕೊಂಡಿತು. ಈ ಭ್ರಮೆಯನ್ನು ಬಿಟ್ಟ ಮೇಲೆಯೇ ಅದು ಅಧಿಕಾರಕ್ಕೆ ಮರಳಲು ಸಾಧ್ಯವಾಯಿತು ಎಂಬುದು ವಾಸ್ತವತೆ. ಆದರೂ ಕೂಡಾ 1998 ರಲ್ಲಿ 182 ಲೋಕಸಭಾ ಸ್ಥಾನಗಳನ್ನು ಪಡೆದ ಬಿಜೆಪಿ 1999 ರಲ್ಲಿ ಒಂದೇ ಒಂದು ಹೆಚ್ಚಿನ ಸ್ಥಾನವನ್ನು ಪಡೆಯಲಾಗಲಿಲ್ಲ, ಅದರ ಮಿತ್ರ ಬಲ ಹೆಚ್ಚಿತಷ್ಟೆ ಎಂಬುದು ಕಟು ವಾಸ್ತವ. ಎರಡು ಬಾರಿಯೂ ತೆಲುಗುದೇಶಂ ಪಕ್ಷದ ಬಾಹ್ಯ ಬೆಂಬಲದಿಂದಲೇ ಸರಕಾರ ರಚಿಸಲು ಅದಕ್ಕೆ ಸಾಧ್ಯವಾಗಿರುವುದು.

ಆದರೆ ಬಿಜೆಪಿ ಮತ್ತು ಅದರ ಮಿತ್ರರ ಆರು ವರ್ಷಗಳ ದುರಾಡಳಿತ ಜನ ಸಮೂಹಗಳಿಂದ ದೂರವಾಗಿ ಅಪಖ್ಯಾತಿ ಹೊತ್ತು ಹೊರ ನಡೆಯಬೇಕಾಯಿತು. ಆದ್ದರಿಂದ ಒಂದು ಸಮಿಶ್ರ ಕೂಟವನ್ನು ಜತೆಗೂಡುವುದರಿಂದಷ್ಟೇ ಒಂದು ಪಕ್ಷ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲ. ಅಂತಿಮವಾಗಿ ಒಂದು ಆಳುವ ಪಕ್ಷ ಅಥವಾ

ಪುಟ 11 ಕ್ಕೆ

ಮಂಗಳೂರಿನಲ್ಲಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ನಾಲ್ಕನೇ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಬೀಡಿ ಉದ್ದಿಮೆ, ಅಲ್ಲಿ ಕಾರ್ಮಿಕರ ಚಳುವಳಿ, ಸಾಧನೆಗಳು, ಪ್ರಶ್ನೆಗಳು ಮುಖ್ಯವಾಗಿ ಕನಿಷ್ಠ ಕೂಲಿಯ ಪ್ರಶ್ನೆ ಇವುಗಳನ್ನು ಕುರಿತು ಇವುಗಳ ಆಳವಾದ ಅಧ್ಯಯನ ನಡೆಸಿರುವ ಹಾಗೂ ಇತ್ತೀಚಿನವರೆಗೆ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ರಾಜ್ಯ ಅಧ್ಯಕ್ಷರಾಗಿದ್ದ ಮತ್ತು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ.ವಿ.ಜೆ.ಕೆ.ನಾಯರ್‌ರವರೊಡನೆ ನಡೆಸಿದ ಕಿರು ಸಂದರ್ಶನವನ್ನು ಇಲ್ಲಿ ನೀಡಲಾಗಿದೆ.





ಆರಂಭವಾಯಿತು. ಕೇರಳದಲ್ಲಿ 1932-33 ರ ಕಾಲದಲ್ಲಿ ತಲ್ಲಿಚೇರಿಯಲ್ಲಿ ಶ್ರೀನಾರಾಯಣ ಗುರುಸ್ಥಾಪಿಸಿದ ಎಸ್.ಎನ್.ಡಿ.ಟಿ. ಯೋಗಂ ನೇತೃತ್ವದಲ್ಲಿ ಚಳುವಳಿ ಆರಂಭವಾಯಿತು. 1937-38 ರ ವೇಳೆಗೆ ಕಮ್ಯುನಿಸ್ಟರು ಈ ಚಳುವಳಿಯ ನೇತೃತ್ವಕ್ಕೆ ಬಂದರು. ನಂತರ ಈ ಚಳುವಳಿಯ ಸಂಘಟನೆಯು ವ್ಯಾಪಕವಾಯಿತು, ತೀವ್ರ ಹೋರಾಟಗಳು ನಡೆದವು. ಅಲ್ಲಿನ ಮೂಲ ಬೇಡಿಕೆಯೆಂದರೆ ಮಂಗಳೂರಿನ ಕೂಲಿ ಕೊಡಿ ಎಂದು. ಕಮ್ಯೂನಿಸ್ಟ್ ಆಂದೋಲನದೊಂದಿಗೆ ಬೆಸೆದುಕೊಂಡ ಈ ಚಳುವಳಿ ರೈತರ ಆಂದೋಲನ, ಅಧ್ಯಾಪಕರ ಆಂದೋಲನದ ಜೊತೆಗೆ ಬೆಳೆಯಿತು. ಬೀಡಿ ಕಾರ್ಮಿಕರಲ್ಲಿ ರಾಜಕೀಯ ಅರಿವನ್ನು ಹರಡಿತು. ಎಕೆಜಿ, ಕೃಷ್ಣಪಿಳ್ಳೆ ಮುಂತಾದ ಹಿರಿಯ ಕಮ್ಯುನಿಸ್ಟ್ ಮುಖಂಡರ ಮಾರ್ಗದರ್ಶನದಲ್ಲಿ ಈ ಆಂದೋಲನ ಹರಡಿತು. 1940 ರ ದಶಕದಲ್ಲಿ ಅದು ಮೈಸೂರನ್ನು ತಲುಪಿತು. ಈ ಮೊದಲು ಹೇಳಿದಂತೆ ಬೀಡಿ ಉದ್ದಿಮೆಯಲ್ಲಿ ಮನೆ

ಕಾರ್ಮಿಕರ ಆಂದೋಲನ ಬಲವಾಗಿ ಬೆಳೆಯಿತು. ಎಕೆಜಿಯವರು ಲೋಕಸಭಾ ಸದಸ್ಯರಾಗಿ ಆಯ್ಕೆಗೊಂಡಾಗ ಅದು ಉಚ್ಛ್ರಾಯಕ್ಕೇರಿತು. ಎಕೆಜಿ ಸಂಸತ್ತಿನಲ್ಲಿ ಬೀಡಿ ಕಾರ್ಮಿಕರ ಪ್ರಶ್ನೆಗಳನ್ನು ಸತತವಾಗಿ ಎತ್ತುತ್ತಿದ್ದರು. ಆಗಿನ ಕಾಲದ ಮೂಲ ಬೇಡಿಕೆ ಬೀಡಿ ಕಾರ್ಮಿಕರನ್ನು ಕಾರ್ಖಾನೆ ಕಾರ್ಮಿಕರಾಗಿ ಪರಿಗಣಿಸಬೇಕು ಎಂದು.

ಎಕೆಜಿಯವರು ಬೀಡಿ ಕಾರ್ಮಿಕರನ್ನು ಕುರಿತಂತೆ ಒಂದು ಖಾಸಗಿ ಸದಸ್ಯರ ಮಸೂದೆಯನ್ನು ಮುಂದಿಟ್ಟರು. ಆಗ ಸರ್ಕಾರ ತಾನೇ ಒಂದು ಮಸೂದೆಯನ್ನು ಮಂಡಿಸುವುದಾಗಿ ಹೇಳಿ ಮಂಡಿಸಿತು. ಎಕೆಜಿ ಅದರ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ಹೀಗೆ 1966 ರಲ್ಲಿ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕೆಲಸದ ಶರತ್ತುಗಳ ಕಾನೂನು ಬಂತು. ಇದರ ಪ್ರಕಾರ ಅಂತಿಮವಾಗಿ ಯಾರು ಬೀಡಿ ತಯಾರಿಸಿ ಮಾರುತ್ತಾರೋ ಅವರೇ ಮಾಲಿಕರು, ಈ ಕೆಲಸ ಪರವಾನಿಗೆ ಪಡೆದ ಸ್ಥಳದಲ್ಲಿ ಇರಬೇಕು, ಲೇಬರ್ ಇನ್ಸ್‌ಪೆಕ್ಟರ್‌ಗೆ ತಿಳಿಸಬೇಕು. ಒಟ್ಟಿನಲ್ಲಿ ಈ ಕಾನೂನು ಫ್ಯಾಕ್ಟರಿ ವ್ಯವಸ್ಥೆಯತ್ತ ವಾಲುತ್ತಿತ್ತು. ಕನಿಷ್ಠ ಕೂಲಿ, ಇತ

ಬೀಡಿ ಕಾರ್ಮಿಕರ ಚಳುವಳಿ : ಹೋ

ಪ್ರಶ್ನೆ : ಬೀಡಿ ಉದ್ದಿಮೆ ದೇಶವ್ಯಾಪಿಯಾದ ಉದ್ದಿಮೆಯೇ?

ಹೌದು, ಪಂಜಾಬ್, ದಿಲ್ಲಿ, ಹರ್‍ಯಾಣಾ ಬಿಟ್ಟು ಸುಮಾರಾಗಿ ಎಲ್ಲಾ ರಾಜ್ಯಗಳಲ್ಲಿ ಇದೆ. ಈ ಮೂರು ಪ್ರದೇಶಗಳಲ್ಲಿ ಸಿಖ್ ಧರ್ಮದ ಪ್ರಭಾವ ಕಾರಣವಿರಬಹುದು. ದಕ್ಷಿಣದ ಎಲ್ಲಾ ರಾಜ್ಯಗಳಲ್ಲಿ ಇದೆ.

ಬೀಡಿ ಉದ್ದಿಮೆಯ ಸ್ವರೂಪ ಆರಂಭದಿಂದಲೂ ಹೀಗೆಯೇ ಇತ್ತೇ?

ಇದು ಆರಂಭವಾದದ್ದು ಕಂಪನಿಗಳಾಗಿಯೇ, ಮುಖ್ಯವಾಗಿ ಗುಜರಾತಿನಿಂದ. ಕ್ರಮೇಣ ಈ ಗುಜರಾತಿನ ಕಂಪನಿಗಳ ಕೆಲಸಗಳೇ 20ನೇ ಶತಮಾನದ ಆರಂಭದಲ್ಲಿ ದಕ್ಷಿಣಕ್ಕೆ ಹರಡಿದಾಗ ಮಹಾರಾಷ್ಟ್ರ, ಆಗ ಅದರ ಭಾಗವಾಗಿದ್ದ ಕರ್ನಾಟಕದ ನಿಪ್ಪಾಣಿ, ಧಾರವಾಡ, ಹುಬ್ಬಳ್ಳಿಗೆ ಬಂದವು- ದರ್ಬಾರ್ ಬೀಡಿ ಮುಂತಾದ ಕಂಪನಿಗಳು. ನಂತರ ಮಂಗಳೂರಿನಲ್ಲಿ ಗಣೇಶ ಬೀಡಿ, ಭಾರತ್ ಬೀಡಿ, ಪಿವಿಎಸ್ ಇತ್ಯಾದಿ ಕಂಪನಗಳಾಗಿಯೇ ಬಂದವು. ಅಂದರೆ ಮಂಗಳೂರಿನಲ್ಲಿ ಬೀಡಿ ಉದ್ದಿಮೆ ಆರಂಭವಾದದ್ದು ಕಾರ್ಖಾನೆಗಳಾಗಿಯೇ, ಕೇರಳದಲ್ಲಿ ಬೀಡಿ ಕಾರ್ಮಿಕರ ಹೋರಾಟಗಳನ್ನು ಒಡೆಯುವ ಪ್ರಯತ್ನದಲ್ಲಿ ಮನೆ ಕೆಲಸದ ಪದ್ಧತಿ ಆರಂಭವಾಯಿತು. ಲೇಬರ್ ಕೋರ್ಟಿನ ಕೇಸುಗಳ ದಾಖಲೆಗಳನ್ನು ನೋಡಿದರೆ ಠೇಕೇದಾರ್ ಅಂದರೆ ಕಾಂಟ್ರಾಕ್ಟ್ ಪದ್ಧತಿ ಹಲವೆಡೆ ಇದ್ದದ್ದು ಕಾಣುತ್ತದೆ. ಆದರೆ ಹೆಚ್ಚಿನ ತೀರ್ಪುಗಳು ಕಾರ್ಮಿಕರ ಪರವಾಗಿಯೇ ಬಂದಿರುವುದು ಕಾಣುತ್ತದೆ.

ಬೀಡಿ ಕಾರ್ಮಿಕರ ಹೋರಾಟಗಳ ಆರಂಭ ಹೇಗೆ?

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಒಂದು ಸಾವಿರ ಬೀಡಿಗೆ 8 ಆಣೆ ಕೂಲಿಯಿತ್ತು. ನಿಯಮಿತ ಕೆಲಸ ಮತ್ತು ಕೂಲಿಯ ಬೇಡಿಕೆಗಳೊಂದಿಗೆ ಬೀಡಿ ಕಾರ್ಮಿಕರ ಚಳುವಳಿ ಕೆಲಸದ ಪದ್ಧತಿ ಆರಂಭವಾದದ್ದು ಬೀಡಿ ಕಾರ್ಮಿಕರ ಆಂದೋಲನವನ್ನು ಒಡೆಯುವ ಉದ್ದೇಶದಿಂದ. ಸಂಘಟನೆ ಅದನ್ನು ಪ್ರತಿರೋಧಿಸಿತು. ಕೇರಳದಲ್ಲಿ ಬೀಡಿ ಕಾರ್ಮಿಕರ ಚಳುವಳಿಯ ಎರಡು ಮುಖ್ಯ ಬೇಡಿಕೆಗಳೆಂದರೆ ಮನೆ ಕೆಲಸ ಪದ್ಧತಿ ನಿಲ್ಲಬೇಕು ಹಾಗೂ ಬೀಡಿ ಕಾರ್ಮಿಕರ ಕೂಲಿ, ಸೇವಾ ಪರಿಸ್ಥಿತಿ ಉತ್ತಮಗೊಳ್ಳಬೇಕು.

ಸ್ವಾತಂತ್ರ್ಯ ನಂತರ ಮಲಬಾರ್ ಆಡಳಿತ ಬೀಡಿ ಕಾರ್ಮಿಕರಿಗೆ ಒಂದು ಆಯೋಗವನ್ನು ನೇಮಿಸಿತು. (ಪ್ರಸಕ್ತ ನ್ಯಾಯವಾದಿ, ಆ ಮೇಲೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ) ವಿ.ಆರ್.ಕೃಷ್ಣ ಅಯ್ಯರ್ ಕಾರ್ಮಿಕರ ಪರವಾಗಿ ಈ ಆಯೋಗದ ಮುಂದೆ ವಾದಿಸಿದರು.

ಸ್ವಾತಂತ್ರ್ಯ ನಂತರ ಕೇರಳದಲ್ಲಿ ಬೀಡಿ




ಸೌಲಭ್ಯಗಳ ಅಂಶವೂ ಈ ಕಾನೂನಿನಲ್ಲಿತ್ತು.

ಮುಂದೆ ಈ ಕಾನೂನಿನ ಜಾರಿಗಾಗಿ ಹೋರಾಟ ನಡೆಯಿತು. 1967 ರಲ್ಲಿ ಕೇರಳದಲ್ಲಿ ಅಧಿಕಾರಕ್ಕೆ ಬಂದ ಇಎಂಎಸ್ ನಂಬೂದಿರಿಪಾಡ್ ನೇತೃತ್ವದ ಸರ್ಕಾರ ಇದನ್ನು ಜಾರಿಗೆ ತಂದಿತು. ಆಗಲೇ ಗಣೇಶ ಬೀಡಿ ಕೇರಳದಲ್ಲಿನ ತನ್ನ ವ್ಯವಹಾರಗಳನ್ನು ಕರ್ನಾಟಕಕ್ಕೆ ವರ್ಗಾಯಿಸಿತು. ಈ ಹಿನ್ನೆಲೆಯಲ್ಲಿ ದಿನೇಶ್ ಬೀಡಿ ವರ್ಕ್ಸ್ ಒಂದು ಸಹಕಾರಿ ಸಂಸ್ಥೆಯಾಗಿ ಹುಟ್ಟಿಕೊಂಡಿತು. ಕಾರ್ಮಿಕರು 1 ರೂ. ಹಾಗೂ ಸರ್ಕಾರ 9 ರೂ. ನೀಡಿ ಆರಂಭವಾದ ಈ ಸಂಸ್ಥೆಯಲ್ಲಿ 1.25 ಲಕ್ಷ ಕಾರ್ಮಿಕರು ಫ್ಯಾಕ್ಟರಿ ವ್ಯವಸ್ಥೆಯಡಿ ಕೆಲಸ ಮಾಡಲಾರಂಭಿಸಿದರು.

ಬೇರೆಡೆ ಬೀಡಿ ಕಾರ್ಮಿಕರ ಚಳುವಳಿ ಹೇಗಿತ್ತು?

1973 ರ ವೇಳೆಗೆ ಕರ್ನಾಟಕದಲ್ಲೂ ಚಳುವಳಿ ಹರಡಿತು. ಆದರೆ ಕೇರಳದ ರೀತಿಯಲ್ಲಿ ಚಳುವಳಿ ನಡೆಯಲಿಲ್ಲ. ಇಲ್ಲಿ ಮಾಲೀಕರೊಂದಿಗೆ ಆದ ಒಪ್ಪಂದದಲ್ಲಿ ಒಂದು ಅಂಶ ಸೇರಿತ್ತು. ಎಲೆ ಮತ್ತು ತಂಬಾಕನ್ನು ಮನೆಗೆ ಕೊಟ್ಟಾಗ ಕಂಪನಿಯ ಸ್ಥಳದಲ್ಲಿ ಅವರ



ಚಂದ್ರಪ್ರಭಾ ಅರಸ್ ಸಮಿತಿಯ ಮುಖ್ಯ ಶಿಫಾರಸುಗಳು (ಸೆಪ್ಟೆಂಬರ್ 1994)

1. ಕಾರ್ಮಿಕ ಮಂತ್ರಾಲಯ ಒಂದು ಸಮಯಬದ್ಧ ಪ್ರಮಾಣದಲ್ಲಿ ರಾಜ್ಯವಾರಾಗಿ ಬೀಡಿ ಕಾರ್ಮಿಕರು ಇರುವಲ್ಲೆಲ್ಲಾ ಒಂದು ಸಮಗ್ರ ಸರ್ವೆ ನಡೆಸಬೇಕು.
2. ಪ್ರತಿ ಬೀಡಿ ಕಾರ್ಮಿಕರಿಗೆ, ಆತ/ ಆಕೆ 'ಮನೆ ಖಾತಾ' ಅಥವಾ ಫ್ಯಾಕ್ಟರಿ ಕಾರ್ಮಿಕರಿರಲಿ, ಆದಷ್ಟು ಬೇಗನೆ ಗುರುತು ಪತ್ರ ನೀಡಿ ಆತ/ ಆಕೆ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಫಲದಿಂದ ವಂಚಿತರಾಗದಂತೆ ಮಾಡಬೇಕು.
3. ಸರ್ಕಾರದ ವರದಿಯಲ್ಲಿರುವ ಕನಿಷ್ಠ ಕೂಲಿ ಕುರಿತ ಶಿಫಾರಸ್ಸನ್ನು ಪರಿಶೀಲಿಸಬೇಕು(ಕನಿಷ್ಠ ಕೂಲಿ ಸಲಹಾ ಮಂಡಳಿಯ ಒಂದು ಉಪಸಮಿತಿ ಕನಿಷ್ಠ ಕೂಲಿಯನ್ನು ನಿಗದಿ ಮಾಡಲು ಈ ಮುಂದಿನ ಅಳತೆಗೋಲನ್ನು ಶಿಫಾರಸ್ಸು ಮಾಡಿತು. ಕಾರ್ಮಿಕರ ಪ್ರತಿಯೊಂದು ಕುಟುಂಬಕ್ಕೆ ನಾಲ್ಕು ಬಳಕೆ ಘಟಕಗಳ ಲೆಕ್ಕ ಹಾಕಬೇಕು, ಪ್ರತಿ ಘಟಕಕ್ಕೆ ಆಯಾಯ ಪ್ರದೇಶದ ಆಹಾರಾಭ್ಯಾಸದ ಪ್ರಕಾರ 2700 ಕ್ಯಾಲರಿಯಷ್ಟು ಪೋಷಕ, ಸಮತೋಲನದ ಆಹಾರ, ಪ್ರತಿ ಕುಟುಂಬಕ್ಕೆ ಪ್ರತಿವರ್ಷಕ್ಕೆ 125 ಮೀಟರ್ ಬಟ್ಟೆ, ಮನೆ ಬಾಡಿಗೆ, ಬಟ್ಟೆ ಮತ್ತು ಆಹಾರದ ಶೇ.15 ದಷ್ಟು ಮತ್ತು ಆಹಾರದ ಶೇ.15 ರಷ್ಟು ಮತ್ತು ಇತರೇ ಖರ್ಚು - ಇವನ್ನೆಲ್ಲಾ ಪರಿಗಣಿಸಿ ಕನಿಷ್ಠ ಕೂಲಿ ನಿರ್ಧರಿಸಬೇಕು.
4. ಕಾರ್ಮಿಕ ಮಂತ್ರಾಲಯ ರಾಜ್ಯ ಸರ್ಕಾರಗಳ ನೆರವಿನಿಂದ ಬೀಡಿ ಕಾರ್ಮಿಕರ ನಡುವೆ ಸಹಕಾರಿ ಆಂದೋಲನವನ್ನು ಪ್ರೋತ್ಸಾಹಿಸಬೇಕು, ಅದಕ್ಕೆ ಅವರ ಉತ್ಪಾದನೆಗಳಿಗೆ ಮಾರುಕಟ್ಟೆಯ ಭರವಸೆ ಒದಗಿಸಬೇಕು.
5. ಎಲ್ಲಾ ಅರ್ಹ ಕಾರ್ಮಿಕರನ್ನು ವಿಳಂಬವಿಲ್ಲದೆ ನೌಕರರ ಭವಿಷ್ಯನಿಧಿ ಮತ್ತು ಇತರ ಸೌಲಭ್ಯಗಳ ಕಾನೂನಿನ ಸದಸ್ಯರಾಗಿ ಮಾಡಬೇಕು ಎಂದೂ ಸಮಿತಿ ಶಿಫಾರಸ್ಸು ಮಾಡಿತ್ತು.
6. ಇಎಸ್ಐ ಯೋಜನೆ ಕಾರ್ಮಿಕರಿಗೆ ನಗದು ಸೌಲಭ್ಯ ಹಾಗೂ ವೈದ್ಯಕೀಯ ನೆರವು ಒದಗಿಸುವುದರಿಂದ ಗರಿಷ್ಠ ಕಾರ್ಮಿಕರನ್ನು ಅದಕ್ಕೆ ಒಳಪಡಿಸಬೇಕು. (ರಾಜ್ಯ ಸರ್ಕಾರಗಳು ಇಎಸ್ಐ ಯೋಜನೆಯಿಂದ ವಿನಾಯಿತಿ ನೀಡಿರುವುದರ ಬಗ್ಗೆ ಆತಂಕ ವ್ಯಕ್ತ ಪಡಿಸುತ್ತಾ ಈ ಶಿಫಾರಸ್ಸು ಮಾಡಲಾಗಿತ್ತು?
7. ಬೀಡಿಗೆ ಕಚ್ಚಾ ಸಾಮಗ್ರಿಗಳ ಪ್ರಮಾಣೀಕರಣ ಸಂಬಂಧಪಟ್ಟ ವಿಷಯಗಳ ಪರಿಶೀಲನೆಗೆ ಜಿಲ್ಲಾ ಮಟ್ಟಗಳಲ್ಲಿ ತ್ರಿಪಕ್ಷೀಯ ಸಮಿತಿಗಳನ್ನು ರಚಿಸಬೇಕು.
8. ಸಣ್ಣ ಬೀಡಿ ಉತ್ಪಾದಕರಿಗೆ ನೀಡಿರುವ ವಿನಾಯಿತಿಗಳನ್ನು ಮುಂದುವರಿಸಬೇಕು. ಇದು ಬ್ರಾಂಡ್ ಇಲ್ಲದ ಬೀಡಿಗಳ ಸಣ್ಣ ಉತ್ಪಾದಕರ ಕಾರ್ಮಿಕರಿಗೆ ವಿವಿಧ ಕಲ್ಯಾಣ ಯೋಜನೆಗಳ ಸೌಲಭ್ಯ ಪಡೆಯಲು ಕೂಡ ನೆರವಾಗುತ್ತದೆ.
9. ದವಾಖಾನೆಗಳು ಮತ್ತು ಆಸ್ಪತ್ರೆಗಳನ್ನು ನಿಯಮಿತವಾಗಿ ನಿರೀಕ್ಷಣೆ ನಡೆಸಬೇಕು ಹಾಗೂ ಕಾರ್ಮಿಕ ಮಂತ್ರಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಸಮಿತಿ ಶಿಫಾರಸ್ಸು ಮಾಡಿತ್ತು.
10. 'ನಿಮ್ಮ ಸ್ವಂತ ಮನೆ ಕಟ್ಟಿ' ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಹೆಚ್ಚು ಕಾರ್ಮಿಕರಿಗೆ ಹಣಕಾಸು ನೆರವು ಒದಗಿಸಲು ಸಾಧ್ಯವಾಗುವಂತೆ ಬೀಡಿ ಕಾರ್ಮಿಕರು ಸಹಕಾರಿಗಳನ್ನು ರಚಿಸಿಕೊಳ್ಳಲು ಸರ್ಕಾರ ನೆರವಾಗಬೇಕು ಎಂದು ಸಮಿತಿ ಅಭಿಪ್ರಾಯಪಟ್ಟಿತ್ತು.
11. ಬೀಡಿ ಕಾರ್ಮಿಕರು ಹೆಚ್ಚಾಗಿ ಇರುವ ಪ್ರತಿಯೊಂದು ಪ್ರದೇಶದಲ್ಲಿ, ಕನಿಷ್ಟ ಒಂದು ನಿವಾಸಿ ಶಾಲೆ ಅಥವಾ ಆಶ್ರಮ ಶಾಲೆಯನ್ನು ಸರ್ಕಾರ ಒದಗಿಸಬೇಕು, ಇವುಗಳಿಗೆ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ನಿಧಿ ಒದಗಿಸಲು ಸಾಧ್ಯ ಎಂದು ಅದು ಹೇಳಿತ್ತು.

ದಾಖಲೆ ಇಡಬೇಕಾದ ಅಂಶದಿಂದ ಮಾಲೀಕರಿಗೆ ವಿನಾಯಿತಿ ನೀಡಲು ಒಪ್ಪಲಾಯಿತು. ಇದರ ಬದಲು ಮನೆಯಿಂದ ಕೆಲಸ ಮಾಡುವ ಕಾರ್ಮಿಕರಿಗೆ ಶೇ 8.33 ಬೋನಸ್, 10 ದಿನಗಳ ರಜಾಕ್ಕೆ ಸಮನಾದ ಹೆಚ್ಚಿನ ಕೂಲಿ ಕೊಡುವುದಾಗಿ ಮಾಲೀಕರು ಒಪ್ಪಿಕೊಂಡರು.

ನಂತರ ಬೀಡಿ ಕಾರ್ಮಿಕರ ಚಳುವಳಿ ಪಶ್ಚಿಮ ಬಂಗಾಳ, ತಮಿಳುನಾಡುಗಳಲ್ಲಿಯೂ ವಿಸ್ತರಿಸಿತು. ಮಹಾರಾಷ್ಟ್ರ, ರಾಜಸ್ತಾನ, ಮಧ್ಯಪ್ರದೇಶಗಳಲ್ಲೂ ಹರಡಿತು. ಅಖಿಲ




...ಪಾಲುಗಳು



ಭಾರತ ಸಮಾವೇಶಗಳೂ ನಡೆದವು.

ಈ ಹಿನ್ನಲೆಯಲ್ಲಿ 1993 ರಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆದ ಸಮಾವೇಶದಲ್ಲಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟ ಅಸ್ತಿತ್ವಕ್ಕೆ ಬಂತು. ಅದು 50 ರೂ. ಕನಿಷ್ಠ ಕೂಲಿ ಹಾಗೂ 1300 ಪಾಯಿಂಟ್ (1960=100)ಗೆ ಮೀರಿದ ಪ್ರತಿ ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆಯ ಬೇಡಿಕೆ ಇಟ್ಟಿತು. 1994 ರ ಡಿಸೆಂಬರ್‌ನಲ್ಲಿ ತಮಿಳುನಾಡಿನ ತಿರುನಲ್ವೇಲಿಯಲ್ಲಿ ದಕ್ಷಿಣ ವಲಯ ಬೀಡಿ ಕಾರ್ಮಿಕರ ಸಮಿತಿಯ ಸಭೆ ನಡೆದು ಹೋರಾಟಗಳು ನಡೆದಲ್ಲಿ ಮಾಲೀಕರು ಬೀಡಿ ಉದ್ದಿಮೆಯನ್ನು ವರ್ಗಾಯಿಸುವ ವಿದ್ಯಮಾನದ ಕುರಿತು ಚರ್ಚೆ ನಡೆಸಿತು. ದಕ್ಷಿಣ ನಾಲ್ಕು ರಾಜ್ಯಗಳಲ್ಲಿ 1300 ಪಾಯಿಂಟ್‌ನಲ್ಲಿ 50 ರೂ ಕನಿಷ್ಠ ಕೂಲಿ, ನಂತರ ಪ್ರತಿ ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆ ಕೇಳಬೇಕು, ಇದಲ್ಲದೆ ಬೀಡಿ ಕಾರ್ಮಿಕರ ದಾಖಲೆ, ಕಲ್ಯಾಣ ಸೌಲಭ್ಯಗಳು ಹಾಗೂ ಕಾನೂನುಗಳ ಜಾರಿಯ ಕುರಿತು ಹೋರಾಟ ನಡೆಸಬೇಕೆಂದು ನಿರ್ಧರಿಸಲಾಯಿತು. ಈ ನಡುವೆ ಸೆಪ್ಟೆಂಬರ್ 1994 ರಲ್ಲಿ 41 ಸಂಸತ್ ಸದಸ್ಯರಿದ್ದ ಬೀಡಿ ಕಾರ್ಮಿಕರ ಕಲ್ಯಾಣ ಕುರಿತ ಸಂಸದೀಯ ಸಮಿತಿ (ಚಂದ್ರಪ್ರಭಾ ಅರಸ್ ಸಮಿತಿ) ತನ್ನ ಶಿಫಾರಸ್ಸುಗಳನ್ನು ನೀಡಿತ್ತು. ನಂತರ ಅಖಿಲ ಭಾರತ ಸಮ್ಮೇಳನಗಳು, ಎರಡನೇಯದ್ದು ಸೋಲಾಪುರದಲ್ಲಿ, ಮೂರನೆಯದ್ದು ಫರಕ್ಕಾದಲ್ಲಿ ನಡೆದವು. ಈಗ ನಾಲ್ಕನೆಯ ಸಮ್ಮೇಳನ ಮಂಗಳೂರಿನಲ್ಲಿ ನಡೆಯಲಿದೆ.

ಸಂದರ್ಶನ : ವೇದರಾಜ ಎನ್.ಕೆ.
ಕೃಪೆ : ಸಿಐಟಿಯು ಸಂದೇಶ



ಕನಿಷ್ಟ ಕೂಲಿ ಮತ್ತು ಬೀಡಿ ಉದ್ದಿಮೆ

ಕನಿಷ್ಠ ಕೂಲಿಯ ವಿಚಾರ ಮೂಡಿ ಬಂದದ್ದು ಹೇಗೆ?

ಭಾರತದಲ್ಲಿ ಸಂಬಳ/ ಕೂಲಿಯ ನಿರ್ಧಾರ ಸಂಘಟಿತ ವಲಯದಲ್ಲಿ ಸಾಮೂಹಿಕ ಚೌಕಾಸಿಯ ಮೂಲಕ ಆಗುತ್ತದೆ. ಸಾಮೂಹಿಕ ಚೌಕಾಸಿ ಮಾಡಲಾರದ, ತೀವ್ರ ಶೋಷಣೆಗೊಳಗಾಗಿರುವ ಅಸಂಘಟಿತ ಕಾರ್ಮಿಕರಿದ್ದಾರೆ. ಅವರನ್ನು SWEAT LABOUR ಅಥವಾ ಬೆವರು ದುಡಿಮೆಗಾರರು ಎನ್ನುತ್ತಾರೆ. ಅವರ ತೀವ್ರ ಶೋಷಣೆಯಾಗದಂತೆ ಸರ್ಕಾರ ಅವರಿಗೆ ರಕ್ಷಣೆ ನೀಡಬೇಕು, ಅವರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂಬುದರಿಂದ ಈ ವಿಚಾರ ಪ್ರಚಲಿತಕ್ಕೆ ಬಂತು. ಇದನ್ನು ಸಾಧಿಸಲಿಕ್ಕಾಗಿ 1948 ರಲ್ಲಿ ಕನಿಷ್ಠ ಕೂಲಿ ಕಾಯ್ದೆ ಬಂದಿತು. 1928 ರ ಐಎಲ್‌ಓ (ಅಂತರರಾಷ್ಟ್ರೀಯ ಕಾರ್ಮಿಕರ ಸಂಘಟನೆ) ನಿರ್ಣಯ, ಕಾರ್ಮಿಕ ಚಳುವಳಿ ಹಾಗೂ ರಾಯಲ್ ಕಮಿಶನ್- ಈ ಎಲ್ಲಾ ಒತ್ತಡಗಳಿಂದ ಈ ಕಾಯ್ದೆ ಬಂದಿತು. ಐಎಲ್‌ಓ ಕೂಡ ರಶ್ಯಾದ ಅಕ್ಟೋಬರ್ ಕ್ರಾಂತಿಯು ವಿಶ್ವದಲ್ಲಿ ಉಂಟು ಮಾಡಿದ ಒತ್ತಡದಿಂದಾಗಿ 1919 ರಲ್ಲಿ ಹುಟ್ಟಿತು ಎಂಬುದನ್ನು ಗಮನಿಸಬೇಕು.

'ಕನಿಷ್ಠ ಕೂಲಿ' ಎಷ್ಟಿರಬೇಕು ಎಂದು ನಿರ್ಧರಿಸುವುದು ಹೇಗೆ? ಅದು ಸಿಗುತ್ತಿದೆಯೇ?

1948 ರಲ್ಲಿ ಸಂವಿಧಾನ ಸಭೆ (ಆಗಿನ್ನೂ ಈಗಿನ ಸಂಸತ್ತು ರಚನೆಗೊಂಡಿರಲಿಲ್ಲ)ಯಲ್ಲಿ ಒಂದು 'ನ್ಯಾಯ ಸಮ್ಮತ ವೇತನ ಮಸೂದೆ'ಯನ್ನು ಮಂಡಿಸಲಾಯಿತು. ಸಂವಿಧಾನ ಸಭೆ ವಿಸರ್ಜನೆಗೊಂಡಾಗ ಅದು ರದ್ದಾಗಿ ಹೋಗಲು ಬಿಡುವಂತಾಯಿತು. ನ್ಯಾಯ ಸಮ್ಮತ ವೇತನ ಮಸೂದೆಯನ್ನು ಕೈಬಿಡುತ್ತಿದ್ದಂತೆ 'ಜೀವನ ವೇತನ'ದ ಘೋಷಣೆ ಬಂತು. 'ಕನಿಷ್ಟ ಕೂಲಿ' ಎಷ್ಟಿರಬೇಕು ಎಂಬ ಪ್ರಶ್ನೆ ಬಂದಾಗ 'ಬದುಕಿರಲು ಅವಶ್ಯವಾದ ಮಟ್ಟ' ಎಂಬ ಸಿದ್ಧಾಂತ ಮತ್ತು 1957 ರಲ್ಲಿ ಐಎಲ್‌ಸಿ (ಭಾರತೀಯ ಕಾರ್ಮಿಕ ಸಮ್ಮೇಳನ)ಯ 15ನೇ ಅಧಿವೇಶನದ ನಿರ್ಣಯದಿಂದ 'ಅಗತ್ಯ ಆಧಾರಿತ ಕೂಲಿ'ಯ ಪರಿಕಲ್ಪನೆ ಬಂತು. ಆದರೂ, 15ನೇ ಐಎಲ್‌ಸಿ ನಿರ್ಣಯದ ನಂತರವೂ ಅದನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಏನೂ ಮಾಡಲಿಲ್ಲ. ಆದರೆ 1957-59 ರಲ್ಲಿ ಕೇರಳದಲ್ಲಿ ಅಧಿಕಾರಕ್ಕೆ ಬಂದ ದೇಶದ ಮೊದಲ ಕಮ್ಯೂನಿಸ್ಟ್ ಸರ್ಕಾರ ಐಎಲ್‌ಸಿಯ ಶಿಫಾರಸ್ಸನ್ನು ಹಂಚು ಕಾರ್ಮಿಕರ ಕೂಲಿಯನ್ನು ನಿಗದಿಪಡಿಸುವಲ್ಲಿ ಜಾರಿಗೆ ತರಲು ಯತ್ನಿಸಿತು. ಮಾಲೀಕರು ಇದರ ವಿರುದ್ಧ ಕೋರ್ಟಿಗೆ ಹೋದರು. ಆದರೆ ಅಲ್ಲಿ ಸೋತರು. (ಉಣ್ಣಿಚೋಯ್ V/S ಕೇರಳ ಸರ್ಕಾರ) ಅಗತ್ಯ ಆಧಾರಿತ ಕನಿಷ್ಠ ಕೂಲಿಯ ಸೂತ್ರ 15ನೇ ಐಎಲ್‌ಸಿ ರೂಪಿಸಿದಂತೆ ಹಾಗೂ ಕೇರಳ ಸರ್ಕಾರ ನೇಮಿಸಿದ ಸಮಿತಿ ಅನ್ವಯಿಸಿದಂತೆ ಇರಬೇಕು ಎಂದು ಸುಪ್ರಿಂಕೋರ್ಟ್ ತೀರ್ಪಿತ್ತಿತ್ತು. ಈ ಕೇಸಿನಲ್ಲಿ, ಇನ್ನೂ ಇತರ ಹಲವು ಕೇಸುಗಳಲ್ಲಿ ಸುಪ್ರಿಂ ಕೋರ್ಟ್ ಬದುಕಿರಲು ಕನಿಷ್ಠವಾಗಿ ಬೇಕಿರುವುದಕ್ಕಿಂತ ಹೆಚ್ಚು ಕನಿಷ್ಠ ಕೂಲಿ ಕೊಡದೆ ಅಸ್ತಿತ್ವದಲ್ಲಿರಲು ಯಾವ ಉದ್ದಿಮೆಗೂ ಹಕ್ಕಿಲ್ಲ ಎಂದು ಸಾರಿದೆ. ಆದರೆ ಇಡೀ ಅಸಂಘಟಿತ ವಲಯದಲ್ಲಿ ಈಗಲೂ ಬದುಕಿರಲು ಅಗತ್ಯವಾದ ಮಟ್ಟಕ್ಕಿಂತಲೂ ಕಡಿಮೆ ಕೂಲಿಯೇ ಇದೆ.

ನಮ್ಮ ರಾಜ್ಯದಲ್ಲಿ ಕೂಲಿ ನಿಗದಿ ಮಾಡುವ ಅಧಿಕಾರಿಗಳು ಹೆಚ್ಚು ಕಡಿಮೆ ಎಲ್ಲಾ ನ್ಯಾಯಾಂಗದ ತೀರ್ಪುಗಳನ್ನು, 15ನೇ ಐಎಲ್‌ಸಿ ಶಿಫಾರಸನ್ನು ಉಪೇಕ್ಷಿಸಿದ್ದಾರೆ. ಇದುವರೆಗೆ ನೋಟಿಫೈ (ಅಧಿಸೂಚನೆ ಜಾರಿ) ಮಾಡಿದ ಕನಿಷ್ಠ ಕೂಲಿಗಳು ಅಗತ್ಯ ಆಧಾರಿತ ಕನಿಷ್ಠ ಕೂಲಿಗಿಂತ ಬಹಳ ಕಡಿಮೆ ಮಟ್ಟದಲ್ಲಿವೆ. ಅಂದರೆ ಕೂಲಿ ನಿಗದಿ ಮಾಡುವ ಅಧಿಕಾರಿಗಳಿಗೆ ಅಗತ್ಯ ಆಧಾರಿತ ಕನಿಷ್ಟ ಕೂಲಿ ಏನು ಎಂಬುದನ್ನು ಪರಿಶೀಲಿಸುವುದೂ ಅಸಂಭವವಾಗಿ ಬಿಡುತ್ತದೆ. ಆದ್ದರಿಂದಲೇ ಕನಿಷ್ಠ ಕೂಲಿ ಶಾಸನದಡಿ ಕೂಲಿ ನಿಗದೀಪಡಿಸುವ ಅಧಿಕಾರಿಗಳು ಬೇರೊಂದು ಸಿದ್ಧಾಂತವನ್ನು ಹುಡುಕಲಾರಂಭಿಸಿದರು. ಕರ್ನಾಟಕದಲ್ಲಿ ಹೀಗೆ ಅವರು ಕಂಡುಕೊಂಡ ಪರಿಕಲ್ಪನೆಯೆಂದರೆ ಕನಿಷ್ಟಕೂಲಿ ಬಡತನ ರೇಖೆಗಿಂತ ಕಡಿಮೆಯಿರಬಾರದು ಎಂದು. ಇದನ್ನು ಪ್ರತಿಪಾದಿಸಿದವರಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಒಬ್ಬರು. ಅವರ ಉದ್ದೇಶ ಕೂಲಿಯ ಮಟ್ಟವನ್ನು ಕನಿಷ್ಠ ಬಡತನ ಮಟ್ಟದವರೆಗಾದರೂ ಮೇಲೆಳೆಯುವುದು. 1990 ರಲ್ಲಿ ಈ ಬಡತನ ಮಟ್ಟದ ಕೂಲಿ ಎಷ್ಟಿರಬೇಕೆಂದು ಶಾಂತಪ್ಪ ಸಮಿತಿಯ ವರದಿ ಲೆಕ್ಕ ಹಾಕಿತು. ಡಾ.ಶಾಂತಪ್ಪ ಆಗ ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರಾಗಿದ್ದರು. ಕನಿಷ್ಠ ಕೂಲಿ ಸಲಹಾ ಸಮಿತಿ ಅವರ ಶಿಫಾರಸುಗಳನ್ನು ಅಂಗೀಕರಿಸಿತು. ಇದರ ಪ್ರಕಾರ ಮೂರು ಜನರ ಒಂದು ಕುಟುಂಬಕ್ಕೆ ಬಡತನ ಮಟ್ಟದ ಕೂಲಿ ತಿಂಗಳಿಗೆ 611 ರೂ. ಅಥವಾ ದಿನಕ್ಕೆ 23.50 ರೂ. ಇದು 908 ಬೆಲೆ ಸೂಚ್ಯಾಂಕದಲ್ಲಿ (1989 ರಲ್ಲಿ ರಾಜ್ಯ ಸರಾಸರಿ ಸೂಚ್ಯಾಂಕ ಇದು). ಬೀಡಿ ಮತ್ತು ಪ್ಲಾಂಟೇಶನ್‌ಗಳಲ್ಲಿ ಇದೇ ನಿಗದಿಯಾಗಬೇಕೆಂದು, ಮೂಲ ಕೂಲಿ ದಿನಕ್ಕೆ 25 ರೂ.ಗಳಿಗಿಂತ ಕಡಿಮೆ ಇದ್ದಲ್ಲಿ ಪ್ರತಿ ಪಾಯಿಂಟಿಗೆ 3.5 ಪೈಸೆ, 25 ರೂ.ಗಿಂತ ಹೆಚ್ಚಿದ್ದಲ್ಲಿ 4 ಪೈಸೆ, ಮೂಲದಿನಗೂಲಿ 30 ರೂ. ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ 5 ಪೈಸೆ ಬಂದಲ್ಲಿ ವಿಡಿಎ (ತುಟ್ಟಿಭತ್ಯೆ ಹೆಚ್ಚಳ)ಯನ್ನು ಶಿಫಾರಸ್ಸು ಮಾಡಲಾಗಿತ್ತು.

1948 ರ ಕನಿಷ್ಠ ಕೂಲಿ ಕಾಯಿದೆಯಡಿ ಕನಿಷ್ಠ ಕೂಲಿಯ ನೋಟಿಫಿಕೇಶನ್ (ಅಧಿಸೂಚನೆ) ಹೇಗಾಗುತ್ತದೆ?

ಈ ಕಾಯ್ದೆಯ ಶೆಡ್ಯೂಲಿನಲ್ಲಿ ನಮೂದಿಸಿದ ಯಾವುದೇ ದರ್ಜೆಯ ಉದ್ದಿಮೆಯಲ್ಲಿ ಕೊಡಬೇಕಾದ ಕನಿಷ್ಠ ಕೂಲಿಯನ್ನು ಸೂಕ್ತ ಸರ್ಕಾರ(ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ, ಬಹುಪಾಲು ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳು) ನೋಟಿಫೈ ಮಾಡಬಹುದು. ನೋಟಿಫೈ ಮಾಡುವ ಶೆಡ್ಯೂಲಿನಲ್ಲಿನ ಉದ್ದಿಮೆಗಳ ಪಟ್ಟಿಗೆ ಹೊಸ ಉದ್ದಿಮೆಗಳನ್ನು ಸೇರಿಸಬಹುದು. ಕೂಲಿ ಅಥವಾ ಸಂಬಳದ ಕನಿಷ್ಠ ದರಗಳ ಕರಡನ್ನು ಪ್ರಕಟಿಸಿ ಈ ಕರಡು ಪ್ರಸ್ತಾಪಗಳ ವಿರುದ್ಧ ಅಭಿಪ್ರಾಯ ಮಂಡಿಸಲು ಅವಕಾಶ ಕೊಟ್ಟು ಅಥವಾ ಸಲಹಾ ಸಮಿತಿಗಳೊಡನೆ ಸಮಾಲೋಚಿಸಿ ನಂತರ ಗೆಜೆಟ್ (ರಾಜ್ಯಪತ್ರ)ದಲ್ಲಿ ಪ್ರಕಟಿಸುವ ಮೂಲಕ ಕನಿಷ್ಠ ಕೂಲಿ ದರಗಳನ್ನು ನಿಗದಿಪಡಿಸಲು ಸೂಕ್ತ ಸರ್ಕಾರಕ್ಕೆ, ಈ ಕಾಯ್ದೆ ಅಧಿಕಾರ ನೀಡುತ್ತದೆ. ಸರ್ಕಾರ ಎರಡು ಸೂಚನೆ ಜಾರಿ ಮಾಡಿ, ಅವುಗಳ ಬಗ್ಗೆ ಅಡ್ಡಿ-ಆಕ್ಷೇಪಗಳನ್ನು ಪಡೆದ ನಂತರ ಅವನ್ನು ಸಾಮಾನ್ಯವಾಗಿ ಕನಿಷ್ಠ ಕೂಲಿ ಸಲಹಾ ಸಮಿತಿಗಳ ಮುಂದಿಡುತ್ತದೆ. ಈ ಸಮಿತಿಗಳಲ್ಲಿ ಆಡಳಿತ ಮಂಡಳಿ, ಕಾರ್ಮಿಕರು ಹಾಗೂ ಸ್ವತಂತ್ರ ಸದಸ್ಯರಿಗೆ ಸಮಾನ ಪ್ರಾತಿನಿಧ್ಯ ಇರುತ್ತದೆ. ಈ ಸಮಿತಿಗಳು ತಮ್ಮ ಶಿಫಾರಸು ನೀಡಿದ ಮೇಲೆ ಸರ್ಕಾರ ಅದನ್ನು ಪರಿಶೀಲಿಸಿ ತನ್ನದೇ ನಿರ್ಧಾರಕ್ಕೆ ಬಂದು ಕನಿಷ್ಠ ಕೂಲಿಯನ್ನು ನಿಗದಿಪಡಿಸಿ ಅಧಿಸೂಚನೆ (ನೋಟಿಫಿಕೇಶನ್) ಜಾರಿ ಮಾಡುತ್ತದೆ. ಈ ಕೂಲಿಗಿಂತ ಕಡಿಮೆ ಮಟ್ಟದ ಕೂಲಿಯನ್ನು ಮಾಲಿಕರು ಕೊಡುವಂತಿಲ್ಲ, ಹೆಚ್ಚು ಕೊಡಲು ಅಡ್ಡಿಯಿಲ್ಲ, ಆದ್ದರಿಂದಲೇ ಇದಕ್ಕೆ ಕನಿಷ್ಠ ಕೂಲಿ ಎಂಬ ಹೆಸರು ಬಂತು.



ಕನಿಷ್ಟ ಕೂಲಿಗಾಗಿ ಮುಷ್ಕರ

ಕರ್ನಾಟಕದಲ್ಲಿ ಬೀಡಿ ಉದ್ದಿಮೆಯಲ್ಲಿ ಕನಿಷ್ಠ ಕೂಲಿಯ ಪ್ರಶ್ನೆ ಎಂದಿನಿಂದ ಆರಂಭವಾಯಿತು?

1967 ರಲ್ಲಿ ದೇಶದಲ್ಲಿ 'ಬೀಡಿ ಹಾಗೂ ಸಿಗಾರ್ ಕಾರ್ಮಿಕರ ಕಾಯ್ದೆ' ಬಂದರೂ ರಾಜ್ಯಸರ್ಕಾರ ಇದರಡಿ ನಿಯಮಗಳನ್ನು ರೂಪಿಸಿದ್ದು 1969ರಲ್ಲಿ 1970 ರಲ್ಲಿ ನೋಟಿಫಿಕೇಶನ್ ಬಂತು. ಆಗ ತುಟ್ಟಿಭತ್ಯೆಲಾಗೂ ಆಗುತ್ತಿರಲಿಲ್ಲ. ಕನಿಷ್ಠ ಕೂಲಿಯ ಪರಿಷ್ಕರಣೆ ಆಗುತ್ತಿತ್ತು. 1982 ರಲ್ಲಿ ನಾವು ತುಟ್ಟಿಭತ್ಯೆ (ವಿಡಿಎ)ಯ ಬಗ್ಗೆ ಒತ್ತಾಯ ಮಾಡಿದೆವು. ಈ ಹೋರಾಟದ ಫಲವಾಗಿ ಪ್ರತಿಪಾಯಿಂಟಿಗೆ 2 ಪೈಸೆ ವಿಡಿಎ ಸಿಗಲಾರಂಭಿಸಿತು. ಆದರೆ ಇದರ ನಂತರ ಕನಿಷ್ಠ ಕೂಲಿಯ ನೋಟಿಫಿಕೇಶನ್ ನಿಯಮಿತವಾಗಿ ನಡೆಯಲಿಲ್ಲ. 1990 ರಲ್ಲಿ ಶಾಂತಪ್ಪ ಸಮಿತಿಯ ವರದಿಯ ಪ್ರಕಾರ ಕೂಲಿ ಬಡತನದ ರೇಖೆಗಿಂತ ಕಡಿಮೆಯಿರಬಾರದೆದು ಕನಿಷ್ಠ ಕೂಲಿ ಸಲಹಾ ಸಮಿತಿ 908 ಪಾಯಿಂಟ್‌ನ್ನು 23-80 ರೂ. ಕೂಲಿ ಹಾಗೂ ಅಲ್ಲಿಂದ ಪ್ರತಿ ಪಾಯಿಂಟಿಗೆ 3.50 ರೂ. ವಿಡಿಎ ಶಿಫಾರಸ್ಸು ಮಾಡಿತು. ಅದರೆ ಬಂಗಾರಪ್ಪ ಸರ್ಕಾರ ಇದನ್ನು ಪರಿಗಣಿಸದೆ ಮಾಲೀಕರ ವಾದ ಪರಿಗಣಿಸಿ 976 ಪಾಯಿಂಟಿನಲ್ಲಿ 19.65 ರೂ. ನಿಗದಿ ಪಡಿಸಿತು ಹಾಗೂ ವಿಡಿಎ ಪಾಯಿಂಟಿಗೆ 2ಪೈಸೆಯಂತೆ ಮುಂದುವರೆಯಿತು.

ದೇಶದಲ್ಲೆಲ್ಲಾ ಸಮಾನ ವೇತನ ಅಥವಾ ಕೂಲಿಯ ಪ್ರಶ್ನೆಯನ್ನು ಎದುರಿಸಿದ್ದು ಹೇಗೆ?

ಆರಂಭದಿಂದಲೂ ಬೀಡಿ ಕಾರ್ಮಿಕರ ಆಂದೋಲನದ ಎದುರಿದ್ದ ಒಂದು ದೊಡ್ಡ ಸವಾಲೆಂದರೆ ಬೀಡಿ ಮಾಲೀಕರ ವಲಸೆ ಕೇರಳದಲ್ಲಿ ಬೀಡಿ ಕಾರ್ಮಿಕರ ಚಳುವಳಿ ಬಲಗೊಂಡಾಗ ಬೀಡಿ ಮಾಲೀಕರು ತಮ್ಮ ಉದ್ದಿಮೆಗಳನ್ನು ವರ್ಗಾಯಿಸಿ ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಳುವಳಿ ಬಲಗೊಳ್ಳಲಾರಂಭಿಸಿ ದಾಗ ಮಾಲೀಕರು ತಮ್ಮ ವ್ಯವಹಾರಗಳನ್ನು ರಾಜ್ಯದ ಬೇರೆಡೆಗೆ, ತಮಿಳುನಾಡು, ಆಂಧ್ರಪ್ರದೇಶಗಳಿಗೆ ವರ್ಗಾಯಿಸಲಾರಂಭಿಸಿದರು. ತಮಿಳುನಾಡಿನ ತಿರನಲ್ವೇಲಿ ಜಿಲ್ಲೆ ಈ ಮಾಲೀಕರಿಗೆ ಆಶ್ರಯತಾಣವಾಯಿತು. ಆದರೆ ರಾಜಾಂಗಂ ಮೊಕದ್ದಮೆಯಿಂದಾಗಿ ಇಲ್ಲೂ ಅವರಿಗೆ ಸವಾಲು ಬಂತು. ಈ ಹಿನ್ನೆಲೆಯಲ್ಲಿ ಬೀಡಿ ಕಾರ್ಮಿಕರ ದಕ್ಷಿಣ ವಲಯ ಸಮಿತಿಯ ಸಭೆ ಡಿಸೆಂಬರ್ 1994 ರಲ್ಲಿ ಇದೇ ತಿರುನಲ್ವೇಲಿಯಲ್ಲಿ ನಡೆಯಿತು. ಆಗ ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಅದುವರೆಗೆ ಬೀಡಿ ಮಾಲೀಕರ ಪರ ನಿಲುವು ತಳೆದಿದ್ದ ಕಾಂಗ್ರೆಸ್ಸಿನ ಆಡಳಿತವನ್ನು ಜನ ತಿರಸ್ಕರಿಸಿದ್ದು ಅನುಕೂಲಕರ ವಾತಾವರಣವಿತ್ತು. ಅಲ್ಲದೆ ಅದಾಗಲೇ ಬೀಡಿ ಕಾರ್ಮಿಕರ ಕುರಿತಾದ ಸಂಸದೀಯ ಸಮಿತಿಯಾದ ಚಂದ್ರಪ್ರಭಾ ಅರಸ್ ಸಮಿತಿ ಬೀಡಿ ಕಾರ್ಮಿಕರ ಕನಿಷ್ಟ ಕೂಲಿಯೂ ಸೇರಿದಂತೆ ಒಂದು ಸಮಗ್ರ ವರದಿಯನ್ನು ಸಲ್ಲಿಸಿತ್ತು. ಈ ವರದಿ ಜಾರಿಯಾಗಬೇಕು, ಈ ನಾಲ್ಕು ರಾಜ್ಯಗಳಲ್ಲಿ 1300 ಪಾಯಿಂಟ್‌ನಲ್ಲಿ 50 ರೂ.ಕನಿಷ್ಠಕೂಲಿ, ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆಯ ಬೇಡಿಕೆಯಿಡಬೇಕು ಹಾಗೂ ಬೀಡಿ ಕಾರ್ಮಿಕರ ಸರ್ವೆ, ದಾಖಲಾತಿ, ಕೂಲಿಪಟ್ಟಿ ಹಾಗೂ ಇತರ ಕಾನೂನಾತ್ಮಕ ಸೌಲಭ್ಯಗಳನ್ನು ಆಗ್ರಹಿಸಿ ಹೋರಾಟ ನಡೆಸಲು

ಪುಟ 8 ಕ್ಕೆ

ಅನೇಕ ಸಂಕಷ್ಟ,ಸವಾಲುಗಳನ್ನು ಎದುರಿಸುತ್ತಾ, ವಿರಳಿತ ಕಂಡಿರುವುದು ಬೀಡಿ ಉದ್ಯಮ. ಈ ಉದ್ಯಮದ ಹಾಗೂ ಕಾರ್ಮಿಕರು ವಹಿಸುವ ಸಾಮಾಜಿಕ ಆಯಾಮಗಳನ್ನು ವಿಶಿಷ್ಟವಾಗಿ ಗುರುತಿಸಿದ್ದಾರೆ ಲೇಖಕರು

ಬೀಡಿ ಉದ್ಯಮದಲ್ಲಿ ಕಾರ್ಮಿಕರು

ಕೃಷ್ಣಪ್ಪ ಕೊಂಚಾಡಿ

ಬೀಡಿ ಕೈಗಾರಿಕೆ ಕೇವಲ ಕಾರ್ಮಿಕ ಮತ್ತು ಮಾಲಿಕ ಸಂಬಂಧಗಳೊಂದಿಗೆ ಸಮಾಪ್ತಿಯಾಗುವ ಸೀಮಿತ ಸೀಮಾ ವಲಯವನ್ನು ಮೀರಿರುವ ಒಂದು ಉದ್ಯಮವಾಗಿದೆ. ಚಾರಿತ್ರಿಕವಾಗಿ ಮತ್ತು ಕಾಲದ ಅವಶ್ಯಕತೆಯ ಅನಿವಾರ್ಯತೆಯಾಗಿ ಅದರ ನಾಡಿ ಮಿಡಿತಕ್ಕೆ ಸ್ಪಂದಿಸಿ ಅವಿಭಜಿತ ದ.ಕ. ಜಿಲ್ಲೆಯ ಮಟ್ಟಿಗಂತೂ ಒಂದು ನಿರ್ಣಾಯಕ ತಿರುವು ನೀಡಿದ ಉದ್ಯಮವಾಗಿದೆ.

ಇಂದು ಈ ಉದ್ಯಮ ಸಂಕಟಮಯ ಸನ್ನಿವೇಶದಲ್ಲಿ ಇರಬಹುದು. ಆ ಮೂಲಕ ಇದನ್ನೇ ಆಶ್ರಯಿಸಿರುವ ಲಕ್ಷಾಂತರ ಕಾರ್ಮಿಕ ಕುಟುಂಬಗಳಿಗಂತೂ ಕಷ್ಟದ ಸನ್ನಿವೇಶವನ್ನು ತಂದೊಡ್ಡಿರಬಹುದು. ಆದರೆ ಏಳೆಂಟು ದಶಕಗಳ ಹಿಂದಿನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ, ಸಾಂಸ್ಕೃತಿಕ ಸನ್ನಿವೇಶದಲ್ಲಿ ಇದು ನಿರ್ವಹಿಸಿರುವ 'ಧನಾತ್ಮಕ' ಪಾತ್ರವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ಸಾಮಾಜಿಕ ಸನ್ನಿವೇಶದ ಚಾರಿತ್ರಿಕ ಸಂಬಂಧಗಳನ್ನು ವಿಶ್ಲೇಷಿಸುವಾಗ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಕೋಮುವಾರು ಭಾವನೆಗಳೇ ಮೊದಲಾದ ಮಾನವ ವಿರೋಧಿ ಮೌಲ್ಯಗಳೊಂದಿಗೆ ಮುಸುಕಿನ ಗುದ್ದಾಟವನ್ನು ಬೀಡಿ ಉದ್ಯಮ ನಡೆಸಿದೆ. ಈ ಕೆಟ್ಟ ಬಳುವಳಿಗಳ ಮುಂದುವರಿಕೆಗೆ ಪ್ರತಿರೋಧವನ್ನು ತನ್ನದೇ ಆದ ಮೌಲ್ಯಗಳೊಂದಿಗೆ ಎದುರಿಸಿದೆ. ಅದು ಬೀಡಿ ಉದ್ಯಮದ ಪ್ರಾರಂಭದಲ್ಲಿ ಕಂಪನಿಗಳಿಗೆ ಬಂದು ಸಾಮೂಹಿಕವಾಗಿ ಬೀಡಿ ಕಟ್ಟುವ ಸನ್ನಿವೇಶದಲ್ಲೇ ಆಗಿರಬಹುದು ಅಥವಾ ಅನಂತರ ಅದು ಬದಲಾಗಿ ವ್ಯಾಪಕವಾಗಿ ಪ್ರಸರಿಸಿದ ಬೀಡಿ ಬ್ರಾಂಡುಗಳ ಮೂಲಕ ಬೀಡಿ ಕಟ್ಟುವ ಪದ್ಧತಿಯಲ್ಲೇ ಆಗಿರಬಹುದು. ಈ ವಿಧಾನಗಳೆರಡರಲ್ಲೂ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತಾ, ಕೋಮು ಭಾವನೆಗಳಿಗೆ ಆಸ್ಪದವೇ ಇಲ್ಲವಾಗಿದೆ. ಒಬ್ಬ ಮಾನವಜೀವಿಯಾಗಿ ದಲಿತ ವರ್ಗದ ವ್ಯಕ್ತಿಯನ್ನು ಅಥವಾ ಹಿಂದುಳಿದ ವ್ಯಕ್ತಿಯನ್ನು ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಮುಟ್ಟದಿರಬಹುದು. ಆದರೆ ಆತ ಕಟ್ಟಿದ ಬೀಡಿಯ ಬಗ್ಗೆ ಈ ಭಾವನೆಗಳು ಅದನ್ನು ಸೇವಿಸುವ ಯಾರಲ್ಲೂ ಸಾಧ್ಯವಿಲ್ಲ. ಅದನ್ನು ಆಸ್ವಾದಿಸುವ ವ್ಯಕ್ತಿ ಅದರಿಂದ ಹೊರಬರುವ ಬಿಳಿಯ ಹೊಗೆ ನೋಡುತ್ತಾನಲ್ಲದೆ ಅದನ್ನು ಕಟ್ಟಿದ ವ್ಯಕ್ತಿಯು ಸ್ಪೃಶ್ಯನೇ, ಅಸ್ಪೃಶ್ಯನೇ ಎಂಬ ಬಗ್ಗೆ ಚಿಂತಿಸಲಾರ.

ಕಟ್ಟುಪಾಡುಗಳ ಮೇಲೆ ಗದಾಪ್ರಹಾರ

ಕೆಲವು ಜೀವನೋಪಾಯ ಕಸುಬುಗಳನ್ನು ಹುಟ್ಟಿನೊಂದಿಗೆ ಸಮೀಕರಿಸಿರುವ ನಮ್ಮ ಶ್ರೇಣೀಕೃತ ಸಮಾಜ ವ್ಯವಸ್ಥೆಯು ಬೀಡಿ ಉದ್ಯಮಕ್ಕೆ ಇಂತಹ ಮಾಮೂಲಿ ಕಟ್ಟುಪಾಡುಗಳನ್ನು ಹೆಣೆಯುವಲ್ಲಿ ಸೋತಿದೆ. ಅಂದರೆ ಎಲ್ಲಾ ದಲಿತ ಸಮುದಾಯದ ಜನರನ್ನು ಹಿಂದುಳಿದವರನ್ನು ಏನೊಂದೂ ಬೇಧಭಾವ ಎಣಿಸದೆ ಸ್ವಾಗತಿಸಬಹುದು ಎಂದು ಅರ್ಥವಲ್ಲ; ಅಥವಾ ಬಹಳಷ್ಟು ದಲಿತ ಮತ್ತು ಹಿಂದುಳಿದ ಜಾತಿಯ ಹಿಂದುಳಿದ ಈ ಸಮುದಾಯಗಳನ್ನು ಜಾತಿಯ ಕಟ್ಟುಪಾಡಿನ ಕಾರಣಕ್ಕಾಗಿ ಬೀಡಿಯಲ್ಲಿ ದುಡಿಯುವುದಕ್ಕೆ ಅಡೆತಡೆ ವಿಧಿಸಿರಲಿಕ್ಕಿಲ್ಲ ಎಂದು ಅರ್ಥವಲ್ಲ. ಸಾವಿರಾರು ವರ್ಷಗಳ ಕಟ್ಟುಪಾಡುಗಳ ಮೇಲೆ ಗದ ಪ್ರಹಾರ ನೀಡುವ ಪ್ರತೀ ಕೂದಲೆಳೆಯ ಸನ್ನಿವೇಶಗಳಲ್ಲೂ ವೈರುಧ್ಯಗಳು, ಸಂಘರ್ಷಗಳು ವಿರೋಧಾಭಿಪ್ರಾಯಗಳು ಮನೆ ಮಾಡಿಕೊಂಡು ಆಯಾಯ ಸಂದರ್ಭಗಳ ಸಾಮಾಜಿಕ, ರಾಜಕೀಯ, ಚಟುವಟಿಕೆಗಳ ಭಾಗವೇ ಆಗಿರುತ್ತದೆ. ಇಂದು ಈ ಸಾಮಾಜಿಕ ಸ್ಥಾನಮಾನ, ಕಟ್ಟುಪಾಡುಗಳಿಗೆ ಸಂಬಂಧಿಸಿ ಧನಾತ್ಮಕ ಬೆಳವಣಿಗೆ ಆಗಿದೆ ಎಂದು ನಾವು ಒಪ್ಪುವುದಾದರೆ ಅಂದು ಪ್ರತಿರೋಧ ಇಂಚು ಇಂಚಿಗೂ ಇತ್ತು ಎಂದೇ ಅರ್ಥ. ಇದು ಒಂದು ಸಾಮಾಜಿಕ ಸನ್ನಿವೇಶದ ಮುಖಾಮುಖಿಗೆ ಸಂಬಂಧಪಟ್ಟ ಅಂಶ ಆದ ಕಾರಣ ಇದರ ವಿವಿಧ ಸೆಳೆತಗಳ ಅಧ್ಯಯನವು ಪ್ರತ್ಯೇಕವಾಗಿ ನಡೆಯುವ ಅವಶ್ಯಕತೆ ಇದೆ.

ಬೀಡಿ ಉದ್ಯಮದ ಈ ಪ್ರಗತಿಪರ ಅಂಶವನ್ನು ಗುರುತಿಸುವ ಸನ್ನಿವೇಶದಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಅಂದರೆ ನಮ್ಮ ಸಮಾಜದ ಮುಂದುವರಿದ ಜಾತಿಗಳ ಜನಸಂಖ್ಯೆಯ ಪ್ರಮಾಣದಲ್ಲಿ ಅತ್ಯಲ್ಪ ಮಾತ್ರ ಬೀಡಿಯಲ್ಲಿ ದುಡಿಯುತ್ತದೆ. ಇದಕ್ಕೇ ಸಾಮಾಜಿಕ ನೆಲೆಗಟ್ಟು ಕಾರಣವೇ, ಭೂಸಂಬಂಧದ ಸ್ವರೂಪ ಅಥವಾ ಪಕ್ಕಾ ಆರ್ಥಿಕ ಸಂಬಂಧಗಳು ಕಾರಣವೇ ಎಂಬುದನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಬೇಕಾಗಿದೆ. ಧಾರ್ಮಿಕ ಕಾರಣಗಳು ಕೂಡಾ ಎಷ್ಟರ ಮಟ್ಟಿಗೆ ಈ ಅನುಲೋಮ ಬೆಳವಣಿಗೆ ಕಾರಣವಾಗಿದೆ ಎಂಬುದನ್ನು ನಾವು ಎದುರಿಸಬೇಕಾಗಿದೆ.

ಕೋಮುಸಾಮರಸ್ಯ

ಅವಿಭಜಿತ ಜಿಲ್ಲೆಯ ಸಮಕಾಲೀನ ಸಾಮಾಜಿಕ, ರಾಜಕೀಯ ಸಂಬಂಧದ ಕ್ಯಾನ್ಸರ್ ಆಗಿರುವ ಹಿಂದೂ-ಮುಸ್ಲಿಂ ಮತೀಯ ಸಂಘರ್ಷದ ಕೋಮುವಾರು ಭಾವನೆಯ ಬಗ್ಗೆ ಬೀಡಿ



ಉದ್ಯಮದ ಪರಿಣಾಮ ಮಾನವತಾ ಪರ ಎಂಬುದನ್ನು ನಾವು ಗಮನಿಸಬೇಕು. ಈ ಉದ್ಯಮದ ವಿವಿಧ ಸ್ತರಗಳಲ್ಲಿ ದುಡಿಯುತ್ತಿರುವ ಕಂಟ್ರಾಕ್ಟರುದಾರರುಗಳಲ್ಲಿ,ಕಾರ್ಮಿಕ ಬಂಧುಗಳ ಮಧ್ಯೆ ಪರಸ್ಪರ ವಿಶ್ವಾಸಪೂರ್ವಕ ಸಹಕಾರ ಮತ್ತು ಶಾಂತಿ ಸಹಬಾಳ್ವೆಯ ಸಾಂಸ್ಕೃತಿಕ ಬದುಕು ಬೇರೆ ಯಾವ ಕೈಗಾರಿಗಾ ರಂಗವೂ ನೀಡದಂತಹ ಕಾಣಿಕೆಯನ್ನು ನೀಡಿದೆ. ಇದು ಹಲವು ಹೋರಾಟಗಳ ನಡುವೆ ಬೆಳೆದ ಸಂಘರ್ಷ ಮತ್ತು ಐಕ್ಯತೆಯ ಭಾವದಿಂದ ಈ ಉದ್ಯಮದ ಪ್ರಾರಂಭದ ದಿನಗಳಲ್ಲಿ ಮುಸ್ಲಿಂ ಜನ ಸಮುದಾಯವೇ ಹೆಚ್ಚಿನ ಪ್ರಮಾಣದಲ್ಲಿ ದುಡಿಯುತ್ತಿದ್ದು, ಕ್ರಮೇಣ ನಮ್ಮ ಸಮಾಜದ ಇತರ ಜನ ವಿಭಾಗಗಳನ್ನು ಸೇರಿಸಿಕೊಂಡು ಬೆಳೆದ ವಿಶೇಷತೆ ಈ ಉದ್ಯಮಕ್ಕೆ ಇದೆ. ಈ ರೀತಿಯಲ್ಲಿ ಒಂದು ಸಮುದಾಯದ ಮಧ್ಯ ಕಪಿಮುಷ್ಠಿ ಎಂಬ ರೀತಿಯ ಲ್ಲಿದ್ದು ಉದ್ಯಮ ಅತ್ಯಲ್ಪ ಅವಧಿಯಲ್ಲೇ ನಿಜವಾದ ಸಾಮಾಜೀಕರಣದ ಪ್ರಕ್ರಿಯೆಗೆ ಒಳಗಾಗಿ ಮತೀಯ ಮತ್ತು ಜಾತೀಯ ಘಾಟು ವಾಸನೆಯಿಂದ ಹೊರತಾದುದು ಸ್ವಾಗತಾರ್ಹ ಬೆಳವಣಿಗೆ. ಇದರ ಸ್ಥೂಲ ಪರಿಣಾಮವೇ ಒಂದು ಮತೀಯ ಅನೋನ್ಯತೆಗೆ ಸಹಕಾರಿಯಾಯಿತು. ಮಾತ್ರವಲ್ಲದೆ ಜನರ ಸಾಮಾಜಿಕ ಮತ್ತು 'ಕೊಳ್ಳುವ' ತಾಕತ್ತಿನಲ್ಲಿ ಬ ದ' ಲಾ ವ' ಣ' ಗ' ಳಿ ಗ' ೂ ಕಾರಣವಾಗಿದೆ. ಒಂದಂತೂ ಸ್ಪಷ್ಟ. ದಲಿತ ಮತ್ತು ಹಿಂದುಳಿದ ಸಮುದಾಯಕ್ಕೆ ಸರಕಾರದ ಖಜಾನೆಯ ಮೂಲಕ ಅವರ ಜೀವನದ ಪರಿಸ್ಥಿತಿ ಉತ್ತಮಗೊಳ್ಳಲು ದೊರೆತಿರುವ ಪಾಲಿಗಿಂತ ಸಾವಿರ ಸಾವಿರ ದೊಡ್ಡ ಪಾಲು ಈ ಬೀಡಿ ಉದ್ಯಮದ ಸಾಮಾಜೀಕರಣದಿಂದ ಲಭಿಸಿದೆ. ಸರಕಾರದ ಕೋಟಿ ಕೋಟಿ ರೂಪಾಯಿ ಗಳ ಪಂಚವಾರ್ಷಿಕ ಯೋಜನೆಗಳು ಈ ಸಮುದಾಯ ದಿಂದ ಯೋಜನ ದೂರ ಸುಳಿದಾಡಿದರೆ, ಬೀಡಿ ಉದ್ಯಮದ ಪ್ರಯೋಜನ ಗಳು ಪ್ರತೀ ಮನೆಮನೆಯಲ್ಲೂ ಪ್ರಜ್ವಲಿಸಿದೆ.

ಈ ಉದ್ಯಮದಲ್ಲಿ ದುಡಿಯುವ ಕಾರ್ಮಿಕ ಬಂಧುಗಳು ವಿವಿಧ ರೀತಿಯ ಕಾಯಿಲೆಗಳ ವಾರೀಸುದಾರರಾದರೂ ಸಮಾಜಕ್ಕೆ ಬಡಿದಿರುವ ಕಾಯಿಲೆಗಳಿಗೆ ಪ್ರತಿರೋಧ ಒಡ್ಡಿದ್ದಾರೆ ಎಂಬುದನ್ನು ಹೇಗೆ ತಾನೇ ಮರೆಯಲು ಸಾಧ್ಯ.

ಒಬ್ಬ ಕವಿ ವಾಣಿ ಹೇಳುತ್ತದೆ - ದೇವಸ್ಥಾನದ ಗಂಟೆ ಬಾರಿಸಿದಾಗ ಹಿಂದೂ ಮತಸ್ಥ ಅತ್ತ ಕಡೆ ಹೋಗಬಹುದು. ಚರ್ಚಿನ ಗಂಟೆ ಬಾರಿಸಿದಾಗ ಕ್ರೈಸ್ತ ಸಮುದಾಯ ಅತ್ತ ಕಡೆ ಹೋಗಬಹುದು. ಅದೇ ರೀತಿ ಮಸೀದಿಯ ಕರೆಗೆ ಮುಸ್ಲಿಂ ಸಮುದಾಯ ಅದರತ್ತ ಹೋಗಬಹುದು. ಆದರೆ ಕಾರ್ಖಾನೆಯೊಂದರ ಸಿಳ್ಳು ಕೇಳಿದಾಗ ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲರೂ ಹೋಗುತ್ತಾರೆ. ಅಂದರೆ ಕಾರ್ಖಾನೆಯೊಂದರ ಒಂದು ಗಂಟೆ ಅಥವಾ ಸ್ವರ ಮತ, ಧರ್ಮ ಬೇಧ ಮರೆತು ಕಾರ್ಮಿಕರೆಲ್ಲರೂ ಒಂದೇ ಎಂಬ ಚಿಂತನೆಗೆ ಪ್ರೇರೇಪಿಸಿದರೆ ಬೀಡಿ ಉದ್ಯಮದಲ್ಲಿ ಅಂತಹ ಯಾವುದೇ ಗಂಟೆಯ ಸ್ವರವಿಲ್ಲದೇ ನಿಯತಕಾಲಿಕ ಇದ್ದರೂ ಮತೀಯ ಸೌಹಾರ್ದತೆ ಬೆಸೆಯಲು ಸಾಧ್ಯ ಎಂಬುದೇ ಬೀಡಿ ಉದ್ಯಮದ ಮತ್ತೊಂದು ವಿಶೇಷತೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೋಟೆಕಾರು ಪ್ರದೇಶದಲ್ಲಿ 'ಮುಸ್ಲಿಂ ಕೆಲಸಗಾರರ ಬೀಡಿ ಸಂಘಟನೆ ಸ್ಥಾಪಿಸಲ್ಪಟ್ಟರೂ ಅನಂತರದ ದಿನಗಳಲ್ಲಿ ಅದು ಅಸ್ತಿತ್ವ ಕಳೆದುಕೊಂಡು ಕಾರ್ಮಿಕ ವರ್ಗದ ಭಾತೃತ್ವ ಬದ್ಧವಾದ ಸೈದ್ಧಾಂತಿಕ ನೆಲೆಗಟ್ಟಿನ ಕಾರ್ಮಿಕ ಸಂಘಟನೆಗಳು ರೂಪುಗೊಂಡಿವೆ.

ಮಹಿಳೆಯರ ಪಾಲು

ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳು ವಿಜೃಂಭಿಸಿದ ಜಿಲ್ಲೆಯ ಜನರ ಬದುಕಿಗೆ ಮಧ್ಯೆ ಪ್ರಾರಂಭದಲ್ಲಿ ಬೀಡಿ ಉದ್ಯಮದಲ್ಲಿ ಕಾರ್ಮಿಕರಾಗಿ ಪುರುಷರೇ ಬಹುಸಂಖ್ಯಾತರಾಗಿದ್ದರು. ಆದರೆ ಮಹಿಳೆಯರು ಪಾಲ್ಗೊಳ್ಳುವ ಪ್ರಕ್ರಿಯೆ ಉನ್ನತ ಹಂತವನ್ನು ತಲುಪಿ ಶೇಕಡಾ 98 ರಷ್ಟರವರೆಗೆ ಬೆಳೆದಿದೆ. ಈ ಬೆಳವಣಿಗೆಯನ್ನು ಕೇವಲ ಪುರುಷರ ಬದಲು ಮಹಿಳೆಯರು ಎಂಬ ಲಿಂಗ ಸಂಬಂಧಿ ಬದಲಾವಣೆ ಎಂದು ನಗಣ್ಯ ಮಾಡುವುದು ಅಕ್ಷಮ್ಯವಾಗುತ್ತದೆ. ಇದು ಶೈಕ್ಷಣಿಕ, ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಸ್ಥಿತಿಗತಿಯ ಮೇಲೆ ಗಂಭೀರ ಪರಿಣಾಮ ಬೀರಿದ ಬೆಳವಣಿಗೆಯಾಗಿದೆ. 'ಹೆಣ್ಣೊಬ್ಬಳು ಕಲಿತರೆ ಮನೆಯೊಂದು ಬೆಳಗಿದಂತೆ' ಎಂಬ ಪ್ರಚಲಿತದಂತೆ ಯಾವಾಗ ಈ ಬಹುಸಂಖ್ಯಾತ ಮಹಿಳಾ ಸಮುದಾಯದ ಮಧ್ಯೆ 'ಆರ್ಥಿಕ ಸಂಪನ್ಮೂಲನ' ಪ್ರಾರಂಭವಾಯಿತೋ ಅದು ಆಕೆಯನ್ನು ಒಂದು ಯಂತ್ರದ ಬದಲು ಸ್ವಲ್ಪ ಮಟ್ಟಿಗೆ ಕುಟುಂಬದ ಗಾಲಿಯನ್ನು ತಿರುಗಿಸುವ ಕೀಲಿ ಕೈನಂತಹ ಪ್ರಮುಖ ಸ್ಥಾನಕ್ಕೆ ತಂದೊಡ್ಡಿದೆ. ಇದರ ಪರಿಣಾಮವಾಗಿ ಶೈಕ್ಷಣಿಕ ಮಟ್ಟದಲ್ಲೂ ಆಯಿತು. ಇಂದು ರಾಜ್ಯದಲ್ಲೇ ಹೆಚ್ಚಿನ ಸಾಕ್ಷರತಾ ಪ್ರಮಾಣ ಅವಿಭಜಿತ ದ.ಕ ಜಿಲ್ಲೆಯಲ್ಲಿ ಇರುವುದನ್ನು ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಮಾಣ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವನ್ನು ದಾಖಲಿಸುವಲ್ಲಿ ನಿರ್ಣಾಯಕ ಕೊಡುಗೆ ಬೀಡಿ ಉದ್ಯಮ ನೀಡಿರುವು ದರಲ್ಲಿ ಯಾವುದೇ ಸಂದೇಹಕ್ಕೂ ಆಸ್ಪದವಿಲ್ಲ.

ಏಳೆಂಟು ದಶಕಗಳ ಹಿಂದಿನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ, ಸಾಂಸ್ಕೃತಿಕ ಸನ್ನಿವೇಶದಲ್ಲಿ ಇದು ನಿರ್ವಹಿಸಿರುವ 'ಧನಾತ್ಮಕ' ಪಾತ್ರವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ಆಶಾವಾದ

ಆಚಾರ, ವಿಚಾರ, ಉಡುಗೆ, ತೊಡುಗೆ, ಆರೋಗ್ಯ, ವಸತಿ ಮತ್ತು ಜೀವಿತಾವಧಿಯ ಮಧ್ಯೆ ಈ ಅವಿಭಜಿತ ಜಿಲ್ಲೆಯಲ್ಲಿ ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ಪ್ರೋತ್ಸಾಹದಾಯಕ ವಿಚಾರಗಳು ದೊರೆಯುವುದರ ಹಿಂದೆ ಈ ಬೀಡಿ ಉದ್ಯಮದ ಕೊಡುಗೆಯನ್ನು ನಾವು ಗಮನಿಸಬೇಕು. ಹೌದು, ನಾವು ಬಯಸುವ ಸಮಾಜದ ಮೇಲ್ಮುಖದ ಪ್ರಗತಿಪರ ಬೆಳವಣಿಗೆಯ ದರ ನಾವೆಲ್ಲರೂ ಬಯಸುವ ಪ್ರಮಾಣದಲ್ಲಿ ಇಲ್ಲವಾದರೂ ಒಂದಷ್ಟು ಆಶಾವಾದಕ್ಕೆ ಇಲ್ಲಿ ಅವಕಾಶವಿದೆ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಬೇಸರದ ಸಂಗತಿ ಎಂದರೆ ಪ್ರಭುತ್ವ ಮತ್ತು ಅದರ ಜನಪ್ರತಿನಿಧಿಗಳು ಈ ಸತ್ಯವನ್ನು ಒಪ್ಪಲು ತಯಾರಿಲ್ಲದಿರುವುದು.

ಕನಿಷ್ಟ ಕೂಲಿ...........

ಪುಟ 7 ರಿಂದ

ನಿರ್ಧರಿಸಲಾಯಿತು. ಆದರೆ ದಕ್ಷಿಣ ವಲಯ ಹೋರಾಟ ನಡೆಯಲಿಲ್ಲ. ತಮಿಳುನಾಡಿನ ಬೀಡಿ ಕಾರ್ಮಿಕರು ಅವರದ್ದೇ ಒಪ್ಪಂದ ಮಾಡಿಕೊಂಡರು. ಕರ್ನಾಟಕದಲ್ಲಾದರೂ ಕನಿಷ್ಠ ಕೂಲಿ ಜಾರಿಗೆ ಹೋರಾಡಲು ನಿರ್ಧರಿಸಲಾಯಿತು. ಈ ಹೋರಾಟಗಳ ಫಲವಾಗಿ ರಾಜ್ಯ ಸರ್ಕಾರ 1513 ಪಾಯಿಂಟಿನಲ್ಲಿ 36.85 ರೂ. ಕನಿಷ್ಠ ಕೂಲಿ ಹಾಗೂ ಪಾಯಿಂಟ್‌ಗೆ 3 ಪೈಸೆ ತುಟ್ಟಿಭತ್ಯೆ ನಿಗದಿಪಡಿಸಿ ಪ್ರಕಟಣೆಯನ್ನು ಹೊರಡಿಸಿತು. ಇದರ ವಿರುದ್ಧ ಬೀಡಿ ಮಾಲೀಕರು ಕರ್ನಾಟಕ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದರು. ಹೈಕೋರ್ಟ್ ತಡೆಯಾಜ್ಞೆ ನೀಡಿತು. 1613 ಪಾಯಿಂಟಿಗೆ ಮೇಲ್ಪಟ್ಟು 2.5 ಪೈಸೆಯಂತೆ ವಿಡಿಎ ನೀಡಬೇಕೆಂದು ಅದು ಮಾಲೀಕರಿಗೆ ಹೇಳಿತು. ನಂತರ ತೀರ್ಪು ಕಾರ್ಮಿಕರ ಪರವಾಗಿ ಬಂದಿದೆ. ಆದರೆ ಕನಿಷ್ಠ ಕೂಲಿ ಇನ್ನೂ ಜಾರಿಯಾಗಿಲ್ಲ. ಕೂಲಿಯ ಪ್ರಶ್ನೆಯನ್ನು ನಾವು ಸತತವಾಗಿ ಎತ್ತಿಕೊಂಡು ಬಂದಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಕ್ತಿಶಾಲೀ ನಡೆದಿದೆ. ಆದರಿಂದ ರಾಜ್ಯ ಇತರೆಡೆಗಳಲ್ಲಿನ ಬೀಡಿ ಕಾರ್ಮಿಕರಿಗೂ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಿದೆ, ನಿಜ ವೇತನ ಕಡಿಮೆಯಾಗದಂತೆ ನೋಡಿಕೊಳ್ಳುವಲ್ಲಿ ಈ ಚಳುವಳಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದೆ. ಆದರೆ ನಿಜ ವೇತನದಲ್ಲಿ ಸುಧಾರಣೆಯಾಗುವಂತೆ ಮಾಡಲು ಇನ್ನೂ ಸಾಧ್ಯವಾಗಿಲ್ಲ.

ಈಗ ಉದಾರೀಕರಣದ ವ್ಯವಸ್ಥೆಯಲ್ಲಿ


ಉದಾರೀಕರಣದ ವ್ಯವಸ್ಥೆಯಲ್ಲಿ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ನಡೆಯುತ್ತಿರುವಾಗ, ಕಾರ್ಮಿಕ ಕಾನೂನುಗಳನ್ನು ಸಡಿಲಿಸುವ ಪ್ರಯತ್ನ ನಡೆದಿರುವಾಗ ಕನಿಷ್ಠ ಕೂಲಿಯನ್ನು ಕೊಡುತ್ತಾ ಇಲ್ಲ, ಕೆಲಸಗಳನ್ನು ಸರಿಯಾಗಿ ಕೊಡುತ್ತಾ ಇಲ್ಲ. ಬೀಡಿ ಮಾಲೀಕರು ಮಾರಾಟ ಕಡಿಮೆಯಾಗಿದೆ, ಉದ್ದಿಮೆ ಬಿಕ್ಕಟ್ಟಿನಲ್ಲಿದೆ ಎಂದೆಲ್ಲಾ ಹೇಳುತ್ತಿದ್ದಾರೆ. ಇದು ನಿಜವಲ್ಲ. ನಿಜವಾಗಿ ಕನಿಷ್ಠ ಕೂಲಿ ಕೊಡದೆ ಮಾಲೀಕರ ಲಾಭದ ಭಾಗ ಬಹಳಷ್ಟು ಹೆಚ್ಚಿದೆ. ಕನಿಷ್ಠ ಕೂಲಿ ವ್ಯವಸ್ಥೆ ಸರಿಯಾಗದಿದ್ದರೆ ಉದ್ದಿಮೆ ಕಮ್ಮಿ ಕೂಲಿಯತ್ತ ಹೋಗುತ್ತದೆ. ಆದ್ದರಿಂದ ಈ ದಿಕ್ಕಿನಲ್ಲಿ ಸವಾಲು ಎದುರಿಸಬೇಕಾಗಿದೆ.

ಅಂಜುದೀವ್ ಮೇಲೆ ಕೋಮುವಾದಿಗಳ ವಕ್ರದೃಷ್ಟಿ

ಸೌಹಾರ್ದತೆಗೆ ಮುಂದುವರಿದ ದಾಳಿ

ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಇಲ್ಲದ ವಿವಾದದ ಕಿಚ್ಚನ್ನಿಡಲು ಹುಡುಕಿ ಹೊರಟಿರುವ ಖಾವೀ ಪಡೆ ಕಾರವಾರದ 'ಅಂಜದೀವ್' ಗೆ ವಕ್ರದೃಷ್ಟಿ ಬೀರಿದೆ. ಸೌಹಾರ್ದತೆಯನ್ನು ಧ್ವಂಸಗೊಳಿಸಲು ಧಾಳಿ ನಡೆಯುತ್ತಿದೆ. ಸಮುದ್ರದ ನಡುವೆ ಸುಂದರ ದ್ವೀಪದ ಸುತ್ತ ಹೆಡೆ ಎತ್ತಿರುವ ವಿವಾದದಲ್ಲಿ ಏನರ್ಥವಿದೆ ?

ಸಾವಿರಾರು ವರ್ಷಗಳಿಂದ ಸಮುದ್ರದ ಭಯಾನಕ ತೆರೆಗಳಿಗೆ, ರಾಕ್ಷಸಾಕಾರದ ಮೀನುಗಳಿಗೆ ಅಂಜದಿರುವ ಕಾರವಾರದ ಸಮುದ್ರದೊಳಗಿನ ಅಂಜುದೀವ್ ದ್ವೀಪ ಸಂಘ ಪರಿವಾರದ ವಕ್ರದೃಷ್ಟಿಗೆ ಅಂಜುವ ಸ್ಥಿತಿ ಬಂದಿದೆ. ನಾಲ್ಕಾರು ದಶಕಗಳಿಂದ ದೇಶದಲ್ಲಿ ಆಗಾಗ ಸಂಭವಿಸುವ ಕೋಮುಗಲಭೆ-ಜಾತಿ ಸಂಘರ್ಷಗಳ ಸಂದರ್ಭದಲ್ಲಿಯೂ ಉ.ಕ. ಜಿಲ್ಲೆಯ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಸೌಹಾರ್ದತೆ ಸಮುದ್ರದೊಳಗಿನ ಅಂಜುದೀವ ದ್ವೀಪದಂತೆ ಅಚಲವಾಗಿತ್ತು. ಆದರೆ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡು - ರಾಜ್ಯದಲ್ಲಿ ಅಧಿಕಾರ ಕಾಣಲಾರದೆ ಹತಾಶವಾಗಿರುವ ಬಿಜೆಪಿ ಮತ್ತು ಸಂಘ ಪರಿವಾರಗಳ ದಾಳಿಗೆ ಅದು ಈಗ ಬಲಿಯಾಗುವ ಸಂದರ್ಭ ಬಂದಿದೆ. ಸೌಹಾರ್ದತೆಯ ಸಂಕೇತವಾಗಿದ್ದ ಬಾಬಾಬುಡನ್ ಗಿರಿ ಈಗ ಕೋಮುವಾದಿಗಳ ಆಟದಿಂದ ರಣರಂಗವಾದಂತೆ ಉ.ಕ. ಜಿಲ್ಲೆಯ ಅಂಜುದೀವ, ಚಂದಾವರ, ಯಲ್ಲಾಪುರ ಇತ್ಯಾದಿಗಳು ಭಯದ ಬೆಂಕಿಯಲ್ಲಿ ಬೇಯುವಂತಾಗಿದೆ. ಉ.ಕ. ಜಿಲ್ಲೆಯಲ್ಲಿ ಇತ್ತೀಚಿನ ಚುನಾವಣೆಯಲ್ಲಿ ಬಿಜೆಪಿಯ ಎಂ.ಎಲ್.ಎ. ಮತ್ತು ಎಂ.ಪಿ. ಸ್ಥಾನ ಗೆದ್ದಿರುವುದು ಇವರಿಗೆ ಇನ್ನಷ್ಟು ಕುಮ್ಮಕ್ಕು ನೀಡಿದೆ.



ಕಾರವಾರದ ಸಮುದ್ರ ದಂಡೆಯಿಂದ ಕಣ್ಣಳತೆಗೆ ಕಾಣುವ ಸುಂದರ ದ್ವೀಪಗಳಲ್ಲಿ ಅಂಜುದೀವ ದ್ವೀಪ ಕೂಡಾ ಒಂದು. ಅಂಜುದೀವ್, ಮಧ್ಯಗಡ, ಕೂರ್ಮಗಡ - ಈ ಮೂರು ದ್ವೀಪಗಳೂ ಕಾರವಾರದ ಸಮುದ್ರದ ಸೌಂದರ್ಯವನ್ನು ಹೆಚ್ಚಿಸಿರುವುದರಲ್ಲಿ ಅನುಮಾನವಿಲ್ಲ. ಪ್ರಮುಖ ಆಕರ್ಷಣೆಯ ಕೇಂದ್ರವಾಗಿದ್ದ, ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದ್ದ ಈ ದ್ವೀಪಗಳಲ್ಲಿ ಅಂಜುದೀವ್ ಇತ್ತೀಚೆಗೆ ವಿವಾದದ ಕೇಂದ್ರವಾಗಿದೆ. ಭಜರಂಗದಳದ ಮಂಗನಾಟಕ್ಕೆ ವೇದಿಕೆಯಾಗಿದೆ.


ವಿವಾದ ಪರಿಹರಿಸುವ ಮನಸ್ಸಿಲ್ಲ

ಅಂಜುದೀವ್ ದ್ವೀಪದಲ್ಲಿ ಪುರಾತನಕಾಲದಿಂದ ಆರ್ಯ ದುರ್ಗ ದೇವಸ್ಥಾನ ಮತ್ತು ನಮ್ಮ ದೇವಿಯ ಮೂಲಸ್ಥಾನದ ಮಂದಿರದಲ್ಲಿ ನಮಗೆ ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು ಎನ್ನುವುದು ಭಜರಂಗ ದಳದ ಬೇಡಿಕೆ. ನಮಗೆ ಅಲ್ಲಿಗೆ ಹೋಗಲು ನಿರ್ಬಂಧ ಮಾಡಿ ಕ್ರಿಶ್ಚಿಯನ್ನರಿಗೆ ಪ್ರತಿವರ್ಷ ಅಲ್ಲಿರುವ ಲೇಡಿ ಬ್ರೋತ್ರಾಸ್ ಚರ್ಚ್‌ಗೆ ಹೋಗಿ ಪ್ರಾರ್ಥನೆ ನಡೆಸಲು ಅವಕಾಶ ಕೊಡುತ್ತಿದ್ದಾರೆ. ಇದು ಹಿಂದೂ ವಿರೋಧಿ ನಿಲುವು ಎನ್ನುವುದು ಇವರ ಆಪಾದನೆ. ಈ ಪ್ರದೇಶ ಸೀಬರ್ಡ್ (ನೌಕಾನೆಲೆ) ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ನೌಕಾದಳ ಇಲ್ಲಿ ಎಲ್ಲರ ಪ್ರವೇಶವನ್ನು ನಿರ್ಬಂಧಿಸಿದೆ. ಇದು ತೀರಾ ಸೂಕ್ಷ್ಮ (ರಕ್ಷಣೆಯ ದೃಷ್ಟಿಯಿಂದ) ಪ್ರದೇಶವಾಗಿರುವುದರಿಂದ ಇದು ನಿರ್ಬಂಧಿತ ಪ್ರದೇಶ. ಕ್ರಿಶ್ಚಿಯನ್ನರಿಗೂ ಇಲ್ಲಿ ಪ್ರವೇಶ ನಿಷೇಧಿಸುತ್ತೇವೆ ಎನ್ನುವುದು ಜಿಲ್ಲಾಡಳಿತದ ವಾದ. ಇದು ಇಂದು ವಿವಾದವಾಗಿದೆ. ವಿವಾದವನ್ನು ಬಗೆಹರಿಸಲು ಸಂಘ ಪರಿವಾರಕ್ಕಾಗಲೀ, ಸರ್ಕಾರಕ್ಕಾಗಲೀ ಮನಸ್ಸಿದ್ದಂತಿಲ್ಲ. ಹತ್ತಾರು ಜ್ವಲಂತ ಸಮಸ್ಯೆಗಳ ಸುಳಿಯಲ್ಲಿ ಬೇಯುತ್ತಿರುವ ಉ.ಕ ಜಿಲ್ಲೆಯಲ್ಲಿ ಒಂದು ಹೊತ್ತಿನ ಊಟಕ್ಕಾಗಿ ಜನಸಾಮಾನ್ಯರು ಪರಿತಪಿಸುವಂತಾಗಿದೆ. ಆದರೆ ಇದ್ಯಾವುದರ ಬಗ್ಗೆ ಲಕ್ಷ್ಯ ಕೊಡದೆ ಎಲ್ಲರ ದೃಷ್ಟಿಯನ್ನು ಸುಳ್ಳು-ಪ್ರತಿಷ್ಠೆ-ಕೋಮು ಉದ್ವೇಗಕ್ಕಾಗಿ ಬಳಸುತ್ತಿರುವುದು ಮಾತ್ರ ಖಂಡನೀಯ.

ದ್ವೇಷದ ಹೋರಾಟ

'ಅಂಜುದೀವ್' ದ್ವೀಪದಲ್ಲಿ ಶತಮಾನದಷ್ಟು ಹಿಂದಿನ ಚರ್ಚ್ ಇದೆ. ಲೇಡಿ ಬ್ರೋತ್ರಾಸ್ ಎಂದು ಅವರ ಹೆಸರು. ಭಾರತಕ್ಕೆ ಪೋರ್ಚುಗೀಸರು ಬಂದಾಗ ಇಲ್ಲಿ ಮೊದಲು ಚರ್ಚ್ ನಿರ್ಮಿಸಿದರು. ಈ ದೇಶದಲ್ಲಿ ಕಟ್ಟಲ್ಪಟ್ಟ ಮೊದಲ ಚರ್ಚ್ ಇದು ಎನ್ನುವ ಐತಿಹಾಸಿಕ ಸಂಗತಿಯನ್ನು ಇಲ್ಲಿ ಗ್ರಹಿಸಬೇಕು. ಇಲ್ಲಿ ಪ್ರತಿವರ್ಷ ಫೆಬ್ರವರಿ 7 ರಂದು ಕ್ರಿಶ್ಚಿಯನ್ ರ ಜಾತ್ರೆಯಾಗುತ್ತದೆ. ಅವರು ಪ್ರಾರ್ಥನೆ ಸಲ್ಲಿಸಿಬರುತ್ತಾರೆ. ಅದರ ಪಕ್ಕದಲ್ಲಿ ಇರುವ ಕೂರ್ಮಗಡದಲ್ಲಿ ಪ್ರತಿವರ್ಷ ಜಾತ್ರೆ ನಡೆದಾಗ ಹಿಂದೂಗಳಿಗೆ ಪ್ರವೇಶ ನೀಡಲಾಗುತ್ತದೆ. ಆದರೆ ಇತ್ತೀಚೆಗೆ ಈ ಪ್ರದೇಶವನ್ನು 'ಸೀಬರ್ಡ್' (ನೌಕಾನೆಲೆ) ವಶಪಡಿಸಿಕೊಂಡಮೇಲೆ ಸಾವಕಾಶವಾಗಿ ಇಲ್ಲಿ ನಿರ್ಬಂಧ ಹೇರುತ್ತಿದ್ದಾರೆ. ಇದಲ್ಲದೆ ಸೀಬರ್ಡ್ ವಶಪಡಿಸಿಕೊಂಡಿರುವ ಭೂಮಿಯಲ್ಲಿ ಈ ಹಿಂದೆ ಇರುವ ದೇವಸ್ಥಾನ, ಚರ್ಚ್, ಮಸೀದಿಗಳಿಗೂ ಜನರ ಪ್ರವೇಶ ನಿರಾಕರಿಸಲಾಗಿದೆ. ಅದಕ್ಕೆ ಸೂಕ್ತ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಅಂಜುದೀವ್ ಪ್ರದೇಶದಲ್ಲಿ ಆರ್ಯ ದುರ್ಗ ದೇವಸ್ಥಾನ ಇತ್ತು. ಇದು ಹಿಂದುಗಳ ಭಾವನಾ ಸ್ಥಳ. ಅಲ್ಲಿ ಕ್ರಿಶ್ಚಿಯನ್ನರಿಗೆ ಅವಕಾಶ ಮಾಡಿಕೊಟ್ಟಂತೆ ನಮಗೂ ಅವಕಾಶ ಕೊಡಬೇಕು. ಇಲ್ಲದಿದ್ದರೆ ಇಬ್ಬರಿಗೂ ಅವಕಾಶ ಬೇಡ, ನಿರ್ಬಂಧಿಸಿ ಎಂದು ಭಜರಂಗದಳ ದ್ವೇಷದ ಹೋರಾಟ ಪ್ರಾರಂಭಿಸಿತು. ಕಾರವಾರ ಚಲೋ ನಡೆಸಿ, ಬಲಾತ್ಕಾರವಾಗಿ ಅಂಜುದೀವ್ ಪ್ರವೇಶಿಸಿ ಪೂಜೆ ನಡೆಸುತ್ತೇವೆ ಎಂದು ಇಡೀ ಜಿಲ್ಲೆಯಲ್ಲಿ ಸಭೆ ತಯಾರಿ ಮಾಡಿ ಜಿಲ್ಲೆಯಲ್ಲಿ ಉದ್ವಿಗ್ನತೆ ಉಂಟು ಮಾಡಲು ಪ್ರಯತ್ನಿಸಿ, ಪತ್ರಿಕೆಗಳಿಂದ ಒಂದಿಷ್ಟು ಪುಕ್ಕಟೆ ಪ್ರಚಾರ ಪಡೆದರು; ಕೆಲವರು ಬಂಧನಕ್ಕೊಳಗಾದರು. ಆದರೆ ಪೂಜೆ ನಡೆಯಲಿಲ್ಲ, ಜಿಲ್ಲಾಡಳಿದ ಇದನ್ನು ಸೂಕ್ತವಾಗಿ ತಡೆಯಿತು.

ಆದರೆ ಈ ಅಂಜುದೀವ್ ಈಗಲೂ ಮತ್ತು



ಮೊದಲೂ ಕರ್ನಾಟಕದಲ್ಲಿ ಆಡಳಿತದಲ್ಲಿಲ್ಲ. ಇದು ಗೋವಾದ ಒಂದು ಭಾಗ. ಈಗ ಅದು ನೌಕಾನೆಲೆಯ ಭಾಗವಾಗಿದೆ. ಈ ಪ್ರದೇಶವನ್ನು ಸೀಬರ್ಡ್‌ಗೆ ನೀಡುವಾಗಲೇ ಗೋವಾ ಸರ್ಕಾರ ಮತ್ತು ಕ್ರಿಶ್ಚಿಯನ್ ಧರ್ಮೀಯರ ನಡುವೆ ಪ್ರತಿವರ್ಷ ಪ್ರಾರ್ಥನೆ ಅವಕಾಶ ಕೊಡಬೇಕೆಂದು ಲಿಖಿತ ಒಪ್ಪಂದ ಆಗಿದೆ ಎಂದು ಹೇಳಲಾಗಿದೆ.

ಪೂಜೆಗಾಗಿಯೇ ಬಿಡುವಂತಿದ್ದರೆ ಎಲ್ಲಾ ಧರ್ಮೀಯರಿಗೂ ನಿರ್ಬಂಧ ಹೇರುವುದು ಒಳ್ಳೆಯದು ಎನಿಸುತ್ತದೆ. ಕದನವನ್ನಾದರೂ ತಡೆಯಬಹುದು. ಆದರೆ ಸುಂದರ ದ್ವೀಪಕ್ಕೆ ಪ್ರವಾಸಿಗರಿಗೆ ಅವಕಾಶ ಬೇಕಾಗಿತ್ತು. ಐತಿಹಾಸಿಕ ಚರ್ಚ್‌ನ್ನು ಕೆಡುವುವುದು ಒಳ್ಳೆಯದಲ್ಲ.

● ನಿಸರ್ಗ

ರಾಜಕೀಯ ದುರುದ್ದೇಶ........?

ಅಂಜುದೀವ್ ದ್ವೀಪದಲ್ಲಿರುವ ಆರ್ಯದುರ್ಗಾ ದೇವಸ್ಥಾನವನ್ನು ಬಹುಹಿಂದೆಯೇ ಅಂಕೋಲೆಗೆ ಸ್ಥಳಾಂತರಿಸಿರುವ ಬಗ್ಗೆ ಮತ್ತು ಅಲ್ಲಿಯೇ ದೇವಸ್ಥಾನ ಕಟ್ಟಿಕೊಟ್ಟಿರುವ ಬಗ್ಗೆ ಹೇಳಲಾಗಿದೆ. ಮತ್ತು ಕೂರ್ಮಗಡದಲ್ಲಿ ಪ್ರತಿವರ್ಷ ಜಾತ್ರೆಗೆ ಹಿಂದುಗಳನ್ನು ಬಿಡುತ್ತಿದ್ದಾರೆ. ಅಂದರೆ ಒಂದೊಂದು ದ್ವೀಪಕ್ಕೆ ಒಂದೊಂದು ಧರ್ಮೀಯರನ್ನು ಪ್ರಾರ್ಥನೆಗೆ ಬಿಡುತ್ತಿದ್ದರೂ ಈ ವಿವಾದ ಏಕೆ? ಆರ್ಯದುರ್ಗಾ ಮೀನುಗಾರರ ದೇವರೆಂದು ಪ್ರಚಾರ ಮಾಡಿ, ಮೀನುಗಾರರನ್ನು ಮನೆಯೊಳಗೆ ಬಿಟ್ಟುಕೊಳ್ಳದ ನಾಯಕರನೇಕರು, ಮೀನುಗಾರರ ಸಮಸ್ಯೆಯ ಬಗ್ಗೆ ಒಂದೇ ಒಂದು ದಿನ ಗಂಭೀರವಾಗಿ ಚಿಂತಿಸದ ಮುತಾಲಿಕ್‌ನಂತಹವರಿಗೆ ದಿಢೀರನೆ ಜ್ಞಾನೋದಯವಾಗಿ ಮೀನುಗಾರರನ್ನು ಭಾವನಾತ್ಮಕವಾಗಿ ಎಬ್ಬಿಸಿರುವ ಉದ್ದೇಶವೇನು? ಜಿಲ್ಲಾಡಳಿತ - ಸೀಬರ್ಡ್ ಮತ್ತು ದೇವಾಲಯ ಪ್ರಿಯರ ನಡುವಿನ ಚರ್ಚೆಯ ಮೂಲಕ ಒಪ್ಪಂದಕ್ಕೆ ಬರಬೇಕಾದ ಈ ಸರಳ ವಿಷಯವನ್ನು ರಾಜ್ಯಮಟ್ಟದ ವಿಷಯವಾಗಿ ಬಿಂಬಿಸಿರುವುದೇ? ಸೈನ್ಯ ಎದುರಿಗೆ ಬಂದರೂ ಆರ್ಯದುರ್ಗಾ ದೇವಿಗೆ ಪೂಜಿಸಿಯೇ ಸಿದ್ಧ ಎಂದು ಗುಡುಗಿದ ಪ್ರಮೋದ ಮುತಾಲಿಕ್ ಕಾರವಾರ ಚಲೋ ದಿನ ಕಾರವಾರಕ್ಕೆ ಬಹಿರಂಗವಾಗಿಯೇ ಪ್ರಯಾಣ ಬೆಳೆಸಿ ಪೊಲೀಸರ ಕೈಗೆ ಸಿಕ್ಕಿ, ಯಾವ ಪ್ರತಿಭಟನೆ ಇಲ್ಲದೆ ಬಂಧನಕ್ಕೊಳಗಾದದ್ದೇಕೆ? ಇವೆಲ್ಲವೂ ಕೋಮುವಾದಿಗಳ ಯೋಜನಾಬದ್ಧ ಮುಂದಾಲೋಚನಾ ತೀರ್ಮಾನವಲ್ಲದೆ ಇನ್ನೇನೂ ಅಲ್ಲ. ಉತ್ತರ ಕನ್ನಡ ಜಿಲ್ಲೆಯ ಮೀನುಗಾರ ಸಮುದಾಯದ ಯುವಜನರನ್ನು ತಮ್ಮತ್ತ ಸೆಳೆದುಕೊಳ್ಳುವುದು ಒಂದೆಡೆಯಾದರೆ ನಿರುದ್ಯೋಗದಂತಹ ಪ್ರಶ್ನೆಯ ಹಿನ್ನೆಲೆಯಲ್ಲಿ ಜನಸಾಮಾನ್ಯರನ್ನು ಕಾಡುವ ಸಮಸ್ಯೆಗಾಗಿ ನಡೆಯುತ್ತಿರುವ ಜನಸಂಘಟನೆಯಿಂದ ಜನರನ್ನು ಬೇರೆಡೆಗೆ ಸೆಳೆದುಕೊಳ್ಳುವುದು ಇನ್ನೊಂದು ಉದ್ದೇಶ ಆಗಿದೆ.

ಈಗಲೇ ಏಕೆ?

ಈ ಪ್ರದೇಶವನ್ನು ಸೀಬರ್ಡ್‌ಗೆ ಕೊಟ್ಟ ನಂತರ ಇಲ್ಲಿಯ ಪ್ರವೇಶಕ್ಕೆ ನಿರ್ಬಂಧ ಹೇರುವ ಬಗ್ಗೆ ಅಧಿಕಾರಿಗಳು ಹೇಳುತ್ತಲೇ ಇದ್ದರು. ಆದರೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವ ಸರ್ಕಾರ ಇದ್ದಾಗ, ಗೋವಾದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಯಾಕೆ ಇವರು ಮಾತುಕತೆ ಮಾಡಿಲ್ಲ? ಯಾಕೆ ಆಗ ಪ್ರವೇಶಕ್ಕಾಗಿ ಗಲಾಟೆ ಮಾಡಿಲ್ಲ? 42 ದೇವಸ್ಥಾನಗಳನ್ನು ಸೀಬರ್ಡ್ ಅಧಿಕಾರಿಗಳು ನೆಲಸಮ ಮಾಡಿದರು ಎಂದು ಬೊಬ್ಬೆ ಹೊಡೆಯುವವರು ಯಾಕೆ ಹಿಂದಿನ ಸರ್ಕಾರ ಇದ್ದಾಗ ಬೊಬ್ಬೆ ಹೊಡೆದಿಲ್ಲ. ವಾಜಪೇಯಿ, ಅಡ್ವಾನಿಯವರಿಗೆ ಹೇಳಿ ದೇವಸ್ಥಾನ ಉಳಿಸಿಕೊಳ್ಳಬಹುದಾಗಿತ್ತಲ್ಲ? ನಿರ್ಬಂಧ ಹಾಕದಂತೆ ತಡೆಯಬಹುದಾಗಿತ್ತಲ್ಲ? ಅವರದೇ ಸರ್ಕಾರದ ಅಧಿಕಾರ 6 ವರ್ಷ ಇದ್ದಾಗ್ಯೂ ಮೀನುಗಾರರ ದೇವರ ನೆನಪಾಗದವರು ಕೇಂದ್ರ-ರಾಜ್ಯದಲ್ಲಿ ಬಿಜೆಪಿಯೇತರ ಸರ್ಕಾರ ಬಂದಾಗ ಗಲಾಟೆ ಪ್ರಾರಂಭಿಸಿದ್ದೇಕೆ ಎಂದು ಕೇಳಿದರೆ ಉತ್ತರ ಇಲ್ಲ.

ಮೂಕಾಂಬಿಕಾ ಫೈನಾನ್ಸ್ ಆಡಳಿತ ಪಾಲುದಾರರ ಮೇಲೆ ಕಾನೂನು ಕ್ರಮಕ್ಕೆ ಆಗ್ರಹ

ಪುತ್ತೂರು: ಮೂಕಾಂಬಿಕಾ ಫೈನಾನ್ಸ್ ಮತ್ತು ಅಂಬಿಕಾ ನಿಧಿ ಸಂಸ್ಥೆಯು ಕರ್ನಾಟಕ ಮತ್ತು ಕೇರಳದಲ್ಲಿ ಒಟ್ಟು 14 ಶಾಖೆಗಳನ್ನು ಹೊಂದಿದೆ. ಸುಮಾರು 30 ಕೋಟಿ ಠೇವಣಿ ಸಂಗ್ರಹಿಸಿ ಈಗ ಪುತ್ತೂರಿನ ಪ್ರಧಾನ ಕಛೇರಿ ಮಾತ್ರ ಬಾಗಿಲು ತೆರೆದು ಯಾವುದೇ ವ್ಯವಹಾರ ನಡೆಸದೆ ಠೇವಣಿದಾರರು ಹಣ ಕೇಳಲು ಹೋದಾಗ ಆಡಳಿತಾಧಿಕಾರಿ ಮತ್ತು ಪಾಲುದಾರರು ಇದರ ವಿರುದ್ಧ ವಂಚನೆ ನಡೆಸುತ್ತಿದ್ದಾರೆ. ಮೂಕಾಂಬಿಕಾ ಫೈನಾನ್ಸ್, ಅಂಬಿಕಾ ನಿಧಿ, ಠೇವಣಿ ವಂಚಿತರ ಹೋರಾಟ ಸಮಿತಿಯು ನೇತೃತ್ವದಲ್ಲಿ ಸೆಪ್ಟೆಂಬರ್ 13ರಂದು ಪುತ್ತೂರಿನ ಪೊಲೀಸ್ ಠಾಣೆ ಬಳಿಯಿಂದ ಠೇವಣಿ ವಂಚಿತರ ಮೆರವಣಿಗೆ ಹೊರಟು ಮೂಕಾಂಬಿಕಾ ಫೈನಾನ್ಸ್ ಎದುರಿನಲ್ಲಿ ಪ್ರತಿಭಟನೆ ನಡೆಸಿ, ಬಳಿಕ ಪುತ್ತೂರಿನ ಸಹಾಯಕ ಕಮೀಷನರಿಗೆ ಮತ್ತು ಪುತ್ತೂರು ತಹಶೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಯವರಿಗೆ ಠೇವಣಿ ವಂಚಿಸಿದ ಬಗ್ಗೆ ಮನವಿಯೊಂದನ್ನು ಅರ್ಪಿಸಲಾಯಿತು.

ಪ್ರತಿಭಟನೆಗಾರರನ್ನು ಉದ್ದೇಶಿಸಿ ಹೋರಾಟ ಸಮಿತಿಯ ಸಂಚಾಲಕ ವಿ.ರಾಮಣ್ಣ ವಿಟ್ಲ ಮತ್ತು ಜಿಲ್ಲಾ ಸಿಐಟಿಯು ಮುಖಂಡ ಸುಕುಮಾರ್ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ವೈ.ಕೆ.ನಾರಾಯಣ್, ಎಸ್.ಚಿದಂಬರ್‌ರಾವ್, ಹರೀಶ್‌ನಾಯ್ಕ, ಸುಂದರ ಆಚಾರಿ, ವಿ.ಕೆ. ಸುಂದರ, ಸೋಮಪ್ಪ ಪೂಜಾರಿ ಮೊದಲಾದವರು ವಹಿಸಿದರು.

ಹೋರಾಟ ನಡೆದ ಬಳಿಕ ಅನಿವಾರ್ಯವಾಗಿ ಸೆಪ್ಟೆಂಬರ್ 30ರಂದು ಪುತ್ತೂರಿನ (ಟೌನ್) ನಗರ ಪೊಲೀಸ್ ಠಾಣಾಧಿಕಾರಿಯವರು ಫೈನಾನ್ಸ್‌ನ ಚೇರ್‌ಮ್ಯಾನ್ ಗೋಪಾಲಕೃಷ್ಣ ಭಟ್.ಕೆ. ಸಾಮೆತ್ತಡ್ಕ ಮತ್ತು ಕಾರ್ಯನಿರ್ವಾಹಕ ಪಾಲುದಾರ ಕೆ. ಸತ್ಯಶಂಕರ್ ಇವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಿದ್ದಾರೆ. ಆದರೆ ಕಠಿಣ ಕ್ರಮ ವಹಿಸಬೇಕಿದೆ.

- ರಾಮಣ್ಣ ವಿಟ್ಲ

ಮಂಗಳೂರಿನಲ್ಲಿ ಯುವಜನರ ಅಹೋರಾತ್ರಿ ಧರಣಿ ಸತ್ಯಾಗ್ರಹ

ಶಿಕ್ಷಣ - ಉದ್ಯೋಗದ ರಕ್ಷಣೆಗಾಗಿ

ಮಂಗಳೂರಿನಲ್ಲಿ ಯುವಜನರ ಧರಣಿ ಕೇವಲ ಅಷ್ಟಕ್ಕೆ ಸೀಮಿತವಾಗಲಿಲ್ಲ. ಅದು ಹೊಸ ಆಯಾಮವನ್ನು ಪಡೆಯಿತು. ಇಲ್ಲಿ ಬಿಜೆಪಿಯವರೇಕೆ ಮೈ ಪರಚಿಕೊಳ್ಳಬೇಕಿತ್ತು?

ಶಿಕ್ಷಣ ಮತ್ತು ಉದ್ಯೋಗದ ರಕ್ಷಣೆಗಾಗಿ, ನಿರುದ್ಯೋಗ ಭತ್ಯೆ, ಅರ್ಜಿ ಶುಲ್ಕ, ಡಿ.ಡಿ. ಪೋಸ್ಟಲ್ ಆರ್ಡರ್ ರದ್ದತಿಗಾಗಿ, ಕೃಪಾಂಕ ನೌಕರರ, ಸಾಕ್ಷರತಾ ಪ್ರೇರಕರ ಬೇಡಿಕೆಗಳ ಈಡೇರಿಕೆಗಾಗಿ ರಾಷ್ಟ್ರೀಯ ಯುವಜನ ಹಾಗೂ ಕ್ರೀಡಾ ನೀತಿಗಾಗಿ ಸಮಗ್ರ ಭೂ ಸುಧಾರಣೆ ಹಾಗೂ ಖಾಲಿ ಹುದ್ದೆಗಳ ಭರ್ತಿಗಾಗಿ ಆಗ್ರಹಪಡಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಎದುರು ಜಿಲ್ಲೆಯ ನೂರಾರು ಯುವಕ-ಯುವತಿಯರು ಅಕ್ಟೋಬರ್-11 ರ ಬೆಳಿಗ್ಗೆಯಿಂದ 24 ಗಂಟೆಗಳ ಧರಣಿ ಸತ್ಯಾಗ್ರಹ ನಡೆಸಿದರು.

ನವೆಂಬರ್-3 ರಂದು ಡಿವೈಎಫ್ಐ ಕೇಂದ್ರಸಮಿತಿ ಆಯೋಜಿಸಿರುವ ದೆಹಲಿ ಚಲೋ ಹಾಗೂ ರಾಜ್ಯಸಮಿತಿ ಸಂಘಟಿಸಿದ್ದ ಅಕ್ಟೋಬರ್ 15 ರ ವಿಧಾನಸೌಧ ಚಲೋ ಕಾರ್ಯಕ್ರಮಗಳ ಪೂರ್ವಭಾವಿಯಾಗಿ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಈ ಧರಣಿಯನ್ನು ಆಯೋಜಿಸಿತ್ತು.

ಅಕ್ಟೋಬರ್-11 ರ ಬೆಳಿಗ್ಗೆ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕಾಂ.ಕೆ.ಮಹಾಂತೇಶ್ 24 ಗಂಟೆಗಳ ಈ ಧರಣಿಯನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ನೂತನ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿವೆ. ಆ ಎರಡು ಸರ್ಕಾರಗಳ ಮುಂದೆ ಈ ದೇಶದ ಯುವಜನತೆಯನ್ನು ರಕ್ಷಿಸುವ ಗಂಭೀರ ಹೊಣೆಗಾರಿಕೆ ಇದೆ ಎನ್ನುವುದನ್ನು ಎಚ್ಚರಿಸುವ ಸಲುವಾಗಿ ಡಿವೈಎಫ್ಐ ದೇಶಾದ್ಯಂತ ಹಾಗೂ ರಾಜ್ಯಾದ್ಯಂತ ಯುವಜನರ ಆಂದೋಲನಗಳನ್ನು ನಡೆಸುತ್ತಿದೆ. ಯಾಕೆಂದರೆ ಈ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ವಾಜಪೇಯಿ ನೇತೃತ್ವದ ಎನ್.ಡಿ.ಎ ಸರ್ಕಾರ ಹಾಗೂ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರಗಳು ಈ ದೇಶದ - ರಾಜ್ಯದ ಯುವಜನತೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ ಪರಿಣಾಮವಾಗಿ ಅಂತಹ ಸರ್ಕಾರಗಳಿಗೆ ಯುವಜನರು ಸರಿಯಾದ ಪಾಠವನ್ನೇ ಕಲಿಸಿದ್ದಾರೆ. ಅದರಿಂದಾಗಿ ಈಗ ಅಧಿಕಾರದಲ್ಲಿರುವ ಕೇಂದ್ರದ ಯು.ಪಿ.ಎ ಸರ್ಕಾರ ಹಾಗೂ ರಾಜ್ಯದ ಧರಂಸಿಂಗ್ ಸರ್ಕಾರಗಳು ಯುವಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಸೇರಿದಂತೆ ಯುವಜನರ ಜ್ವಲಂತ ಬೇಡಿಕೆಗಳಿಗೆ ಕೂಡಲೇ ಸ್ಪಂದಿಸುವಂತಾಗಬೇಕಾಗಿದೆ ಎಂದರು. ಆ ಕಾರಣದಿಂದಾಗಿ ಯುವಜನರ ಪ್ರಮುಖ ಬೇಡಿಕೆಗಳನ್ನು ನೂತನ ಸರ್ಕಾರಗಳ ಮುಂದೆ ಮಂಡಿಸಿ ಅವುಗಳನ್ನು ಈಡೇರಿಸಲು ದೇಶಾದ್ಯಂತ 2 ಕೋಟಿ ಹಾಗೂ ರಾಜ್ಯದಲ್ಲಿ 5 ಲಕ್ಷ ಸಹಿಸಂಗ್ರಹ ಆಂದೋಲನವನ್ನು ನಡೆಸಲಾಗುತ್ತಿದೆ ಎಂದರು.

24 ಗಂಟೆಗಳ ಈ ಧರಣಿ ಸತ್ಯಾಗ್ರಹದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲೂಕಿನ ಯುವಜನರು, ಸಾಕ್ಷರತಾ ಪ್ರೇರಕರು, ಕೃಪಾಂಕ ನೌಕರರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಧರಣಿಯನ್ನು ಬೆಂಬಲಿಸಿ - ಬರಹಗಾರರಾದ ಪ್ರೊ.ಜಯಪ್ರಕಾಶ್ ಮನವಿಕುಳಿ ಕಾಲೇಜು ಅಧ್ಯಾಪಕರ ಸಂಘಟನೆ ಮುಖಂಡ ಪ್ರೊ.ಹಯವದನ ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷ, ಯಶವಂತ ಮುದೋಳಿ, ವಿಮಾ ನೌಕರರ ಸಂಘದ ಮುಖಂಡರಾದ ನಾಗೇಶ್ ಕುಮಾರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ, ವಸಂತ ಆಚಾರಿ, ಗ್ರಾಮ ಪಂಚಾಯತ್ ನೌಕರರ ಸಂಘಟನೆಯ ಯಾದವ ಶೆಟ್ಟಿ, ಡಿವೈಎಫ್ಐ ಮಾಜಿ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಕೊಂಚಾಡಿ ಮಾತನಾಡಿದರು. ಇದಲ್ಲದೆ ಎಸ್ಎಫ್ಐ, ಜೆಎಂಎಸ್, ವಿಮಾ ಪ್ರತಿನಿಧಿಗಳ ಸಂಘ, ರೈಲ್ವೆ ನೌಕರರ ಸಂಘದ ಮುಖಂಡರುಗಳು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಮಾತನಾಡಿದರು.



ಧರಣಿ ಉದ್ಘಾಟನೆ - ಕೆ.ಮಹಾಂತೇಶ್‌ರವರಿಂದ

ಅಕ್ಟೋಬರ್ -12 ರ ಬೆಳಿಗ್ಗೆ 11 ಗಂಟೆಗೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸಮಾರೋಪ ಭಾಷಣ ಮಾಡಿದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಬಿ.ಮಾಧವ ಮಾತನಾಡಿ ನಮ್ಮ ದೇಶದಲ್ಲಿ ಕಳೆದ ಒಂದೂವರೆ ದಶಕದಲ್ಲಿ ಅನುಸರಿಸಿದ ಸಾಮ್ರಾಜ್ಯಶಾಹಿ ಪ್ರೇರಿತ ಆರ್ಥಿಕ ನೀತಿಗಳು ದೇಶದ ಕೃಷಿ, ಕೈಗಾರಿಕೆಗಳನ್ನು ವಿನಾಶದ ಅಂಚಿಗೆ ದೂಡಿದ ಪರಿಣಾಮವಾಗಿ ಲಕ್ಷಾಂತರ ಉದ್ಯೋಗಾವಕಾಶಗಳು ನಾಶಗೊಂಡು ದೇಶದ ಯುವಜನರು ತೀವ್ರ ನಿರುದ್ಯೋಗದಿಂದ ಬಳಲುವಂತಾಗಿದೆ. ಕಳೆದ 6 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಎನ್.ಡಿ.ಎ ಸರ್ಕಾರ ಯುವಜನರ ಬದುಕನ್ನು ಮತ್ತಷ್ಟು ನಾಶಗೊಳಿಸಿತು. ಉದ್ಯೋಗ ಬೇಡುವ ಯುವಜನರಿಗೆ ತ್ರಿಶೂಲಗಳನ್ನು ಹಂಚಿ ದೇಶದೆಲ್ಲೆಡೆ ಜಾತಿಗಲಭೆಗಳನ್ನು ಎಬ್ಬಿಸಿದರು. ಈ ಕೋಮುವಾದಿ ಶಕ್ತಿಗಳ ವಿರುದ್ಧ ಯುವಜನರು ನಿರಂತರ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕಿದೆ: ಭಾರತದ ದೇಶದ ಏಕತೆ-ಸಮಗ್ರತೆಗೆ ಗಂಡಾಂತರಕಾರಿಯಾದ ಈ ಕೋಮುಶಕ್ತಿಗಳನ್ನು ಸೋಲಿಸದ ಹೊರತು ಯುವಜನರ ಭವಿಷ್ಯ ಆ ಮೂಲಕ ದುಡಿಯುವ ಜನತೆಗೆ ಉತ್ತಮ ಭವಿಷ್ಯ ಸಿಗಲಾರದು ಎಂದರು. ಇಂತಹ ಆಪತ್ತಿನಿಂದ ದೇಶ ಸ್ವಲ್ಪಮಟ್ಟಿಗೆ ಪಾರಾಗಿದ್ದರೂ ಅದರ ಅಪಾಯವಿನ್ನೂ ಕೊನೆಗೊಂಡಿಲ್ಲವೆಂದು ಎಚ್ಚರಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಜಿಲ್ಲಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಪ್ರಸ್ತಾವಿಕವಾಗಿ ಮಾತನಾಡಿದರೆ, ಕಾರ್ಯದರ್ಶಿ ಅಶೋಕ ಕೊಂಚಾಡಿ ಸ್ವಾಗತಿಸಿದರು. ಜಿಲ್ಲಾ ಖಜಾಂಚಿ, ದಯಾನಂದ ಶೆಟ್ಟಿ, ನಗರ ಅಧ್ಯಕ್ಷರಾದ ಮುನೀರ್ ಕಾಟಿಪಾಳ್ಯ, ಕಾರ್ಯದರ್ಶಿ ಸಂತೋಷ್, ಸೇರಿದಂತೆ ಹಲವಾರು ಮುಖಂಡರು ಈ ಧರಣಿಯ ನೇತೃತ್ವ ವಹಿಸಿದ್ದರು.

ಅವಮಾನದಿಂದ ಮೈ ಪರಚಿಕೊಂಡ ಬಿಜೆಪಿ

ಅಕ್ಟೋಬರ್ - 11 ರ ಬೆಳಿಗ್ಗೆ 7 ಗಂಟೆಗೆ ಡಿವೈಎಫ್ಐ ಕಾರ್ಯಕರ್ತರು ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು 24 ಗಂಟೆಗಳ ಧರಣಿ ಸತ್ಯಾಗ್ರಹಕ್ಕಾಗಿ ಶಾಮಿಯಾನ ಹಾಕಿ - ಬಾವುಟ ಬ್ಯಾನರ್ ಕಟ್ಟಿದರು. ಅಲ್ಲಿಗೆ ಕೆಲ ಬಿಜೆಪಿ ಯುವಮೋರ್ಚಾ ಮುಖಂಡರು ಬಂದರು. ಅವರು ಅಂದೇ ಕೇಂದ್ರ-ರಾಜ್ಯ ಸರ್ಕಾರಗಳ ಜನವಿರೋಧಿ ನೀತಿ ವಿರುದ್ಧ ಧರಣಿ ನಡೆಸಲು ಕೆಲ ದಿನಗಳ ಹಿಂದೆ ನಿರ್ಧರಿಸಿದ್ದರಂತೆ. ಆದರೆ ಧರಣಿ ಮಾಡಲು ಜಿಲ್ಲಾಧಿಕಾರಿ ಕಛೇರಿ ಎದುರು ಇರುವ ಜಾಗವನ್ನು ಬೆಳಗ್ಗೆಯೇ ಡಿವೈಎಫ್ಐನವರು ಶಾಮಿಯಾನ ಹಾಕಿದ್ದರು. ಅವರಿಗೆ ಇನ್ನೆಲ್ಲಿಯು ಜಾಗ ಬೀದಿಯಲ್ಲೇ ಕುಳಿತುಕೊಳ್ಳಬೇಕು. ಆದರೆ ಐದಾರು ಎಂಎಲ್ಎಗಳು ಎಂಎಲ್‌ಸಿಗಳು ಬರುತ್ತಾರೆ. ಬೀದಿಯಲ್ಲಿ ಕುಳಿತರೆ ಅವಮಾನ ಏನು ಮಾಡುವುದು? ಅವರು ಚಿಂತಾಕ್ರಾಂತರಾದರು.

ಕೊನೆಗೆ ಡಿವೈಎಫ್ಐ ಮುಖಂಡರ ಹತ್ತಿರ ಬಂದರು. ನಿಮ್ಮ ಟೆಂಟನ್ನು ಬೇರೆಡೆಗೆ ಹಾಕಿ ನಮ್ಮ ಜನ ಜಾಸ್ತಿ ಬರುತ್ತಾರೆ. ಅಲ್ಲದೆ ಶಾಸಕರು ಬರುತ್ತಾರೆ. ಎಂದೆಲ್ಲಾ ಬೆದರಿಕೆ ಹಾಕಲು ನೋಡಿದರು. ಇದ್ಯಾವುದಕ್ಕೂ ಡಿವೈಎಫ್ಐ ನವರು ತಲೆಕೆಡಿಸಿಕೊಳ್ಳಲಿಲ್ಲ. ಕೊನೆಗೆ ಸಂಧಾನಕ್ಕೆ ಬಂದರು ಅವರು ಸಂದಾನ. ಏನೆಂದರೆ ನೀವು ಹಾಕಿದ ಶಾಮಿಯಾನವನ್ನು ನಮಗೆ ಅರ್ಧ ದಿನ ಬಿಟ್ಟುಕೊಡಿ ನಿಮ್ಮ ಧರಣಿಯನ್ನು ಮಧ್ಯಾಹ್ನದ ನಂತರ ನಡೆಸಿ ಎಂದು. ಅದು ಸಾಧ್ಯವೇ ಇಲ್ಲ. ನೀವು ಬೀದಿಯಲ್ಲಿ ಬೇಕಾದರೆ ಟೆಂಟ್ ಹಾಕಿ, ನಮ್ಮದೇನು ಅಭ್ಯಂತರವಿಲ್ಲವೆಂದು ಡಿವೈಎಫ್ಐನವರು ಹೇಳಿದರು. ಪೋಲೀಸ್‌ರವರು ಅವರಿಗೆ ಅದೇ ಉಪದೇಶ ನೀಡಿದರು.

ಅಂತೂ - ಅವರ ಧರಣಿಯು ಬೀದಿಗೆ ಬಂತು. ಡಿವೈಎಫ್ಐ ಧರಣಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರಾರಂಭವಾಯ್ತು. ಪೋಲೀಸ್‌ನವರು ಬೆಳಿಗ್ಗೆ 11 ಗಂಟೆಗೆ ನಾವು ಉದ್ಘಾಟನೆ ಮಾಡಿ ನಂತರ ಅವರ ಕಾರ್ಯಕ್ರಮಕ್ಕೆ ಅವಕಾಶ ನೀಡಲು ಕೇಳಿದರು. ಅದಕ್ಕೆ ಒಪ್ಪಿ, ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಧರಣಿ ಉದ್ಘಾಟಿಸಿ ಮಾತನಾಡ ತೊಡಗಿದರು. ಉದ್ಯೋಗಾವಕಾಶಗಳ ನಾಶ, ನಿರುದ್ಯೋಗ, ಸೀಟಿ ಬಿಕ್ಕಟ್ಟು, ಕುರಿತಂತೆ ಮಾತನಾಡುತ್ತ, ಹಿಂದೆ ಇದ್ದ ಎನ್‌ಡಿಎ ಸರ್ಕಾರದ ಯುವಜನ ವಿರೋಧಿ ನೀತಿ. ಸೀಟಿ ಬಿಕ್ಕಟ್ಟಿಗೆ ಕರ್ನಾಟಕದ ಬಿಜೆಪಿ ತೋರಿಸುತ್ತಿರುವ ದ್ವಿಮುಖ ನೀತಿಯನ್ನು ಟೀಕಿಸುತ್ತಿದ್ದಂತೆ. ಆ ಕಡೆ ಬೀದಿಯಲ್ಲಿ ಸುಮ್ಮನೆ ಕುಳಿತಿದ್ದ ಕಾವಿ ಪಡೆಗಳಿಗೆ ತಡೆದುಕೊಳ್ಳಲು ಸಾಧ್ಯವಾಗದೇ ಕೇಕೇ ಹಾಕ ತೊಡಗಿದರು. ಮಧ್ಯ-ಮಧ್ಯೆ ಘೋಷಣೆ ಕೂಗುತ್ತ ಅವರ ಭಾಷಣಕ್ಕೆ ಅಡ್ಡಿಪಡಿಸತೊಡಗಿದರು.

ಆದರೂ ತಮ್ಮ ಭಾಷಣವನ್ನು ಮುಂದುವರೆಸಿದ ಮಹಾಂತೇಶ್,ಕೇವಲ ಭಾಷಣಕ್ಕೆ ಅಡ್ಡಿಪಡಿಸಿದರೆ ಏನು ಸಾಧಿಸಿದಂತಾಗುವುದಿಲ್ಲ. ನಿಜವಾಗಿಯೂ ನಿಮಗೆ ಕಳಕಳಿ ಇದ್ದಲ್ಲಿ ನಮ್ಮ ಭಾಷಣಕ್ಕೂ ಅವಕಾಶ ನೀಡಿ ನಂತರ ಬೇಕಾದರೆ ಮುಕ್ತವಾಗಿ ಚರ್ಚಿಸಲು ನಾವು ಸಿದ್ಧ ಎಂದು ಹೇಳುತ್ತಿದ್ದಂತೆ ಬಾಯಿ ಮುಚ್ಚಿಕೊಂಡರು.

ಒಂದು ಕಡೆ ಧರಣಿಗೆ ಜಾಗವಿಲ್ಲದೆ ಬೀದಿಗೆ ಬಿದ್ದ ಅವಮಾನ ಇನ್ನೊಂದೆಡೆ ಎದುರಿಗೆ ಕುಳಿತುಕೊಂಡು ಅವರ ವಿರುದ್ಧವೇ ಮಾತುಗಳನ್ನಾಡುತ್ತಿರುವುದನ್ನು ಕೇಳಬೇಕಾದ ಅನಿವಾರ್ಯ ಪ್ರಸಂಗಗಳು ಅವರಿಗೆ ತೀರ ಅವಮಾನಕರ ಪರಿಸ್ಥಿತಿಗೆ ದೂಡಿದವು.

ನಂತರ ಅವರ ಧರಣಿ ಪ್ರಾರಂಭವಾಯ್ತು, ಧರಣಿ, ಉದ್ದೇಶಕ್ಕೆ ಅರ್ಥವೇ ಇರಲಿಲ್ಲ. ಆದರೆ ಅದರಲ್ಲಿ ಭಾಗವಹಿಸಿದ್ದ ಶಾಸಕರಾದ, ಎ.ಎಸ್. ಆಚಾರ್ಯ, ಹಂಗಾರಾ, ಬಾಲಕೃಷ್ಣ ಭಟ್, ವಸಂತ ಬಂಗೇರಾ ಮೊದಲಾದವರು ಮಾತನಾಡಿದ್ದು ನೀತಿಗಳ ಬಗ್ಗೆಯಲ್ಲ. ಕೇಂದ್ರದಲ್ಲಿ ಯುಪಿಎಗೆ ಬೆಂಬಲಿಸಿರುವ ಕಮ್ಯೂನಿಸ್ಟರ ವಿರುದ್ಧ.

ಅವರ ಸಭೆ ಮುಗಿಯುವ ವೇಳೆಗೆ ಎಸ್ಎಫ್ಐ ನೇತೃತ್ವದಲ್ಲಿ ಅಲ್ಲಿಗೆ ಬಂದ ನೂರಾರು ಸರ್ಕಾರಿ ಪಾಲಿಟೆಕ್ನಿಕ್ ವಿದ್ಯಾರ್ಥಿನಿಯರ ಪ್ರತಿಭಟನೆಯನ್ನು ಕಂಡು ಕೆಂಡಮಂಡಲವಾದ ಚಡ್ಡಿಗಳು ಅಲ್ಲೂ ಮೂಗು ತೂರಿಸಲು ಪ್ರಯತ್ನಿ ಮೂತಿಗೆ ತಿವಿಸಿಕೊಂಡಿದ್ದೂ ಆಯಿತು.

ಇಷ್ಟೆಲ್ಲ ಅವಮಾನ ಅನುಭವಿಸಿದ ಬಿಜೆಪಿ ಮುಖಂಡರಿಗೆ ಅಕ್ಟೋಬರ್-12 ರಂದು ದಿನಪತ್ರಿಕೆಗಳು ಮತ್ತಷ್ಟು ಮಂಗಳಾರತಿ ಎತ್ತಿದ್ದವು.

ಇಷ್ಟೆಲ್ಲಾ ಆದ ಮೇಲೆ ಅವರಿಗೆ ಮೈ ಪರಚಿಕೊಳ್ಳುವುದು ಮಾತ್ರ ಬಾಕಿ.

- ಕೆ.ಮಹಾಂತೇಶ್

ಎಡ ಚಳುವಳಿಗೆ ಕೊಡುಗೆ ನೀಡಿದ ಕೆ.ತಿಮ್ಮಪ್ಪ ನಿಧನ

ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರಾದ ಕೆ.ತಿಮ್ಮಪ್ಪ ಕುಡ್ತಡ್ಕ (75 ವರ್ಷ) ಅವರು ಅನಾರೋಗ್ಯ ನಿಮಿತ್ತ ಇತೀಚೆಗೆ ನಿಧನಹೊಂದಿದರು.

ತಿಮ್ಮಪ್ಪನವರು ಯುವಕರಾಗಿದ್ದಾಗಲೇ ಎಡಪಂಥೀಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ, ಮಂಗಳೂರಿನ ಬಜಾಲಿನಲ್ಲಿ ರೈತ-ಕಾರ್ಮಿಕ ಚಳುವಳಿಯನ್ನು ಕಟ್ಟಿ ಬೆಳೆಸಲು ಶಕ್ತಿಮೀರಿ ಪ್ರಯತ್ನಿಸಿದ್ದರು. 1953 ರಲ್ಲಿ ಪಕ್ಕಲಡ್ಕ ಯುವಕ ಮಂಡಲದ ಸ್ಥಾಪನೆಗೆ ಕಾರಣಕರ್ತರಾದ ತಿಮ್ಮಪ್ಪನವರು, ಪ್ರದೇಶದ ಯುವಜನರನ್ನು ಎಡಪಂಥೀಯ ಚಳುವಳಿಗೆ ಸೆಳೆಯುವಲ್ಲಿ ಯುವಕ ಮಂಡಲದ ಮೂಲಕ ಶ್ರಮಿಸಿದ್ದರು. ಬೀಡಿ ಕಾರ್ಮಿಕರನ್ನು ಸಂಘಟಿಸುವತ್ತ ಗಮನ ಹರಿಸಿ, ಅನೇಕ ಚಳುವಳಿಗಳನ್ನು ಸಂಘಟಿಸಿದ್ದರು. ಸ್ವತಃ ನೇಯ್ಗೆ ಕಾರ್ಮಿಕರಾದ ತಿಮ್ಮಪ್ಪನವರು, ನೇಯ್ಗೆ ಕಾರ್ಮಿಕರನ್ನು ಸಂಘಟಿಸಿ ಹೋರಾಟ ನಡೆಸುವಲ್ಲಿ ಹಿಂದೆ ಬೀಳಲಿಲ್ಲ. 1964 ರಲ್ಲಿ ಕಮ್ಯುನಿಸ್ಟ್ ಪಕ್ಷ ವಿಭಜನೆಯಾದಾಗ ಕಾಂ. ಪಿ.ರಾಮಚಂದ್ರ ರಾವ್ ಅವರ ನಿರಂತರ ಮಾರ್ಗದರ್ಶನದಿಂದಾಗಿ ಸಿಪಿಐ(ಎಂ) ಪಕ್ಷವನ್ನು ಸೇರಿದ್ದರು. ಆ ಮೂಲಕ ಪಕ್ಷವನ್ನು ಬಜಾಲ್ ಪರಿಸರದಲ್ಲಿ ಬಲಿಷ್ಟವಾಗಿ ಕಟ್ಟಿ ಬೆಳೆಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದರು.



ಹೀಗೆ ತಿಮ್ಮಪ್ಪನವರು ರೈತರು-ಬೀಡಿ ಕಾರ್ಮಿಕರು - ನೇಯ್ಗೆ ಕಾರ್ಮಿಕರು, ಯುವಜನರನ್ನು ಸಂಘಟಿಸುವ ಮೂಲಕ ಎಡಪಂಥೀಯ ಚಳುವಳಿಯ ಬೆಳವಣಿಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಇಂತಹ ಸಂಗಾತಿಯ ನಿಧನದಿಂದಾಗಿ ಎಡಪಂಥೀಯ ಚಳುವಳಿಗೆ ದೊಡ್ಡ ನಷ್ಟವುಂಟಾಗಿದೆ ಎಂದು ಸಿಪಿಐ(ಎಂ) ಬಜಾಲ್ ಶಾಖೆ ತಿಳಿಸಿದೆ.

ಕಾಂ. ತಿಮ್ಮಪ್ಪನವರ ನಿಧನಕ್ಕೆ ಸಿಪಿಐ(ಎಂ) ಬಜಾಲ್ ಶಾಖೆ, ಅಳುತೆ ಪ್ರದೇಶ ಬೀಡಿ ಕೆಲಸಗಾರರ ಸಂಘ, ಡಿವೈಎಫ್ಐ ಬಜಾಲ್, ಪಕ್ಕಲಡ್ಕ ಘಟಕ, ದ.ಕ. ಜಿಲ್ಲಾ ಸಮಿತಿ, ಸಿಪಿಐ(ಎಂ) ಮಂಗಳೂರು ನಗರ ಸಮಿತಿಗಳು ತೀವ್ರ ಸಂತಾಪ ಸೂಚಿಸಿವೆ.

ಬಿಜೆಪಿ ಹೊಸ ಅಧ್ಯಕ್ಷ ಅಡ್ವಾಣಿ......

ಪುಟ 5 ರಿಂದ

ಆಳುವ ಮೈತ್ರಿಕೂಟ ಎಂತಹ ನೀತಿಗಳನ್ನು ಅನುಸರಿಸುತ್ತದೆ, ಯಾರ ಹಿತಾಸಕ್ತಿಯಿಂದ ಅನುಸರಿಸುತ್ತದೆ ಎಂಬುದರ ಮೇಲೆಯೇ ಅದು ಅವಲಂಬಿಸಿರುತ್ತದೆ ಎಂಬ ಸಂಗತಿ ಮತ್ತೊಮ್ಮೆ ಸಾಬೀತಾಗಿದೆ. ಈಗಿನ ಆಳುವ ಕೂಟಕ್ಕೂ ಇದೊಂದು ಪಾಠ.

ಬಿಜೆಪಿ ಅಧಿಕಾರದಲ್ಲಿದ್ದಾಗ

ಅದೇನೇ ಇರಲಿ, ಅಧಿಕಾರದಲ್ಲಿದ್ದ ಎನ್‌ಡಿಎ ಯ ಮುಖಂಡರಾಗಿ ಬಿಜೆಪಿ ಯ ಅಧಿಕಾರಾವಧಿ ವಂಚಕ ಸ್ವರೂಪದ್ದು. ಎಲ್ಲರಿಗೂ ಗೊತ್ತಿರುವಂತೆ ಬಿಜೆಪಿ ದೇವಸ್ಥಾನ ಕಟ್ಟುವುದು, 370ನೇ ಕಲಮು ಹಾಗೂ ಸಮಾನ ನಾಗರಿಕ ಸಂಹಿತೆ - ಈ ಮೂರು ವಿವಾದಾತ್ಮಕ ಪ್ರಶ್ನೆಗಳನ್ನು ಎತ್ತುವುದಿಲ್ಲ ಎಂದು ತನ್ನ ಮಿತ್ರರಿಗೆ ವಚನ ನೀಡಬೇಕಾಯಿತು. ಎನ್‌ಡಿಎ ಪ್ರಕಟಿಸಿದ ರಾಷ್ಟ್ರೀಯ ಆಡಳಿತ ಅಜೆಂಡಾದಲ್ಲಿ ಇವನ್ನೂ ಸೇರಿಸಿರಲಿಲ್ಲ. ಆದರೆ ನಿಜ ಸಂಗತಿಯೆಂದರೆ ಅವರು ಎಂದೂ ಈ ಪ್ರಶ್ನೆಗಳನ್ನು ಕೈಬಿಟ್ಟಿರಲಿಲ್ಲ. ಅದನ್ನು ತಾವೇ ಬಹುಮತಗಳಿಸುವವರೆಗೆ ಮುಂದೂಡಲಾಗಿದೆ ಎಂಬ ಹಲವು ಬಿಜೆಪಿ ಮುಖಂಡರು ಹೇಳಿರುವುದು ದಾಖಲಾಗಿದೆ. ಅಲ್ಲದೆ ಬಿಜೆಪಿ ಈ ಪ್ರಶ್ನೆಗಳನ್ನು ಎತ್ತಲು ಹಿಂಜರಿದರೂ, ಸಂಘ ಪರಿವಾರದ ಇತರ ಸಂಘಟನೆಗಳು ಅವನ್ನು ಎತ್ತುತ್ತಲೇ ಇದ್ದವು. ಉದಾಹರಣೆಗೆ, ವಿಹೆಚ್‌ಪಿ ಸದಾ ಅಯೋಧ್ಯಾ ಬಾಣಲೆ ಕುದಿಯುತ್ತಿ ರುವಂತೆ ಮಾಡಿತು, ಆರ್‌ಎಸ್ ಎಸ್ ಜಮ್ಮು- ಕಾಶ್ಮೀರದ ತ್ರಿವಿಭಜನೆ, ಚತುರ್ವಿಭಜನೆಯ ಸೂತ್ರಗಳನ್ನು ಸೂಚಿಸಿತು. ಅದೇ ವೇಳೆಗೆ ಕೇಂದ್ರದಲ್ಲಿ ವಾಸ್ತವವಾಗಿ ಇದ್ದ ಬಿಜೆಪಿ ಸರ್ಕಾರದ ರಾಜ್ಯಭಾರದಲ್ಲಿ ದೇಶದ ವಿವಿಧೆಡೆ ಬಹಳ ಮಂದಿ ಕ್ರಿಶ್ಚಿಯನ್ನರನ್ನು ಗುಜರಾತಿನಲ್ಲಿ 2000 ಕ್ಕೂ ಹೆಚ್ಚು ಮುಸಲ್ಮಾನರನ್ನು ಸಾಯಿಸಲಾಯಿತು. ಗುಜರಾತಿ ನಲ್ಲಿ ಮೋದಿ ಸರ್ಕಾರದ ವರ್ತನೆ ಮತ್ತು ಉತ್ತರ ಪ್ರದೇಶದ ಕಾನ್ಪುರದ ಕೋಮುಗಲಭೆಗಳಲ್ಲಿ ರಾಜನಾಥ್‌ಸಿಂಗ್ ಸರ್ಕಾರದ ವರ್ತನೆಗಳು ಬಿಜೆಪಿಯ ರಾಜ್ಯ ಸರ್ಕಾರಗಳು ಸಂಘ ಪರಿವಾರದ ಕೊಲೆಗಡುಕ ಪಡೆಗಳನ್ನು ಕಾಪಾಡಲು ಎಂತಹ ಮಟ್ಟಕ್ಕೂ ಹೋಗಬಲ್ಲದು ಎಂಬುದನ್ನು ತೋರಿಸಿತು.

ವ್ಯಂಗ್ಯವೆಂದರೆ ಸಂಘ ಪರಿವಾರದಿಂದಲೂ ಕೇಂದ್ರದ ವಾಜಪೇಯಿ ಸರ್ಕಾರ ದೂಷಣೆಗಳನ್ನು ಎದುರಿಸಬೇಕಾಯಿತು. ಅದರಲ್ಲಿ ಗಮನಾರ್ಹ ವಾದದ್ದು ಮತ್ತು ಕುಖ್ಯಾತವಾದದ್ದು ವಿಶ್ವ ಹಿಂದೂ ಪರಿಷತ್‌ನ ದೂಷಣೆಗಳು. ಬಿಜೆಪಿ 'ಒತ್ತಡಗಳು, ನಿಜ ರಾಜಕೀಯ' ಎಂದೆಲ್ಲಾ ಹೇಳುತ್ತಲೇ ಇತ್ತು. ವಾಸ್ತವವಾಗಿ ಇದರರ್ಥ ಕೋಮುವಾದಿ ಅಜೆಂಡಾ ವನ್ನು ಸ್ವಲ್ಪ ಲಗಾಮು ಹಿಡಿದು ಅನುಸರಿಸಬೇಕು ಎಂಬುದು. ಆದರೆ ಸಂಘ ಪರಿವಾರದ ಆ ಸಂಸ್ಥೆಗಳಿಗೆ ಅದರಿಂದ ತೃಪ್ತಿಯಾಗುತ್ತಿರಲಿಲ್ಲ. ಅವು ವಾಜಪೇಯಿ ಸರ್ಕಾರ ಅತ್ಯಂತ ಕರ್ಕಶವಾಗಿ, ನಗ್ನವಾಗಿ ತಮ್ಮ ಅಜೆಂಡಾವನ್ನು ಅನುಸರಿಸಬೇಕು ಎಂದು ಬಯಸುತ್ತಿದ್ದವು. ಅಶೋಕ್ ಸಿಂಘಾಲ್, ಪ್ರವೀಣ್ ತೊಗಾಡಿಯಾ ರಂತಹ ವಿಹೆಚ್‌ಪಿ ಮುಖಂಡರು ವಾಜಪೇಯಿ ಯವರ ಬೆನ್ನಟ್ಟಿದ್ದರು. ಇನ್ನೊಂದೆಡೆ, ತಥಾಕಥಿತ ಜನ ಸಂಘದ ಬಲರಾಜ್ ಮುಧೋಕ್ ಇತ್ತೀಚೆಗಷ್ಟೇ ಆರ್‌ಎಸ್‌ಎಸ್ ಬಿಜೆಪಿಯನ್ನು ಮೂಲೆಗೆಸೆದು ಅವರ ಸಂಘಟನೆ ಯನ್ನು ತನ್ನ ರಾಜಕೀಯ ಅಂಗವಾಗಿ ಅಂಗೀಕರಿಸಬೇಕು ಎಂದೂ ಹೇಳಿದರು.

ಯಾವುದೇ ಅನಪೇಕ್ಷಿತ ಕೋಮು ಘಟನೆಗಳನ್ನು ನಡೆಯದಂತೆ, ಯಾವುದೇ ನೆವದಲ್ಲಿ ಯಾವುದೇ ಸಂಸ್ಥೆ ಕೀಳು ಭಾವನೆ ಗಳನ್ನು ಉದ್ರೇಕಿಸದಂತೆ ನೋಡಿ ಕೊಳ್ಳಬೇಕು, ಸೋದರ ಹಂತಕ ಸಮರಗಳನ್ನು ಮೊಳಕೆ ಯಲ್ಲೇ ಚಿವುಟಿಹಾಕಬೇಕು.

ಭವಿಷ್ಯಕ್ಕೆ ಬೆದರಿಕೆ

ಹೀಗೆ ಸಂಘ ಪರಿವಾರದ ಆಂತರಿಕ ಹೋರಾಟವೇ ಬಿಜೆಪಿ ಸೋಲಿನ ನಂತರ ಗೋವಾದಲ್ಲಿ ನಡೆದ 'ಚಿಂತನ್ ಬೈಠಕ್' ನಲ್ಲಿ 'ಮೂಲಕ್ಕೇ ಹಿಂದಿರುಗುವುದು' ಹಾಗೂ ನಂತರ ಮುಂಬೈಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ 'ಮುಂದಿನ ಕಾರ್ಯಭಾರಗಳು' ದಸ್ತಾವೇಜಿನಲ್ಲಿ ಹರಳುಗಟ್ಟಿದವು. ಬಿಜೆಪಿ **ಅಧ್ಯಕ್ಷರಾಗಿ ಅಡ್ವಾಣಿಯವರಿಗೆ ಪಟ್ಟ ಕಟ್ಟಿರುವುದೂ ಇದೇ ಮೂಲಕ್ಕೆ ಮರಳುವ ಪ್ರಕ್ರಿಯೆಯ ಪ್ರತೀಕವಾಗಿದೆ; ಈ ಹಿಂದೆ ಹೇಳಿದಂತೆ, ಬಿಜೆಪಿ ಎಂದೂ ತನ್ನ ಮೂಲ ವಿಷಯಗಳಿಂದ ದೂರ ಹೋಗಿಯೇ ಇಲ್ಲವಲ್ಲ ಎಂಬುದು ಬೇರೆ ಮಾತು.**

ಹೀಗೆ ವಾಸ್ತವ ಸಂಗತಿಯೆಂದರೆ ಇತರೆಲ್ಲಾ ದಾರಿಗಳನ್ನು ಪ್ರಯತ್ನಿಸಿದ ನಂತರ ಬಿಜೆಪಿಗೆ ತನ್ನ ಹಳೆಯ, ಅಪಖ್ಯಾತಿಗೊಳಗಾದ ಕೋಮುವಾದಿ ವೇದಿಕೆಯನ್ನು ಬಿಟ್ಟು ಬೇರಾವುದಕ್ಕೂ ಆತುಕೊಳ್ಳಲು ಸಾಧ್ಯವಿಲ್ಲ.



ನಾಟಕದ ಪಾತ್ರಧಾರಿಗಳು ಅದಲು-ಬದಲು ನಾಗಾಪುರದ ರಿಮೋಟ್ ರಾಜಕೀಯ ?

ಈ ಕಾರ್ಯತಂತ್ರ ಯಶಸ್ವಿಯಾಗುವುದೇ ಎಂದು ಕೇಳಿದರೆ, ಈ ದೇಶದ ಜನತೆಗೆ ಬಿಜೆಪಿ ಒಂದು ನೀತಿಯುತ ಪಕ್ಷ, ಒಂದು ಭಿನ್ನವಾದ ಪಕ್ಷ ಎಂಬ ಭ್ರಮೆಗಳೇನಾದರೂ ಇದ್ದಿದ್ದರೆ ಆ ಭ್ರಮೆಗಳೆಲ್ಲಾ ಹರಿದಿವೆ, ಸಂಘ ಪರಿವಾರದ ವಿಷಯುಕ್ತ ಕೋಮುವಾದಿ ಪ್ರಚಾರದಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಕಂಡ ಸಾವಿನ ರುದ್ರನರ್ತನವನ್ನು ಅನುಭವಿಸಿದ ಜನತೆ ದೇಶದ ವರ್ತಮಾನ ಮತ್ತು ಭವಿಷ್ಯದೊಂದಿಗೆ ಆಟ ವಾಡಲು ಇನ್ನೊಂದು ಅವಕಾಶ ಕೊಡಲಾರರು. ಹಲವು ಮಾಧ್ಯಮ ಟಿಪ್ಪಣಿಗಾರರು ಇದನ್ನು ನಿಸ್ಸಂದಿಗ್ಧವಾಗಿ ಗಮನಿಸಿದ್ದಾರೆ. ಉದಾಹರಣೆಗೆ, ನೀನಾ ವ್ಯಾಸ್ 'ಹಿಂದೂ' ದೈನಿಕದಲ್ಲಿ (ಅಕ್ಟೋಬರ್ 25) ಬರೆಯುತ್ತಾ '1992-93 ರಲ್ಲಿ ಬಾಬ್ರಿ ಮಸೀದಿ ಧ್ವಂಸಕ್ಕೆ ಮೊದಲಿನ ವರ್ಷಗಳಲ್ಲಿ ತಾನು ಪ್ರತಿಪಾದಿಸಿದ ಹಿಂದುತ್ವ ಸಂಪೂರ್ಣವಾಗಿ ಬಯಲಾಗಿದೆ ಎಂಬುದನ್ನು ಅರಗಿಸಿಕೊಳ್ಳಲು ಬಿಜೆಪಿಗೆ ಇನ್ನೂ ಸಾಧ್ಯವಾಗಿಲ್ಲ" ಎಂದಿದ್ದಾರೆ. ಮುಂದೆ ಕೆಲವೇ ವಾಕ್ಯಗಳ ನಂತರ ಆಕೆ ಇನ್ನೂ ಸ್ಪಷ್ಟವಾಗಿ ಹೇಳುತ್ತಾರೆ - ಯಾವುದೇ ಹೆಸರಿನಲ್ಲಿ ಕರೆದರೂ ಹಿಂದುತ್ವ ವೋಟು ಗಳಿಸುವುದಿಲ್ಲ ಎಂಬುದನ್ನು ಅರಿಯಲು ಬಿಜೆಪಿ ವಿಫಲವಾಗಿದೆ. ಒಂದು ರಕ್ತದೋಕುಳಿಯ ನಂತರ ನಡೆದ ಗುಜರಾತ್ ವಿಧಾನಸಭಾ ಚುನಾವಣೆಗಳಲ್ಲಿ ಬಿಟ್ಟು ಬೇರೆಲ್ಲೂ ಅದು ಮತ ಗಿಟ್ಟಿಸಲಿಲ್ಲ"

ಆದರೆ ಇದೇ ಭವಿಷ್ಯದಲ್ಲಿ ಬರಬಹುದಾದ ಬೆದರಿಕೆಯನ್ನು ಸೂಚಿಸುತ್ತಿದೆ. ಒಂದು ರಕ್ತದೋಕುಳಿಯ ಹಿನ್ನೆಲೆಯಲ್ಲಿ ಜನಗಳನ್ನು ಕೋಮು ಆಧಾರದಲ್ಲಿ ಧ್ರುವೀಕರಿಸಿ ಮಾತ್ರವೇ ಬಿಜೆಪಿ ಅಧಿಕಾರಕ್ಕೆ ಬರಬಲ್ಲದೆಂಬುದಾದರೆ ದೇಶದ ಯಾವ ಭಾಗದಲ್ಲಿ ಸಾಧ್ಯವೋ ಅಲ್ಲಿ ಇಂತಹ ರಕ್ತದೋಕುಳಿಯನ್ನು ನಡೆಸಲು ಅದು ಹೇಸಲಿಕ್ಕಿಲ್ಲ. 1990 ರ 'ರಥಯಾತ್ರೆ'ಯಲ್ಲಿ ನೂರು ದಿನಗಳ ರಕ್ತಪಾತ, ಕೊಲೆ ಸುಲಿಗೆಗಳೊಂದಿಗೆ ಅಡ್ವಾಣಿ ಮತ್ತೊಮ್ಮೆ ಈ ಅಪಾಯದ ಪ್ರತೀಕವಾಗಿದ್ದಾರೆ. ಆದರೆ ಇದು ಜನಗಳು ತಮ್ಮ ಜಾಗರೂಕತೆಯನ್ನು ಹಲವು ಪಟ್ಟು ಹೆಚ್ಚಿಸಬೇಕಾದ ಅಗತ್ಯವನ್ನು ಎತ್ತಿ ತೋರುತ್ತದೆ. ಈ ಮೂಲಕ ಸೋದರ ಹಂತಕ ಶಕ್ತಿಗಳು ತಲೆಯೆತ್ತಿದಾಗಲೆಲ್ಲಾ ಅದರ ಆಟವನ್ನು ವಿಫಲಗೊಳಿಸಿ ನಿಷ್ಕರುಣೆಯಿಂದ ಅವರಿಗೆ ಪ್ರತ್ಯುತ್ತರ ನೀಡುವಂತಾಗಬೇಕು. ಅಲ್ಲದೆ ಇದು ಕೇಂದ್ರ ಸರ್ಕಾರದ ಮೇಲೆ ಮತ್ತು ಜಾತ್ಯತೀತ ಪಕ್ಷಗಳ, ಮೈತ್ರಿಕೂಟಗಳ ನೇತೃತ್ವದ ರಾಜ್ಯ ಸರ್ಕಾರಗಳು ತಮ್ಮ ಪ್ರದೇಶಗಳಲ್ಲಿ ಯಾವುದೇ ಅನಪೇಕ್ಷಿತ ಕೋಮು ಘಟನೆಗಳನ್ನು ನಡೆಯದಂತೆ, ಯಾವುದೇ ನೆವದಲ್ಲಿ ಯಾವುದೇ ಸಂಸ್ಥೆ ಕೀಳು ಭಾವನೆಗಳನ್ನು ಉದ್ರೇಕಿಸದಂತೆ ನೋಡಿ ಕೊಳ್ಳಬೇಕು, ಸೋದರ ಹಂತಕ ಸಮರಗಳನ್ನು ಮೊಳಕೆಯಲ್ಲೇ ಚಿವುಟಿಹಾಕಬೇಕು. ಇದರಲ್ಲಿ ಯಾವುದೇ ಅಜಾಗರೂಕತೆ ತೋರಿದರೆ ಅದು ಈ ಸರಕಾರಗಳು ತಮ್ಮ ಜಾತ್ಯತೀತ ಸ್ವರೂಪವನ್ನು ಕೈಬಿಟ್ಟಂತಾಗುತ್ತದೆ, ಅದು ಕೋಮುವಾದಿ ಸಂಘಟನೆಗಳಿಗೆ ಹರ್ಷ ತರುವ ಸಂಗತಿಯಾಗುತ್ತದೆ.

ಹುಂಡಿಪ್ರಿಯ ಮಠಾಧೀಶರಿಗೆ ಬೆಂಗಾವಲು

ಪುಟ 3 ರಿಂದ

ಲಾಗುವುದು ಎಂದು ಮಾಜಿ ಸಚಿವ ಹೆಚ್.ವಿಶ್ವನಾಥ್ ಹೇಳಿದ್ದಾರೆ. ಈ ಆಧಾರದಲ್ಲೇ ಕೃಷ್ಣ ದೇವಾಲಯ- ಆಸ್ತಿಯನ್ನು ಸರ್ಕಾರ ತನ್ನ ಆಧೀನಕ್ಕೆ ತೆಗೆದುಕೊಳ್ಳಬೇಕು ಎಂಬುದು ಅವರ ಸತತ ಆಗ್ರಹ. ಈ ವಾದದ ಜೊತೆಗೆ ಇತ್ತೀಚೆಗೆ ಉಡುಪಿ ಮಠಾಧೀಶರು ಕೆಡವಿದ 'ಕನಕಗೋಪುರ' ದ ವಿವಾದವು ತಣ್ಣಗಾಗಿಲ್ಲ. ಅಲ್ಲಿನ ಪರ್ಯಾಯ ಮಠಾಧೀಶರು ತಮ್ಮ ಅವಧಿಯಲ್ಲಿ ಏನಾದರೊಂದು ಪ್ರಾಜೆಕ್ಟ್ ಹಾಕಿ ಕೋಟ್ಯಾಂತರ ಹಣ ಎತ್ತುವುದು ಬಹುಪ್ರಿಯವಾದ ಕೆಲಸವಾಗಿದೆ. ಹಳೇ ಗೋಪುರ ಒಡೆದುಹಾಕಿ ಹೊಸಗೋಪುರ ಕಟ್ಟುವುದಾಗಿ-ಅದಕ್ಕೆ ಕನಕನ ಹೆಸರನ್ನೇ ಇಡುವುದಾಗಿ ಈ ಹುಂಡಿಪ್ರಿಯರು ಪ್ರಕಟಿಸಿದ್ದನ್ನು ಬಹಳಷ್ಟು ಪ್ರಗತಿಪರರು, ಹಿಂದುಳಿದ ಜಾತಿ ಸಂಘಟನೆಗಳು ಒಪ್ಪಿಲ್ಲ. ಅದನ್ನು ಪರಂಪರೆ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲಿನ ಧಾಳಿ, ಪುರಾತನ, ಐತಿಹಾಸಿಕ ಪಳೆಯುಳಿಕೆಗಳನ್ನು, ಸಂಕೇತಗಳನ್ನು ಒಡೆಯುವುದೇ 'ಅಯೋದ್ಯಾ ಕಾಂಡದ ರೂವಾರಿಗಳ ಕ್ರಮ ಎಂದು ಪ್ರತಿಭಟಿಸಿದ್ದಾರೆ. ಈ ವಾರ ಮೈಸೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಸಂಘ ಪರಿವಾರ ಇಟ್ಟಿಗೆ ಹಿಡಿದು ಅಯೋದ್ಯಾದತ್ತ ಹೋದಂತೆ ತಾವೆಲ್ಲರೂ ಇಟ್ಟಿಗೆ ಹಿಡಿದು ಉಡುಪಿಗೆ ಹೊರಡೋದು ಎಂಬ ಉದಾರ ಸಲಹೆಯೂ ಬಂದಿತಾದರೂ, ಈ ಅನುಕರಣೆಯನ್ನು ಬಹುತೇಕರು ಒಪ್ಪಲಿಲ್ಲ. ಉಡುಪಿಯ ಬಹುತೇಕ ಮಠಗಳು (ಕೆಲವರು ವಿರೋಧವಿದ್ದಾರೆ) ಅದರಲ್ಲಿಯೂ ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಹಾಗೂ ಅಧೋಕ್ಷಜ ಮಠ ಸ್ವಾಮಿಗಳು, ಸಂಘಪರಿವಾರದ ಕಟ್ಟಾಳುಗಳಾಗಿದ್ದಾರೆ. ಅಯೋಧ್ಯಾ ಮಸೀದಿ ಧ್ವಂಸ ಕಾರ್ಯದಲ್ಲಿ ನೇರವಾಗಿ ಭಾಗವಹಿಸಿದವರು ಪೇಜಾವರರು. ಇವರ ಎಲ್ಲಾ ದುಷ್ಕೃತ್ಯಗಳಿಗೆ - ರಾಜಕೀಯಕ್ಕೆ ಬಜರಂಗದಳ - ವಿಶ್ವ ಹಿಂದು ಪರಿಷತ್‌ನ ಗೂಂಡಾಪಡೆ ಸದಾ ಬೆಂಗಾವಲಾಗಿದೆ. ಬಿಜೆಪಿ ರಾಜಕೀಯ ಗುರಾಣಿಯಾಗಿದೆ. ಆದ್ದರಿಂದ ಇದು ಕೇವಲ ಕನಕಗೋಪುರ, ಕೆಡಹುವ ಕಟ್ಟುವ ವಿಚಾರ ಮಾತ್ರವಾಗಿರದೆ ಕನಕದಾಸರ ಧರ್ಮನಿರಪೇಕ್ಷ ಪರಂಪರೆಗೆ ಬಹುಸಂಸ್ಕೃತಿಯ ಮೌಲ್ಯಗಳಿಗೆ ಮಸಿ ಬಳಿಯುವ , ಅದನ್ನು ಧ್ವಂಸಗೊಳಿಸುವ, ಫ್ಯಾಸಿಸ್ಟ್ ಸ್ವರೂಪದ ಧಾಳಿ ವಿರುದ್ಧ ಎಲ್ಲಾ ಪ್ರಜ್ಞಾವಂತರು, ಸೆಟೆದು ನಿಲ್ಲಬೇಕಿದೆ. ದಾಸ ಪರಂಪರೆಯ ಜನಮುಖಿ, ಜಾತಿ ವ್ಯವಸ್ಥೆಯ ವಿರೋಧಧ ಸ್ವರೂಪವನ್ನು ಅನಾವರಣಗೊಳಿಸುತ್ತಾ ಜೀವಂತಿಕೆ ತರುತ್ತಾ ಕೋಮುವಾದಿಗಳನ್ನು ಎದುರಿಸಬೇಕಿದೆ.

ಕಾಡುಗೊಂಡನಹಳ್ಳಿ ಘರ್ಷಣೆ: ಆಸ್ತಿ ಒಡೆತನದ ವಿವಾದ - ಕೋಮು ಘರ್ಷಣೆಯಾಗದಂತೆ ಕ್ರಮ ಅಗತ್ಯ

ಬೆಂಗಳೂರು ನಗರದ ಕಾಡುಗೊಂಡನ ಹಳ್ಳಿ ವ್ಯಾಪ್ತಿಯಲ್ಲಿ ನಿನ್ನೆ ನಡೆದ ಗಲಭೆಯ ಸ್ಥಳಕ್ಕೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ನಿಯೋಗವೊಂದು ಭೇಟಿ ನೀಡಿತ್ತು. ಮಾಧ್ಯಮಗಳಲ್ಲಿ ವರದಿಯಾದಂತೆ ಮತ್ತು ಘಟನೆಯ ವಿವರಗಳನ್ನು ಮೇಲ್ನೋಟಕ್ಕೆ ನೋಡಿದರೆ ಇದೊಂದು ಕೋಮು ಗಲಭೆ ಎಂಬಂತೆ ಕಂಡುಬರುತ್ತದೆ. ಆದರೆ ಸೂಕ್ಷ್ಮವಾಗಿ ಪರಿಸ್ಥಿತಿಯನ್ನು ಅವಲೋಕಿಸಿದರೆ ಇದು ಮೂಲತಃ ಎರಡು ಕೋಮಿನ ಮಧ್ಯದ ಘರ್ಷಣೆ ಅಲ್ಲ, ಇದರ ಹಿಂದಿರುವ ನಿಜವಾದ ಉದ್ದೇಶ, ಕಾರಣಗಳು ಇನ್ನೂ ಬಹಿರಂಗಗೊಳ್ಳಬೇಕಷ್ಟೆ. ಘರ್ಷಣೆ ಸಂಭವಿಸಿದ ಜಾಗದ ಮೇಲಿನ ಒಡೆತನಕ್ಕೆ ಸಂಬಂಧಿಸಿದ ವಿವಾದ ಇದೆಂಬುದು ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾದಂತೆ, ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳೀಯರು ಮತ್ತು ಪೊಲೀಸ್ ಅಧಿಕಾರಿಗಳನ್ನು ಮಾತನಾಡಿಸಿದಾಗ ದೃಢಪಟ್ಟ ಅಂಶವಾಗಿದೆ. ಆದರೆ ಈ ಭೂಮಿಯ ಪ್ರಶ್ನೆಯನ್ನು ಭೂಮಿಯ ಪ್ರಶ್ನೆಯಾಗಿ ಮಾತ್ರ ಉಳಿಸಿಕೊಂಡು, ಕಾನೂನು, ಚರ್ಚೆಗಳ ಮೂಲಕವಷ್ಟೇ ಬಗೆಹರಿಸಿಕೊಳ್ಳಬೇಕಾದುದು ಅಗತ್ಯವಾಗಿದೆ. ಇಂದೂ ಉದ್ವಿಗ್ನತೆಯಲ್ಲಿಯೇ ಇರುವ ಕಾಡುಗೊಂಡನ ಹಳ್ಳಿಯಲ್ಲಿ ಸಿಡಿದ ಕಿಡಿ ಕೋಮುಜ್ವಾಲೆಯಾಗಲು ಅವಕಾಶ ನೀಡಬಾರದು. ಇಂತಹ ಘಟನೆಗಳಿಗಾಗಿಯೇ ಕಾಯುವ ಕೋಮುವಾದೀ ಶಕ್ತಿಗಳಿಗೆ ಅವಕಾಶಗಳನ್ನು ದುರ್ಬಳಕೆ ಮಾಡಿಕೊಳ್ಳಲು ಜನ ಸಾಮಾನ್ಯರು ಎಡೆಮಾಡಿಕೊಡಬಾರದು. ಇಂತಹ ಸಂದರ್ಭದಲ್ಲಿ ಶಾಂತಿ, ಸೌಹಾರ್ದತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಅನಿವಾರ್ಯ ಅಗತ್ಯ ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ ಮತ್ತು ನಗರದ ಜನತೆಗೆ ಮನವಿ ಮಾಡಿಕೊಂಡಿದೆ.

ಈ ಅಂಶಗಳನ್ನು ಸ್ಥಳೀಯ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಚರ್ಚಿಸಿದ ನಿಯೋಗ - ಯಾವುದೇ ಕಾರಣಕ್ಕೂ ಇದೊಂದು ಕೋಮುಘರ್ಷಣೆಗೆ ತಿರುಗದಂತೆ ಕ್ರಮ ವಹಿಸಬೇಕೆಂದು ಮನವಿ ಮಾಡಿದೆ.

ಅದೇ ಸಂದರ್ಭದಲ್ಲಿ ಆಡಳಿತ ಯಂತ್ರ, ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವ ಕೆಲಸವನ್ನು ಪೊಲೀಸ್ ಇಲಾಖೆಗೆ ವಹಿಸಿ ಕೈಕಟ್ಟಿಕೂರಬಾರದು. ತಕ್ಷಣದಲ್ಲಿ ಪೊಲೀಸ್ ಬಂದೋಬಸ್ತಿನಲ್ಲಿ ಶಾಂತಿ ನೆಲೆಸಿದಂತೆ ಕಂಡುಬಂದರೂ ಮುಚ್ಚಿದ ಕೆಂಡವಾಗಿ ರೋಷದಲ್ಲಿ ಗಸ್ತು ತಿರುಗುತ್ತಿದೆ ಎಂಬ ಅನುಭವದ ಘಟನೆಗಳಿಂದ ಅರಿತು ಅಲ್ಲಿಯ ವಿವಾದವನ್ನು ಬಗೆಹರಿಸಬೇಕು. ಸಮಾಜಘಾತುಕ ಶಕ್ತಿಗಳಿಗೆ



ಜನರ ಮಧ್ಯೆ ಕೋಮು ಕಿಚ್ಚು ಹಚ್ಚಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಮನವಿ ಮಾಡುತ್ತದೆ.



ಅಕ್ಟೋಬರ್ ಮಹಾನ್ ಕ್ರಾಂತಿಗೆ ಕಾರ್ಮಿಕ ವರ್ಗದ್ದೇ ನೇತೃತ್ವ. ಕ್ರಾಂತಿ ಬಳಿಕ ಸಮಾನತೆಯ ಸಮಾಜದ ನಿರ್ಮಾಣ, ಅದಕ್ಕೆ ಅವರದ್ದೇ ಸಾರಥ್ಯ. ರೈತಾಪಿ ವರ್ಗದ ಸಖ್ಯತೆ, ಸಮಾಜವಾದಿ ಸಮಾಜದ ನಿರ್ಮಾಣದಲ್ಲಿ ಒಡಹುಟ್ಟಿದ ಈ ಸೋದರ ವರ್ಗಗಳ ನಡುವಿನ ಸಖ್ಯತೆ-ಸೌಹಾರ್ದತೆ ಬಿಂಬಿಸುವ ಸುಂದರ ಮನನೀಯ ಕಥೆ - ಅಲೆಕ್ಸೀಯೇವ್ ರವರ 'ರಶಿಯನ್ ಇತಿಹಾಸದ ಕಥೆಗಳು' ಗ್ರಂಥದಿಂದ

ಅನಿರೀಕ್ಷಿತ ಸಂತಸ

ತೂಲ ನಗರದ ಕಾರ್ಖಾನೆಯೊಂದರ ಕಾರ್ಮಿಕ ಆರ್ತೇಮಿಯ್ ತೆಪ್ಲೋವ್ ತಾನು ಹುಟ್ಟಿದ ಹಳ್ಳಿಗೆ ಒಂದು ಪತ್ರ ಬರೆದ. ಅದೊಂದು ಅಡಕವಾದ ಪತ್ರವಾಗಿತ್ತು. ಅದರಲ್ಲಿ ಆರೇ ಮಾತುಗಳು: "ಅತಿಥಿಗಳು ಬರಲಿದ್ದಾರೆ. ಅನಿರೀಕ್ಷಿತ ಸಂತಸಕ್ಕೆ ಸಿದ್ಧರಾಗಿ ಇರಿ."

ಪತ್ರದ ಒಳ ಸಾರ ಅರ್ಥವಾಗದೆ ರೈತರು ತಲೆ ಕೆರೆದುಕೊಂಡರು, ಭುಜ ಕೊಡಹಿದರು, ಬೆರಗುಗೊಂಡರು.

"ಇದರಲ್ಲಿ ಏನೋ ಅಸ್ಪಷ್ಟತೆ ಇದೆ. ಯಾರು ಬರಲಿದ್ದಾರೆ? ಯಾವ ಉದ್ದೇಶಕ್ಕೆ ಅದಕ್ಕೂ ಹೆಚ್ಚು ಮುಖ್ಯವಾದುದು- ಈ ಅನಿರೀಕ್ಷಿತ ಸಂತಸ ಏನು?"

ಹತ್ತು ದಿನಗಳು ಕಳೆದವು. ಆಮೇಲೆ ಇದ್ದಕ್ಕಿದ್ದಂತೆ ಕಾರ್ಮಿಕರ ನಿಯೋಗವೊಂದು ತೂಲದಿಂದ ಆಗಮಿಸಿತು. ಆದರೆ ಇದೇ ಎಲ್ಲ ಆಗಿರಲಿಲ್ಲ. ಏಕೆಂದರೆ ಅವರು ಬರಿಗೈಲಿ ಬರಲಿಲ್ಲ. ಅವರು ತಮ್ಮೊಂದಿಗೆ ಕುಡುಗೋಲುಗಳು, ಕೊಯ್ಲುಗತ್ತಿಗಳು, ಕೊಡಲಿ ಹಾಗೂ ಕವಲುಗೋಲುಗಳನ್ನೂ, ಬಂಡಿಗಳಿಗಾಗಿ ಕಬ್ಬಿಣದ ಅಚ್ಚುಗಳನ್ನು, ಕೀಲುಗಳನ್ನೂ, ಮೊಳೆ ಮತ್ತಿತರ ಲೋಹದ ಸಣ್ಣಪುಟ್ಟ ಸಾಮಾನುಗಳನ್ನೂ ತಂದಿದ್ದರು. ರೈತರು ಆಶ್ಚರ್ಯದಿಂದ ಬಾಯಿ ಬಿಟ್ಟುಕೊಂಡು ನಿಂತರು.

"ಓಹೋ, ಇದೇನಾ ಅನಿರೀಕ್ಷಿತ ಸಂತಸ!"

ನಿಜಕ್ಕೂ ಆ ಕಾಲದಲ್ಲಿ ಹಳ್ಳಿಗಾಡಿನಲ್ಲಿ ಕುಡುಗೋಲು, ಕೊಯ್ಲುಗತ್ತಿ ಮತ್ತಿತರ ಕಬ್ಬಿಣದ ಸಾಧನ ಸಲಕರಣೆಗಳ ಕೊರತೆ ತೀವ್ರವಾಗಿತ್ತು. ರೈತರು ತುಂಬ ಕಷ್ಟದಿಂದ ಹೇಗೋ ನಿಭಾಯಿಸ ಬೇಕಾಗಿದ್ದಿತು.

ಇವನ್ನೆಲ್ಲ ಕಂಡು ರೈತರ ಕಣ್ಣುಗಳು ಮಿರುಗಿದವು.

"ನೀವು ಇವನ್ನೆಲ್ಲ ನಮಗೆ ಮಾರುವಿರಾ?"

"ಇಲ್ಲ" ಕಾರ್ಮಿಕರು ಹೇಳಿದರು.

"ಹೋಗಲಿ ವಿನಿಮಯ ಮಾಡಿಕೊಳ್ಳುವಿರಾ?"

"ಇಲ್ಲ, ಇಲ್ಲ."

ಹಾಗಾದರೆ ಇವರು ಇವನ್ನೆಲ್ಲ ತಂದುದೇಕೆಂದು ರೈತರು ತಿಳಿಯದಾದರು.



"ನಾವಿದನ್ನು ನಿಮಗೆ ಬಳುವಳಿ ತಂದಿದ್ದೇವೆ" ಕಾರ್ಮಿಕರು ಕೊನೆಗೆ ವಿವರಿಸಿದರು. "ನಮ್ಮ ಕಡೆಯಿಂದ. ಕಾರ್ಮಿಕ ವರ್ಗದಿಂದ."

ರೈತರು ವಿಸ್ಮಯಭರಿತರಾದರು.

"ಉಚಿತವಾಗಿ?"

"ಹೌದು. ಹೃತ್ಪೂರ್ವಕವಾಗಿ. ಕಾರ್ಮಿಕರಿಂದ ಅವರ ವಿಶ್ವಾಸದ ಸಂಕೇತವಾಗಿ. ದಯವಿಟ್ಟು ಸ್ವೀಕರಿಸಿ."

ಇದೇನು ರಮ್ಯ ಕಥೆಯಲ್ಲಿನ ಪ್ರಸಂಗವೋ, ವಾಸ್ತವಿಕವೋ? ಇಂಥ ಉತ್ಕೃಷ್ಟ ಬಳುವಳಿ!

ಅನಂತರ ರೈತರು ಅತಿಥಿಗಳನ್ನು ಸತ್ಕರಿಸುವ ಸಡಗರದಲ್ಲಿ ನಿರತರಾದರು. ಅವರು ಕಾರ್ಮಿಕರನ್ನು ತಮ್ಮ ಕುಟೀರಗಳಲ್ಲಿ ಹಾಕಿ ಸಿದ್ಧಗೊಳಿಸಿದ ಮೇಜುಗಳ ಬಳಿಗೆ ಕರೆದೊಯ್ದರು.

ಕಾರ್ಮಿಕರು ಹೊಟ್ಟೆ ತುಂಬ ತಿಂದರು, ಕುಡಿದರು.

"ತುಂಬ ಧನ್ಯವಾದಗಳು. ಇನ್ನು ನಾವು ಹೊರಡುತ್ತೇವೆ. ಕಾರ್ಖಾನೆಗೆ ಹಿಂದಿರುಗಬೇಕು."

ಅತಿಥಿಗಳು ಬಾಗಿ ವಂದಿಸಿ ಹೊರಟರು.

"ಇದು ನಿಜಕ್ಕೂ ಅದ್ಭುತವಲ್ಲವೆ!" ರೈತರಿಗೆ ಆಶ್ಚರ್ಯದ ಭಾವಾತಿರೇಕದಿಂದ ಹೊರಬರಲು ಇನ್ನೂ ಸಾಧ್ಯವಾಗಿರಲಿಲ್ಲ. "ಹೃತ್ಪೂರ್ವಕವಾಗಿ! ಬೇರೆ ಯಾವ ಉದ್ದೇಶಗಳೂ ಇಲ್ಲದೆ! ಸರಳವಾಗಿ ಹೇಳಬಹುದಾದರೆ ಇದೊಂದು ಪವಾಡವೆ!"

ಇದು ಜರುಗಿದ ತರುಣದಲ್ಲೇ ಆರ್ತೇಮಿಯ್ ತೆಪ್ಲೋವೇ ಸ್ವತಃ ಹಳ್ಳಿಗೆ ಬಂದ.

"ಏನು, ಕುಡುಗೋಲುಗಳೂ ಕೊಯ್ಲುಗತ್ತಿಗಳೂ ಹೇಗಿವೆ? ಅದು ನಿಮಗೆ ಅನಿರೀಕ್ಷಿತ ಸಂತಸವಾಗಿರಲಿಲ್ಲವೆ?"


"ಇಲ್ಲದೆ ಏನು! ಇಲ್ಲದೆ ಏನು!" ರೈತರು ಉತ್ತರವಾಗಿ ಹೇಳಿದರು. "ಕೊಯ್ಲುಗತ್ತಿಗಳು ಬಹಳ ಸೊಗಸಾಗಿವೆ. ಕುಡುಗೋಲುಗಳೂ ಕವಲುಗೋಲುಗಳೂ ತುಂಬ ಚೆನ್ನಾಗಿವೆ. ಇನ್ನು ಅನಿರೀಕ್ಷಿತ ಸಂತಸದ ಬಗೆಗೆ ಹೇಳುವುದಾದರೆ, ಇವಕ್ಕಿಂತ ನಮಗೆ ಹೆಚ್ಚು ಸಂತಸ ತಂದುದೆಂದರೆ ಕಾರ್ಮಿಕ ವರ್ಗ ನಮ್ಮ ಮಿತ್ರನಾಗಿದೆ, ನಮ್ಮ ಒಡಹುಟ್ಟಿದ ಸೋದರನಾಗಿದೆ, ಎಂಬ ಸತ್ಯ ಸಂಗತಿ."

ಸೆನ್ಸಾರ್ ಮಂಡಳಿಯಿಂದ ವಜಾಗೊಂಡ ಖೇರ್ ಮಹಾಶಯ ತನಗೇನೋ ಭಾರಿ ಅನ್ಯಾಯವಾಗಿದೆಯೆಂದೂ ಬೊಬ್ಬೆ ಇಡುತ್ತಿದ್ದಾನೆ. ಚಾರಿತ್ರ್ಯವಧೆಯಾಯಿತು ಎಂಬ ಖೇರ್ ಅಧ್ಯಕ್ಷನಾಗಿದ್ದಾಗ ಯಾರ ಸೇವೆ ಸಲ್ಲಿಸಿದ? ಈ ಸೆನ್ಸಾರ್ ಮಂಡಳಿಯ ಸಾಚಾತನಗಳೇನು?

ಸೆನ್ಸಾರ್ ಮಂಡಳಿಯ ಸಾಚಾತನ

'ಫ಼ಾರೆನ್ ಹೀಟ್ 9/11' ಹೆಸರು ಕೇಳಿದ್ದೀರಲ್ಲವೇ? ಹೌದು. ಅದೊಂದು ಚಲನಚಿತ್ರದ ಹೆಸರು. ಅಮೆರಿಕೆಯ ಮೈಕೆಲ್ ಮೂರ್ ಅದರ ನಿರ್ಮಾಪಕರು. ಅಮೆರಿಕನ್ ಸರ್ಕಾರ ನಡೆಸುತ್ತಿರುವ 'ಭಯೋತ್ಪಾದನೆಯ ವಿರುದ್ಧ ಸಮರ'ದ ಎಡಬಿಡಂಗಿತನವನ್ನು ಅತ್ಯಂತ ಪ್ರಖರವಾಗಿ ಬಿಂಬಿಸುವ ಚಿತ್ರ. ಆದಾಗ್ಯೂ, ಈ ಚಿತ್ರ ಅಮೆರಿಕೆಯಲ್ಲಿ ಅತ್ಯಂತ ಅಭೂತಪೂರ್ವ ಯಶಸ್ಸು ಗಳಿಸಿದೆ. ವ್ಯಾಪಕವಾಗಿ ಪ್ರದರ್ಶಿತಗೊಳ್ಳುತ್ತಿರುವ ಈ ಚಿತ್ರದ ಪ್ರಭಾವ ಎಷ್ಟಿದೆಯೆಂದರೆ, ನವೆಂಬರ್ ತಿಂಗಳಲ್ಲಿ ನಡೆಯಲಿರುವ ಅಮೆರಿಕೆಯ ಅಧ್ಯಕ್ಷೀಯ ಚುನಾವಣೆಗಳ ಮೇಲೆ ನೇರ ಪ್ರಭಾವ ಬೀರುವ ಸಾಧ್ಯತೆಗಳಿವೆ.

ನಮ್ಮಲ್ಲಾದರೋ ಪರಿಸ್ಥಿತಿ ಇದಕ್ಕೆ ತದ್ವಿರುದ್ಧ. ನಮ್ಮಲ್ಲೂ ಗಂಭೀರ ವಿಷಯಗಳ ಮೇಲೆ ಬೆಳಕು ಚೆಲ್ಲುವ ಸಾಕ್ಷ್ಯಚಿತ್ರ/ಚಲನಚಿತ್ರಗಳು ಸಾಕಷ್ಟು ತಯಾರಾಗುತ್ತವೆ. ಆ ಮೂಲಕ ವ್ಯವಸ್ಥೆಯಲ್ಲಿನ ದೋಷಗಳನ್ನು, ದಟ್ಟೈಸಿರುವ ಅಸಮಾನತೆಗಳನ್ನು, ಅಂತರ್ಗತವಾಗಿರುವ ಶೋಷಣೆಯ ದೌರ್ಜನ್ಯಗಳನ್ನು, ವಿಜೃಂಭಿಸುತ್ತಿರುವ ಕ್ರೌರ್ಯಗಳನ್ನು ಎಳೆಎಳೆಯಾಗಿ ತೆರೆದು ತೋರಿಸುವ ಪ್ರಯತ್ನಗಳು ವಿಪುಲವಾಗಿಯೇ ನಡೆದಿವೆ. ಆದರೆ ಬಹುತೇಕ ಇಂತಹ ಚಿತ್ರಗಳು ಸಾರ್ವಜನಿಕವಾಗಿ ಪ್ರದರ್ಶಿತವಾಗುವುದಕ್ಕೆ ಬಹಳಷ್ಟು ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಸೆನ್ಸಾರ್ ಮಂಡಳಿಯ ಅನುಮತಿ ಪಡೆಯಲು ಇನ್ನಿಲ್ಲದ ಪರದಾಟ/ಪಾಡು ಅನುಭವಿಸಬೇಕಾಗುತ್ತದೆ. ನಮ್ಮ ಸೆನ್ಸಾರ್ ಮಂಡಳಿ ಇನ್ನೂ ಹಳೆಯ ಶತಮಾನದ ಗುಂಗಿನಲ್ಲೇ ಇದೆ. ಸೆನ್ಸಾರ್ ನಿಯಮಗಳೂ ಅಷ್ಟೇ. ಓಬೀರಾಯನ ಕಾಲದವು. ಆ ನಿಯಮಗಳನ್ನು ಬಳಸಿ, ಯಾವುದೇ ವಸ್ತುನಿಷ್ಠ, ಚಲನಚಿತ್ರ ಕೊನೆಗೂ ತೆರೆಕಾಣದಂತೆ ನೋಡಿಕೊಳ್ಳುವುದೇ ಸೆನ್ಸಾರ್ ಮಂಡಳಿಯ ಜಾಯಮಾನವಾಗಿಬಿಟ್ಟಿದೆ. ವ್ಯವಸ್ಥೆಗೆ ಕಿರಿಕಿರಿಯೆನಿಸುವ ಅಥವಾ ಆಳುವ ಜನಕ್ಕೆ ಅಪಥ್ಯವೆನಿಸುವ ಭಾಗಗಳಿಗೆ ಕತ್ತರಿ ಪ್ರಯೋಗ ಮಾಡುವುದು ಮಾತ್ರವಲ್ಲ, ಬಹಳಷ್ಟು ಸಂದರ್ಭಗಳಲ್ಲಿ ಇಡೀ ಚಲನಚಿತ್ರಕ್ಕೇ ಅನುಮತಿ ಪತ್ರ ನಿರಾಕರಿಸುವುದು ಮಾಮೂಲಿನ ಸಂಗತಿಯಾಗಿದೆ. ಖ್ಯಾತ ಚಿತ್ರ ತಯಾರಕ ರಾಕೇಶ್ ಶರ್ಮಾರವರ ಸಾಕ್ಷ್ಯಚಿತ್ರ Final Solution (ಅಂತಿಮ ಪರಿಹಾರ)ದ ಉದಾಹರಣೆ ಇಲ್ಲಿ ಪ್ರಸ್ತುತ. ಉಗ್ರ ಧಾರ್ಮಿಕ ದ್ವೇಷ ಹಾಗೂ ಸಾಮಾಜಿಕ ಧ್ರುವೀಕರಣಗಳು ಹೇಗೆ ಗುಜರಾತಿನ 2002 ರ ಗಲಭೆಗಳಿಗೆ ಕಾರಣವಾದವು ಎಂಬುದನ್ನು ಅತ್ಯಂತ ಪ್ರಖರವಾಗಿ ಬಿಂಬಿಸಿದ ಚಿತ್ರ ಅದು. ಇಡೀ ದೇಶದ, ಅಷ್ಟೇಕೆ ಜಗತ್ತಿನ, ಪ್ರಜ್ಞಾವಂತ ಜನ ಸಮುದಾಯವನ್ನು ತಲ್ಲಣಗೊಳಿಸಿದ ಗುಜರಾತಿನ ಘಟನೆಗಳಿಗೆ ವಾಸ್ತವದ ಕನ್ನಡಿ ಹಿಡಿವ ಒಂದು ಯಶಸ್ವೀ ಪ್ರಯತ್ನ. ವಿದೇಶಗಳಲ್ಲೆಲ್ಲಾ ಪ್ರದರ್ಶಿತವಾಗಿ ವಿಪುಲ ಮನ್ನಣೆ, ಅಪಾರ ಪ್ರಶಂಸೆ ಗಳಿಸಿದ ಈ ಸಾಕ್ಷ್ಯ ಚಿತ್ರಕ್ಕೆ ಭಾರತದ ಸೆನ್ಸಾರ್ ಮಂಡಳಿ ಅನುಮತಿ ಪತ್ರ ನೀಡಲಿಲ್ಲ. ಅದು ನೀಡಿದ ಸಬೂಬು ಏನು ಗೊತ್ತೆ? 'ಆ ಚಿತ್ರ ಹಿಂದೂ ಮುಸಲ್ಮಾನರ ನಡುವಿನ ಕೋಮುಸಾಮರಸ್ಯವನ್ನು ಹಾಳುಗೆಡುವುತ್ತದಂತೆ ಹಾಗೂ ಗುಜರಾತಿನ ಘಟನಾವಳಿಗಳ ವಿಕೃತ ಚಿತ್ರಣ ನೀಡುವ ಮೂಲಕ ಕೋಮು ಭಾವನೆಗಳನ್ನು ಕೆರಳಿಸಿ, ಹಿಂದೂ ಮುಸಲ್ಮಾನರ ನಡುವೆ ಸಂಘರ್ಷಗಳಿಗೆ ಕುಮ್ಮಕ್ಕು ನೀಡುತ್ತದಂತೆ! ಆದರೆ ಅದೇ ಸೆನ್ಸಾರ್ ಮಂಡಳಿ 'ರಾಮ ಸೇವಕ್ ಅಮರ್ ರಹೋ' ಎಂಬ ಚಿತ್ರದ ಲಕ್ಷಾಂತರ ಪ್ರತಿಗಳನ್ನು ಹಂಚಲು ವಿಶ್ವ ಹಿಂದೂ ಪರಿಷತ್‌ಗೆ ಅನುಮತಿ ನೀಡಿತು. ಅಲ್ಲದೆ ಗುಜರಾತಿನ ಮೋದಿ ಸರ್ಕಾರ 'ವಾಸ್ತವಕ್ಕೆ ಎರಡು ನಿಮಿಷಗಳು' (Two minuts to truth) ಎಂಬ ಚಿತ್ರ ಸುರುಳಿಯನ್ನು ಬಿಡುಗಡೆ ಮಾಡಲೂ ಅನುಮತಿ ನೀಡಿತು. ಈ ಚಿತ್ರ ಸುರಳಿಯ ವಿತರಣೆಯಾಗಿದ್ದಾದರೂ ಹೇಗೆ ಗೊತ್ತೆ? 'ಇಂಡಿಯಾ ಟುಡೆ' ಸಾಪ್ತಾಹಿಕ ಪ್ರತಿಯೊಂದಿಗೆ ಉಚಿತವಾಗಿ ! ಇದು ನಡೆದಿದ್ದು 2002 ರಲ್ಲಿ.


ಅನುಪಮ್ ಖೇರ್

ಖೇರ್ ಬೊಬ್ಬೆ!

ಸೆನ್ಸಾರ್ ಮಂಡಳಿಯ ಇಂತಹ ಇಬ್ಬಂದಿತನದ ಪ್ರದರ್ಶನ ಅವ್ಯಾಹತವಾಗಿಯೇ ನಡೆದಿದೆ. ಸರ್ಕಾರ ಯಾವುದೇ ಇರಲಿ. ಸೆನ್ಸಾರ್ ಮಂಡಳಿಯ ವೈಖರಿಯಲ್ಲಿ ಮಾತ್ರ ಯಾವುದೇ ಬದಲಾವಣೆ ಕಂಡುಬಂದಿಲ್ಲ. ಇತ್ತೀಚಿಗೆ ಸೆನ್ಸಾರ್ ಮಂಡಳಿಯ ಅಧ್ಯಕ್ಷಗಿರಿಯನ್ನು ಕಳೆದುಕೊಂಡ ಅನುಪಮ್ ಖೇರ್ ಎಂಬ ಮಹಾಶಯ ತನಗೇನೋ ಭಾರಿ ಅನ್ಯಾಯವಾಗಿದೆ, ತನ್ನ ಚಾರಿತ್ರ್ಯವಧೆ ನಡೆದಿದೆ ಎಂಬಂತೆ ಬೊಬ್ಬೆ ಹಾಕತೊಡಗಿದ್ದಾನೆ. ಭಾರತೀಯ ಜನತಾ ಪಕ್ಷದ ನೇತೃತ್ವದ ರಾಷ್ಟ್ರೀಯ ಜನತಾಂತ್ರಿಕ ಒಕ್ಕೂಟದ ಸರ್ಕಾರ ಈತನನ್ನು ಅಧ್ಯಕ್ಷನಾಗಿ ನೇಮಿಸಿತ್ತು. ಆ ಸರ್ಕಾರದ ಅವಧಿಯಲ್ಲಿ, ಇತರ ಸಂಸ್ಥೆಗಳಲ್ಲಿ ನಡೆಸಿದಂತೆಯೇ, ಸೆನ್ಸಾರ್ ಮಂಡಳಿ ಮತ್ತು ಪ್ರಾದೇಶಿಕ ಸಲಹಾ ಗುಂಪುಗಳಲ್ಲಿ (Regional Advisory Panels) ಅಧಿಕಾರದ ಚುಕ್ಕಾಣಿ ಹಿಡಿದಿದ್ದ ರಾಜಕೀಯ ಪಕ್ಷದ ಹಿಂಬಾಲಕರನ್ನೇ ತುರುಕಿಸಲಾಯಿತು. ಕಂದಾಚಾರ, ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ವೈಭವೀಕರಿಸುವ ಜತೆಗೆ ಆಧುನಿಕತೆಯ ಎಲ್ಲಾ ಸ್ವರೂಪಗಳನ್ನು ತುಚ್ಛೀಕರಿಸುವ ಮನೋಧರ್ಮವನ್ನು ಮೈಗೂಡಿಸಿಕೊಂಡ ಈ ಜನ, ಅಂತಹ ಪ್ರವೃತ್ತಿಯನ್ನೇ ಬೆಳೆಸುವ ಕಾಯಕದಲ್ಲಿ ತೊಡಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಆದುದರಿಂದಲೇ ಆನಂದ್ ಪಟವರ್ಧನ್, ರಮೇಶ್ ಪಿಂಪ್ಲೆ, ರಾಕೇಶ್ ಶರ್ಮಾ, ಪ್ರಕಾಶ್ ಝಾ ರವರಂತಹ ಪ್ರತಿಭಾನ್ವಿತರ ಚಿತ್ರಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಅಡ್ಡಿ ಆತಂಕಗಳೇ ಸೆನ್ಸಾರ್ ಮಂಡಳಿಯಿಂದ ಎದುರಾದವು.

ಇದೇ ಖೇರ್ ಮಹಾಶಯನ ಅಧ್ಯಕ್ಷಗಿರಿಯಲ್ಲಿ, ಸೆನ್ಸಾರ್ ಮಂಡಳಿ ಇತ್ತೀಚಿಗಿನ 'ವಿಮೋಚನೆಗಾಗಿ ಚಿತ್ರ'ಗಳ ಉತ್ಸವದ ವಿರುದ್ಧ ತೆಗೆದುಕೊಂಡ ಕ್ರಮಗಳಂತೂ ಉಗ್ರ ಹಾಗೂ ವ್ಯಾಪಕ ಟೀಕೆಗೆ ಒಳಗಾಗಿವೆ. ಈ ಉತ್ಸವ ನಡೆದಿದ್ದು ಬೆಂಗಳೂರಿನಲ್ಲಿ. ಅಂತರ್‌ರಾಷ್ಟ್ರೀಯ ಮನ್ನಣೆ ಪಡೆದ 29 ಸಾಕ್ಷ್ಯಚಿತ್ರಗಳನ್ನು ಈ ಉತ್ಸವದಲ್ಲಿ ಪ್ರದರ್ಶಿಸಲು ಆಯೋಜಿಸಲಾಗಿತ್ತು. ಇಂತಹ ಉತ್ಸವಗಳಲ್ಲಿ ಸೆನ್ಸಾರ್ ಪರವಾನಗಿ ಪಡೆಯದಿರುವ ಚಿತ್ರಗಳೂ ಸಹಾ ಪ್ರದರ್ಶಿತಗೊಳ್ಳುವುದು ಮೊದಲಿನಿಂದಲೂ ನಡೆದು ಬಂದಿರುವ ವಾಡಿಕೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಇಂತಹ ವಿನಾಯಿತಿ ನೀಡುವ ಸಂಪ್ರದಾಯ ಪಾಲಿಸಿಕೊಂಡು ಬರುತ್ತಿದೆ. ಬೆಂಗಳೂರಿನ ಚಿತ್ರೋತ್ಸವದಲ್ಲಿ ಪ್ರದರ್ಶಿತಗೊಳ್ಳಲಿರುವ 29 ಚಿತ್ರಗಳ ಪೈಕಿ 11 ಚಿತ್ರಗಳು ಸೆನ್ಸಾರ್ ಪರವಾನಗಿ ಪಡೆದಿಲ್ಲ ಎಂಬ ನೆಪವೊಡ್ಡಿ, ಪ್ರಾದೇಶಿಕ ಸೆನ್ಸಾರ್ ಮಂಡಳಿ ಹಾಗೂ ಅದರ ಸಲಹಾ ಸಮಿತಿ ಸದಸ್ಯರು ಇಲ್ಲದ ರಂಪಾಟ ನಡೆಸಿದರು. ಪೊಲೀಸರಿಗೆ ದೂರು ನೀಡಿ ಪ್ರದರ್ಶನವನ್ನು ತಡೆಹಿಡಿಯುವಂತೆ ಒತ್ತಡ ಹೇರಲಾಯಿತು. ಪ್ರದರ್ಶನ ಆಯೋಜಿಸಲಾಗಿದ್ದ ಜೆಎಸ್ಎಸ್ ಪ್ರೇಕ್ಷಾಗೃಹದ ವ್ಯವಸ್ಥಾಪಕರಿಗೆ ಬೆದರಿಕೆ ಒಡ್ಡಲಾಯಿತು. ಅಷ್ಟು ಮಾತ್ರವಲ್ಲ, ಸಲಹಾ ಮಂಡಳಿಯ ಸದಸ್ಯರು ಎಂದು ಹೇಳಿಕೊಂಡ ಮೂವರು ವ್ಯಕ್ತಿಗಳು ತಮ್ಮ ಹಿಂಬಾಲಕರ ಪಡೆಯೊಂದಿಗೆ ಪ್ರದರ್ಶನ ನಡೆಯುತ್ತಿದ್ದ ಪ್ರೇಕ್ಷಾಗೃಹಕ್ಕೆ ನುಗ್ಗಿ ದಾಂಧಲೆ ನಡೆಸುವ ಮಟ್ಟಕ್ಕೂ ಹೋದರು. ಇಷ್ಟಕ್ಕೂ ಈ ಎಲ್ಲಾ ಚಿತ್ರಗಳು, ದೇಶದ ಇತರ ನಗರಗಳಲ್ಲಿ ಆದಾಗಲೇ ಪ್ರದರ್ಶನಗೊಂಡಿದ್ದವು! ಬೆಂಗಳೂರಿನಲ್ಲಿ ಮಾತ್ರ ಯಾಕೆ ಪ್ರದರ್ಶನಕ್ಕೆ ಅಡ್ಡಿ ಎಂಬ ಪ್ರಶ್ನೆಗೆ ಈ ಜನರಲ್ಲಿ ಉತ್ತರವಿರಲಿಲ್ಲ. ಅನುಪಮ್ ಖೇರ್‌ನ ಅಧ್ಯಕ್ಷಗಿರಿಯ ಸೆನ್ಸಾರ್ ಮಂಡಳಿಯ ನೈಜ ಸ್ವರೂಪವೇನು ಎಂದು ತಿಳಿಯಲು ಇದಕ್ಕಿಂತ ಬೇರೆ ನಿದರ್ಶನ ಬೇಕೇನು?

- ಎಂ.ಆರ್.ಶೆಣೈ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH